# ಅಖಿಲ ಭಾರತ ಪತ್ರಿಕೆ


## ಏಪ್ರಿಲ್ 2019



# ಜ್ಯೋತಿರ್ಮಯತೆ, ಪ್ರೇರಣೆ, ಒಳನೋಟಗಳು

## (ಶ್ರೀಮಾತೆಯವರು ಹೇಳಿದ ಕಥೆಗಳು)

ಬೆಲೆ : 15/-



ಊಹೆಯಾಚೆಗಿನ ಗಡಿಗಳೆದೆ ಮೇಲೆ ಸೇರಿತ್ತು ಅಂದು ಸಭೆಯು
ಸೃಷ್ಟಿಮೂಲದಾ ದೇವಗಣಗಳಲಿ ತಾತ್ತ್ವಿಕದ ಮಾತುಕತೆಯು
ನಿಶ್ಶೂನ್ಯದೊಡನೆ ಸಾಕಾರಗೊಂಡು, ಅವಳಾತ್ಮ ಚರ್ಚೆ ನಡೆಸಿ
ಸಂಘರ್ಷದಲ್ಲು ಉದಿಸಿತ್ತು, ಭಯದ ಪರದೆಯನು ಹಿಂದೆ ಸರಿಸಿ

ಖಚಿತದಲಿ ಅವಳ ಜೀವ ಎದುರಿಸಿದೆ ಆಕಾರರಹಿತ ಹೇತು
ಒಂಟಿ ಭಾವದಲಿ ತುಲನೆ ಮಾಡುತಿಹ ವಿಶ್ವಕ್ಕೆ ಎದುರು ನಿಂತು.

[ಸಾವಿತ್ರಿ ಪದ್ಯಾನುವಾದ: ದಳ ೧ ರೇಣು ೨ ಪುಟ ೧೪]

**ಅಖಿಲ ಭಾರತ ಪತ್ರಿಕೆ**
**ಏಪ್ರಿಲ್ 2019**

ಸಂಪುಟ: 29 ಸಂಚಿಕೆ: 04

**ಪರಿವಿಡಿ**

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ಹೆಗಡೆ–ಕುಮಟಾ – 581 330.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ
ಶ್ರೀ ಪುರುಷೋತ್ತಮ ಗಲಗಲಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# “ಜ್ಯೋತಿರ್ಮಯತೆ, ಪ್ರೇರಣೆ, ಒಳನೋಟಗಳು”

(ಶ್ರೀಮಾತೆಯವರು ಹೇಳಿದ ಕಥೆಗಳು)

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಜ್ಯೋತಿರ್ಮಯತೆ** 4
ಅನು: ಶ್ರೀ ಪುಟ್ಟು ಕುಲಕರ್ಣಿ
ಅನು: ಡಾ॥ ಉದಯ ರವಿ ಶಾಸ್ತ್ರಿ

**ಪ್ರೇರಣೆ** 35
ಅನು: ಪ್ರೊ. ವೀರಭದ್ರಪ್ಪ ಕೆ.

**ಒಳನೋಟಗಳು** 45
ಅನು: ಡಾ॥ ಬಿ.ಆರ್. ಭೀಡ
ಅನು: ಡಾ॥ ಮಹಾದೇವ ಸಕ್ರಿ

## ಸಂಪಾದಕರ ಟಿಪ್ಪಣಿ

ಶ್ರೀಮಾತೆಯವರ ಸಂಭಾಷಣೆ ಸಮಯದಲ್ಲಿ ಹೇಳಿರುವ ಕೆಲವು ಕಥೆಗಳನ್ನು ಈ ಸಂಚಿಕೆಯಲ್ಲಿ ಪ್ರಕಾಶನಗೊಳಿಸಲಾಗುತ್ತಿದೆ. ಈ ಎಲ್ಲ ಕಥೆಗಳೂ ನೈಜ ಘಟನೆಗಳಾಗಿವೆ. ಆ ಘಟನೆಗಳಿಗೆ ಸ್ವತಃ ಶ್ರೀಮಾತೆಯವರೇ ಸಾಕ್ಷಿಯೂ ಆಗಿದ್ದಾರೆ. ಹೀಗಾಗಿ ಇಲ್ಲಿ ಮತ್ತೂ ಘನತರವಾದ ಮೌಲ್ಯವನ್ನು ಹೊಂದಿವೆ. ಹೀಗಾಗಿ ಇವು ಕೇವಲ ರಹಸ್ಯಮಯ ಘಟನೆಗಳನ್ನು ವಿವರಿಸುವ ಪ್ರತಿಮಾತ್ಮಕ ಕಥಾನಕಗಳಾಗಿರದೇ, ವಿಶೇಷವಾದ ಅಂತರಾರ್ಥವನ್ನೂ ಹೊಂದಿವೆ.

ಅವರು ಹೇಳಿರುವ ಸೃಷ್ಟಿಯ ಮೂಲವನ್ನು ತಿಳಿಸುವ ಅವರ ಕಥೆಗಳು ಕೇವಲ ಪುಸ್ತಕವನ್ನು ಓದುವದರ ಮೂಲಕ ಬಂದುದಾಗಿರುವದಿಲ್ಲ. ಅದು ಅನುಭವದ ಮೂಲಕವೇ ಮತ್ತು ಸಾಕ್ಷಾತ್ಕಾರದ ಮೂಲಕ ಅನುಭೂತಿಗೊಳಿಸಿ–ಕೊಂಡಿರುವ ಸಂಗತಿಯಾಗಿದೆ. ಶ್ರೀಮಾತೆಯವರ ಸುದೀರ್ಘವಾದ ಆಧ್ಯಾತ್ಮಿಕ ಪಯಣದಲ್ಲಿ ಅವರು ಸಾಕ್ಷೀಕರಿಸಿಕೊಂಡಿರುವ ಘಟನೆಗಳು ಈ ಕಥೆಗಳಾಗಿವೆ.

ಇಲ್ಲಿರುವ ಎಲ್ಲ ಕಥೆಗಳೂ ನಮಗೆ ಆ ದಿವ್ಯ ಪಥದ ಬಗೆಗೆ ಹಾಗೂ ಸರ್ವ ವಸ್ತುಗಳನ್ನೂ ನಾವು ಸಾಕ್ಷೀ ಹಂತದಲ್ಲಿ ಗಮನಿಸುತ್ತಿದ್ದಾಗಲೂ, ಅದು ರೂಪಿಸಿಕೊಡುವ ಅನುಭಾವವನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳಲು ನಮಗೆ ಸುಲಭ ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ತುಂಬ ಸಾಹಸ ಪಡಬೇಕಾಗಿದೆ. ಅವೆಲ್ಲವೂ ನಮ್ಮನ್ನು ಪ್ರಜ್ಞಾವಂತರನ್ನಾಗಿಸುವ ಮೂಲಕ, ನಾವು ಆ ಪರಮೋಚ್ಚ ಜಾಗೃತೆಯನ್ನು ಹೊಂದುವದರ ಬಗೆಗೆ ಸಹಾಯಕವಾಗಿವೆ. ಇದರ ಜೊತೆಗೆ, ನೈಜ ಜೀವನದ ಘಟನೆಗಳನ್ನಾಧರಿಸಿದ ಈ ಕಥೆಗಳು ಸಹಿತ, ಜೀವನದಲ್ಲಿ ಯಾವುದೂ ಕ್ಷುಲ್ಲಕವಲ್ಲ ಹಾಗೂ ನಗಣ್ಯವಾದುದಲ್ಲಿ ಎನ್ನುವದನ್ನು ತೋರಿಸಿಕೊಡುತ್ತವೆ. ಅದರಲ್ಲೂ ಈ ಕ್ಷುಲ್ಲಕ ಎನಿಸುವ ಘಟನೆಗಳೇ ಅತ್ಯಂತ ಅರ್ಥಪೂರ್ಣವಾಗಿ, ಅಗಾಧವಾದ ಹಿನ್ನೆಲೆಯನ್ನು ಹೊಂದಿದ್ದು ಜೊತೆಗೆ ಉದಾತ್ತವಾದ ದೃಷ್ಟಿಕೋನವನ್ನೂ ಹೊಂದಿವೆ.

*



ನನ್ನ ಮಿತ್ರರ ಪೈಕಿ ಓರ್ವನು ಭಾರತವನ್ನು ಸಂದರ್ಶಿಸಲು ನಿರ್ಧರಿಸಿದ್ದಲ್ಲದೇ, ಅವನ ಪ್ರವಾಸಕ್ಕೆ ಬೇಕಾದ ಸೂಕ್ತ ವಿವರಗಳನ್ನು ಕೊಡುವಂತೆ ಕೋರಿಕೆ ಇಟ್ಟಿದ್ದನು. ಆ ಸಂದರ್ಭದಲ್ಲಿ ಅಲ್ಲಿಯೇ ಇದ್ದ ಓರ್ವ ವೃದ್ಧ ಮಹಿಳೆಯು – ಅವಳು ಯಾವಾಗಲೂ ಶಂಕಾಮನೋಭಾವದಿಂದಲೇ ಕೂಡಿರುತ್ತಿದ್ದಳು – ಅವನನ್ನು ಕುರಿತು, 'ಏನು? ಇಂಡಿಯಾದಲ್ಲಿಯೇ? ಯಾರು ಆತ್ಮಗಳ ಕುರಿತು ಗಣನೆಯನ್ನು ಮಾಡುತ್ತಾರೆಯೋ ಅವರ ವಿಷಯವೇ?' ಎಂದು ಕೇಳಿದ್ದಳು. ಅದಕ್ಕೆ ಅವನು, 'ಹೌದು', 'ಹೌದು'..ಎಂದಿದ್ದ. ಹಾಗಾದರೆ ಅಲ್ಲಿ ಇನ್ನೂ ಅಂತಹ ಎಷ್ಟು ವ್ಯಕ್ತಿಗಳು ಇದ್ದಾರೆ? ಎಂದು ಆ ವೃದ್ಧ ಮಹಿಳೆ ಪ್ರಶ್ನಿಸಿದ್ದಕ್ಕೆ ಅವನು ಉತ್ತರಿಸಿದ್ದು "ಕೇವಲ ಓರ್ವ ವ್ಯಕ್ತಿ ಮಾತ್ರ" ಎಂದಿದ್ದ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/48** **– ಶ್ರೀಮಾತೆ**

# ಜ್ಯೋತಿರ್ಮಯತೆ

– ಅನುವಾದ: ಪುಟ್ಟು ಕುಲಕರ್ಣಿ

## ಸೃಷ್ಟಿಯ ಕಥೆ

ಯಾವಾಗ ಆ ಪರಮದೇವನು ತನ್ನನ್ನೇ ತಾನು ಪ್ರಕಟಪಡಿಸಿಕೊಂಡು ತನ್ನನ್ನೇ ತಾನು ದೃಷ್ಟಿಸಲು ಸಾಧ್ಯವಾಗುವಂತೆ ಮಾಡಲು ನಿರ್ಧರಿಸಿದನೋ, ಆಗ ಪ್ರಪ್ರಥಮವಾಗಿ ಅವನಲ್ಲಿಯೇ ಅವನ ಈ ಜಗತ್ತಿನ ಬಗೆಗಿನ ಜ್ಞಾನವನ್ನು ಹಾಗೂ ಅದನ್ನು ಸೃಷ್ಟಿಸಲು ಬೇಕಾದ ಸಾಮರ್ಥ್ಯವನ್ನು ಪ್ರಕಟಪಡಿಸಿಕೊಂಡನು. ಈ ಜ್ಞಾನ–ಚೈತನ್ಯವು (Knowledge Consciousness) ಮತ್ತು ಬಲವು ಆ ರೀತಿಯ ಕರ್ತವ್ಯಕ್ಕೆ ತೊಡಗಿಕೊಂಡಿತು; ಮತ್ತೆ ಮೇಲಾಗಿ ಆ ಪರಮೋಚ್ಚವಾದ ಸಂಕಲ್ಪದಲ್ಲಿ ಒಂದು ಯೋಜನೆಯೂ ಇತ್ತು. ಹಾಗೂ ಆ ಯೋಜನೆಯ ಪ್ರಥಮ ತತ್ತ್ವವೂ ಸಹಿತ ಅತ್ಯಾವಶ್ಯವಾಗಿರುವ ತೋಷವನ್ನೂ ಮತ್ತು ಅವಶ್ಯವಿರುವ ಮುಕ್ತತೆಯನ್ನು ಅಭಿವ್ಯಕ್ತಗೊಳಿಸುವದಾಗಿತ್ತು. ಇದು ಸೃಷ್ಟಿಯ ರಚನೆಗೆ ಕಾರಣವಾಗಿರುವ ಅತ್ಯಂತ ರೋಚಕಪೂರ್ಣವಾಗಿರುವ ಲಕ್ಷಣವೆಂದು ನಿರ್ಧರಿತವಾಗಿದೆ. ಆದ್ದರಿಂದ ಈ ರೂಪಗಳಲ್ಲಿ ಆಹ್ಲಾದವನ್ನೂ ಮತ್ತು ಮುಕ್ತತ್ವವನ್ನೂ ಅಭಿವ್ಯಕ್ತಗೊಳಿಸಲು ಮಧ್ಯವರ್ತಿಗಳ ಅವಶ್ಯಕತೆ ಇತ್ತು. ಮತ್ತೆ ಅಲ್ಲಿ, ಪ್ರಥಮದಲ್ಲಿ "ಅಸ್ತಿತ್ವದ ನಾಲ್ಕು ಸಿದ್ಧಾಂತ"ಗಳು ಈ ವಿಶ್ವದ ಪ್ರಗತಿಗಾಗಿ ಉತ್ಪನ್ನಗೊಂಡವು. ಈ ಪ್ರಗತಿಯು ಆ ಪರಮೋಚ್ಚದಲ್ಲಿಯೇ ಅಂತರ್ಗತವಾಗಿರುವ ಅಗ್ರಗತಿಶೀಲ ವಸ್ತುನಿಷ್ಠತೆಯ (ಪರಾಕ್‌ವೃತ್ತತೆಯ) (Progressive Objectivistion) ಮೂಲಕವೇ ಪ್ರಾರಂಭಗೊಂಡಿರುತ್ತದೆ. ಈ ಶುದ್ಧ ಸನ್ಮಾತ್ರ(ಸತ್ತೆ)ಗಳು ಅವುಗಳ ಅಸ್ತಿತ್ವಗಳ ತತ್ತ್ವದಲ್ಲಿಯೇ ಅಡಕಗೊಂಡಿದ್ದವು; ಅವು ಚೈತನ್ಯ ಮತ್ತು ಪ್ರಕಾಶ, ಜೀವನ, ಆನಂದ ಮತ್ತು ಪ್ರೇಮ ಹಾಗೂ ಋತಗಳಾಗಿವೆ.

ಇವುಗಳು ತುಂಬ ಸಾಮರ್ಥ್ಯಶಾಲಿಯಾಗಿದ್ದು, ಪರಮೋಚ್ಚ ಶಕ್ತಿಯನ್ನು ಹೊಂದಿರುತ್ತವೆ. ಅದರಲ್ಲೂ ಕೆಲ ಅಂಶಗಳಲ್ಲಿ ಅತ್ಯಗಾಧವಾಗಿದ್ದ, ಅವೆಲ್ಲವೂ ಈ ಎಲ್ಲ ವಿಷಯಗಳ ಮೂಲತತ್ವಗಳ ಅವಶ್ಯಕತೆಯೇ ಆಗಿರುತ್ತವೆ. ಇದರ ಜೊತೆಜೊತೆಗೆ ಅವುಗಳು ಆಯ್ಕೆಯ ವಿಷಯದಲ್ಲಿ ಸಂಪೂರ್ಣ ಮುಕ್ತ ಸ್ವಾತಂತ್ರ್ಯವನ್ನೇ ಹೊಂದಿವೆ. ಅದರಲ್ಲೂ ಸೃಷ್ಟಿಯು ತಂತಾನೆ ಮುಕ್ತವಾಗಿಯೇ – ಅವುಗಳು

ಕಾರ್ಯ ನಿರ್ವಹಣೆಗೆ ಆ ಕ್ಷಣದಿಂದಲೇ ತೊಡಗಿಕೊಳ್ಳುವಂತೆ – ಅವುಗಳದೇ ಆದ ಪರಿಕಲ್ಪನೆಯನ್ನು ಹೊಂದಿ, ಅದು ಹೇಗೆ ಘಟಿಸಬೇಕು ಎನ್ನುವದರ ಬಗೆಗೆ, ಈ ಅಸ್ತಿತ್ವಗಳು ಪರಿಪೂರ್ಣವಾಗಿಯೇ ಸ್ವತಂತ್ರವಾಗಿದ್ದು, ಅಷ್ಟೇ ಸ್ವತಂತ್ರದಿಂದಲೇ ಆಯ್ಕೆಯನ್ನು ಮಾಡಿಕೊಳ್ಳುತ್ತವೆ. ಕೇವಲ ಸೇವಕನೋರ್ವನ ದೃಷ್ಟಿಕೋನವನ್ನು ಪರಿಗಣಿಸುವದಕ್ಕಿಂತ ಹಾಗೂ ಶ್ರೀ ಅರವಿಂದರು ಉಲ್ಲೇಖಿಸಿರುವ ಹಾಗೆ ಇರುವ ಈ ಉಪಕರಣವನ್ನು ಓದುವದಕ್ಕಿಂತ, ಅವುಗಳೆಲ್ಲವೂ ಆ ಪರಮ ದೇವನ ದೃಷ್ಟಿಕೋನವನ್ನು ಸಹಜವಾಗಿಯೇ ಪಡೆದಿರುತ್ತವೆ ಎನ್ನುವದನ್ನು ಅರಿತುಕೊಳ್ಳಬೇಕು. ಮತ್ತೆ ಮತ್ತೆ ಆ ತಪ್ಪು – ಅಂದರೆ ನನ್ನ ಅಭಿಪ್ರಾಯದ ಪ್ರಕಾರ ಇಂತಹ ತಪ್ಪೇ ಎಲ್ಲದಕ್ಕೂ ಮೊದಲ ಕಾರಣವಾಗಿರುತ್ತದೆ. ಮತ್ತು ಇದೇ ಈ ಲೋಕದ ಎಲ್ಲ ಅನಿಯಮಿತತನಕ್ಕೂ ಮೂಲಹೇತುವಾಗಿದೆ.

ಯಾವಾಗ ಆ ಪರಮದೈವ ಮತ್ತು ಯಾವುದು ಉತ್ಪತ್ತಿಗೊಳ್ಳಲಿದೆಯೋ, ಅವುಗಳ ಮಧ್ಯೆ ವಿಭಾಗೀಕರಣವಾದಾಗಲೇ, ಚೈತನ್ಯವು ಅಚಿತ್ (Inconscious [ಕಪಾಲಿ ಶಾಸ್ತ್ರೀ]) ಆಗಿ ಬದಲಾವಣೆಗೊಳ್ಳುತ್ತದೆ. ಆಗ ಪ್ರಕಾಶವು ತಮವಾಗಿ, ಪ್ರೇಮವು ದ್ವೇಷವಾಗಿ, ತೋಷವು ಯಾತನಾಮಯವಾಗಿ, ಜೀವನವು ಮರಣದಲ್ಲಿ ಮತ್ತು ಋತವು ಅನೃತದಲ್ಲಿ ಪರಿವರ್ತನಗೊಳ್ಳುತ್ತವೆ. ಜೊತೆಜೊತೆಗೆ ಇವೆಲ್ಲವೂ ತಮ್ಮ ತಮ್ಮ ಸೃಷ್ಟಿಗಳಲ್ಲಿಯೇ ವಿಭಾಗೀಕರಣಗೊಳ್ಳುವಲ್ಲಿ ಮತ್ತು ಅನಿಯಮಿತತನದವರೆಗೆ ಸ್ವತಂತ್ರವಾಗಿಯೇ ಮುಂದುವರೆಯುತ್ತವೆ.

ಈ ಎಲ್ಲದರ ಫಲಿತಾಂಶದ ಜಗತ್ತನ್ನೇ ನಾವು ಕಾಣುತ್ತಿದ್ದೇವೆ. ಇದು ಹಂತ ಹಂತವಾಗಿಯೇ ಪ್ರಗತಿ ಹೊಂದುತ್ತ ಬಂದಿದೆ. ಜೊತೆಗೆ ಇದು ಕೊಂಚ ದೀರ್ಘಾವಧಿಯನ್ನೂ ಬಯಸುತ್ತದೆ ಎಂದೇ ಹೇಳಬಯಸುತ್ತೇನೆ. ಆದರೆ ಅಂತಿಮವಾಗಿ ಪ್ರಮುಖವಾಗಿರುವದೇನೆಂದರೆ, ಈ ಜಡವು ನಿಷ್ಪತ್ತಿಯಾಗಿದೆ – ಇದು ಅಸ್ಪಷ್ಟವಾದ ಅಚೇತನವೂ ದುಃಖದಾಯಕವೂ.. ಆದ ಈ ಸೃಷ್ಟ್ಯಾತ್ಮಕ ಶಕ್ತಿಯು ಈ ನಾಲ್ಕು–ಶುದ್ಧ ಸನ್ಮಾತ್ರಗಳನ್ನು ಉತ್ಪನ್ನಗೊಳಿಸಿಕೊಳ್ಳುತ್ತದೆ. ಈ ನಾಲ್ಕು ಅಂಶಗಳೇ ಜಗತ್ತಿನ ಸೃಷ್ಟಿಗೆ ಅತ್ಯಾವಶ್ಯವಾಗಿವೆ. ಏನು ಘಟಿಸುತ್ತದೆ ಎನ್ನುವದನ್ನು ಸಾಕ್ಷ್ಯಾಧಾರಗಳಲ್ಲಿ ಗ್ರಹಿಸುತ್ತ, ಆ ಪರಮದೆಡೆಗೆ ತಿರುಗಿ ಪರಿಹಾರಕ್ಕಾಗಿ ಅವಳು ಪ್ರಾರ್ಥಿಸುತ್ತ, ಮತ್ತು ಈಗಾಗಲೇ ಘಟಿಸಿರುವ ಆ ದುಷ್ಟತನದಿಂದಾದ ಘಟನೆಗಳ ನೋವಿನಿಂದ ಗುಣಮುಖರಾಗುವತ್ತ ಸಾಗುತ್ತದೆ.

ತದನಂತರದಲ್ಲಿ ಅವಳು ಅಪ್ರತ್ಯಾಶಿತವಾಗಿ ತನ್ನ ಚೇತನವನ್ನು ಅಚೇತನದಲ್ಲಿ, ಅವಳ ಪ್ರೇಮವನ್ನು ಯಾತನೆಗೊಳ್ಳುವಲ್ಲಿ, ಮತ್ತು ಋತವನ್ನು ಅನೃತಗೊಳ್ಳುವಂತೆ ಆದೇಶ ನೀಡಲ್ಪಟ್ಟರುತ್ತಾಳೆ. ಮತ್ತೆ ಆ ಉದಾತ್ತ ಚೇತನವನ್ನೇ, ಅಂದರೆ ವಿಶಾಲ ಪ್ರೇಮವನ್ನು ಮತ್ತೂ ಪರಿಪೂರ್ಣವಾದ ಸತ್ಯದ ಕಡೆಗೆ – ಅಂದರೆ – ಈ ಮೊದಲು ಉತ್ಪನ್ನಗೊಂಡಿರುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ, ಮತ್ತೆ ಮೇಲಾಗಿ ಜಿಡ್ಡುಗಟ್ಟಿದ ಸ್ಥಿತಿಯಲ್ಲಿ ಇರುವ, ಒಟ್ಟಿನಲ್ಲಿ ಹೇಳಬೇಕಂದರೆ ಚೇತನದಲ್ಲಿ ಜಾಗೃತಗೊಂಡ ಜಡದ(ಭೌತಿಕ ತತ್ತ್ವದ) ಭಯಾನಕದೊಳಗೆ, ಪ್ರೇಮ ಮತ್ತು ಸತ್ಯದೊಳಗೆ, ಮತ್ತೆ ವಿಮೋಚನೆಯತ್ತ ಸಂಚಲನವನ್ನು ಪ್ರಾರಂಭಿಸುತ್ತ, ಅದು ಲೌಕಿಕ–ಜಗತ್ತನ್ನು ಹಾಗೂ ಅದರ ಪರಮೋಚ್ಚ ಮೂಲದೆಡೆಗೆ ಒಯ್ಯುವಂತೆ ಇರುತ್ತದೆ.

ಆದ್ದರಿಂದ, ಇದನ್ನೂ ಜಡದಲ್ಲಿರುವ ಕ್ರಮಾಗತದ ಅವಸರ್ಪಿಣೀ ಎಂದು ಕರೆಯಬಹುದಾಗಿದೆ. ಜೊತೆಗೆ ಈ ಅವಸರ್ಪಿಣೀ ಕ್ರಿಯೆಗಳ ಇತಿಹಾಸವೂ ಇದಾಗಿರುತ್ತದೆ. ಪ್ರಚಲಿತದಲ್ಲಿರುವ ಈ ಅವಸರ್ಪಿಣಿಗಳ ಫಲಿತಾಂಶವೇ, ಅಚೇತನದಿಂದಲೇ ಉದಿಸಿ ಉದ್ಭವಸಿ ಬರುವ ಅತಿಮಾನಸದ ಉಪಸ್ಥಿತಿಯಾಗಿದೆ. ಆದರೆ ಇದರ ಉಪಸ್ಥಿತಿಯ ನಂತರದಲ್ಲಿ ಬೇರೆ ಏನೂ ಅಲ್ಲಿ ಇರುವದಿಲ್ಲ...ಎಂದು ಹೇಳಲು ಸೂಚಿಸಲು ಸಾಧ್ಯವೇ ಇಲ್ಲ. ಏಕೆಂದರೆ ಆ ಪರಮವು ಎಂದಿಗೂ ಖಾಲಿಯಾಗದ, ಅಕ್ಷಯದ ಹಂತವಾಗಿದ್ದು, ಸದಾ ನವನವೀನ ಜಗತ್ತುಗಳನ್ನು ಸೃಷ್ಟಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/206–208**

**ದೇವಗಣಗಳ ಹುಟ್ಟು**


ನಾವು ಇಲ್ಲಿ **"ಅದಿತಿ"** ಎಂದು ಕರೆಯುವದೇ 'ಸೃಷ್ಟ್ಯಾತ್ಮಕ ಚೈತನ್ಯವಾಗಿದೆ'. ಹೌದು, ಅದು ಸೃಷ್ಟ್ಯಾತ್ಮಕ ಚೈತನ್ಯ.

ನಾನು ಈಗ ನಿಮಗೆ ಇಲ್ಲೊಂದು ಘಟನೆಯನ್ನು ಸಂಪೂರ್ಣವಾಗಿ ಬಾಲಿಶತನದಲ್ಲಿಯೇ ಹೇಳುತ್ತಿದ್ದೇನೆ. ಅವಳು(ಅದಿತಿ) ಮೊದಲು ಈ ನಾಲ್ಕು – ಅಸ್ತಿತ್ವಗಳನ್ನು ಸೃಷ್ಟಿಸಿದಳು. ಯಾವಾಗ ಅವಳು ಸೃಷ್ಟಿಗೊಳಿಸುವ ಗುರಿಯನ್ನು ಸ್ವೀಕರಿಸಿದ್ದಳೋ, ಆಗಲೇ ಅವಳು ತನ್ನ ಅಸ್ತಿತ್ವದಿಂದಲೇ ಈ ನಾಲ್ಕನ್ನೂ

ಉತ್ಪತ್ತಿಗೊಳಿಸುವ ಮೂಲಕ, ಮತ್ತೆ ಈ ಲೋಕವು ಪ್ರಗತಿಗೊಳ್ಳುವದಕ್ಕೆ ಆದೇಶವಿತ್ತಿದ್ದಾಳೆ. ಇದಾದ ಮೇಲೆ, ಮತ್ತೆ – ನಾನು ಈಗಾಗಲೇ ನಿಮ್ಮ ಸಂಗಡ ಮಾತನಾಡಿದ್ದೇನೆ ಎಂದುಕೊಳ್ಳುತ್ತೇನೆ – ಅದು ದೋಷಪೂರ್ಣವಾಗಿಯೇ ಪರಿವರ್ತನಗೊಂಡಿತ್ತು. ಅದನ್ನು ಈ ರೀತಿಯಲ್ಲಿ ಹೇಳಬಹುದಾಗಿದೆ. ಹೀಗಾಗಿ ಯಾವಾಗ ಈ ಎಲ್ಲ ವಿಷಯಗಳೂ ದೋಷಪೂರ್ಣವಾಗಿಯೇ ಘಟಿಸುತ್ತವೆಯೋ, ಅವಳು ಆಗ ಮತ್ತೊಂದು ಸೃಷ್ಟಿಯನ್ನು ರೂಪಿಸುವ ಮೂಲಕ – ಅಂದರೆ ಎಲ್ಲ ದೇವಗಣಗಳನ್ನು ರೂಪಣೆಗೊಳಿಸುವ ಸೃಷ್ಟಿಯೊಂದನ್ನು ರೂಪಿಸಿದ್ದಳು. ಇದು ಈ ಮೊದಲೇ ಸೃಷ್ಟಿಗೊಂಡಿದ್ದ 'ನಾಲ್ಕು–ಉತ್ಪನ್ನ'ಗಳ ಮೂಲಕ ಸೃಷ್ಟಿಸಲ್ಪಟ್ಟಿದ್ದ ಅನಿಯಮಿತತನಕ್ಕೆ ಸಮಾನಾಂತರವಾಗಿ ಇರುವಂತೆ ನೋಡಿಕೊಂಡಳು. ಇಲ್ಲಿನ ಪ್ರಗತಿಗೆ ಒಂದು ನಿಗದಿತವಾದ ನಿಯಮವಿತ್ತು. ಅದು ಏನೆಂದರೆ, ಅದು ಯಾವಾಗಲೂ ಆ ಪರಮದೈವದ ಮಾರ್ಗದರ್ಶನದಲ್ಲಿಯೇ ಇರುವದು. ಅಲ್ಲಿ ಸೃಷ್ಟಿಗೊಳ್ಳುವ ಜಗತ್ತುಗಳೆಲ್ಲವೂ ನಿಯಮಬದ್ಧವಾಗಿದ್ದು ಮತ್ತೂ ಮತ್ತೂ ಅವತರಣಗೊಳ್ಳುತ್ತ ಭೌತಿಕ ತತ್ವವಾಗುವಂತೆ ಇತ್ತು. ಮತ್ತೆ ಇದಕ್ಕೆ ಸಂಯೋಜನೆಯಾಗಿ ಇದೇ ಶ್ರೇಣಿಯಲ್ಲಿ ತದನಂತರದಲ್ಲಿ ಅವತಾರಗೊಳಿಸಲ್ಪಟ್ಟ (ರೂಪಿಸಲ್ಪಟ್ಟ) ದೇವತೆಗಳು, ಒಂದು ರೂಪಾಂತರದ, ಒಂದು ಉನ್ನತ ಹಾಗೂ ಉನ್ನತೋನ್ನತವಾದ ಜಡಧಾತುಭವೀಕರಣವನ್ನು "ಅಧಿಮಾನಸ"ವೆಂದು ಶ್ರೀ ಅರವಿಂದರು ಪರಿಭಾಷೆ ನೀಡಿದ್ದಾರೆ. ಹೀಗಾಗಿ ಅಲ್ಲಿಂದ ಇವುಗಳೆಲ್ಲ (ಈ ಎಲ್ಲ ದೇವಗಣಗಳು) ಈ ಭೌತಿಕ ವಿಶ್ವದ ಮತ್ತು ಈ ಭೂಮಿಯ ಮೇಲೆ ಅಧಿಪತ್ಯ ಹೊಂದಿವೆ. ಈ ಎಲ್ಲ ಕಾರ್ಯಚರಣೆಗೆ ಒಂದು ಸಂಗತಿ ಏನೆಂದರೆ, ಈ ಪೃಥ್ವಿಯ ಸಂರಚನೆಯು ಇಡೀ ವಿಶ್ವದ ರಚನೆಯಂತೆಯೇ ಸಂಕೇತಗೊಳಿಸಲ್ಪಟ್ಟು ಸೃಷ್ಟಿಸಲ್ಪಟ್ಟಿದೆ. ಏಕೆಂದರೆ ಆಗಮಿಸಲಿರುವ ಸಮಸ್ಯೆಗಳನ್ನು ಸಂಕ್ಷಿಪ್ತಗೊಳಿಸಿ ಮತ್ತು ಅದನ್ನು ಅತ್ಯಂತ ಸುಲಭವಾಗಿ ಪರಿಹರಿಸಲು ಅನುಕೂಲವಾಗುವಂತೆ ಸೃಷ್ಟಿಸಲ್ಪಟ್ಟಿವೆ. ಮತ್ತೆ ಮೇಲಾಗಿ, ಈ ಭೂಮಿಯು(ಪೃಥ್ವಿಯು), ಖಗೋಳ ಶಾಸ್ತ್ರದ ವ್ಯಾಪ್ತಿಯಲ್ಲಿ ಅತ್ಯಂತ ಸೂಕ್ಷ್ಮಾತಿಸೂಕ್ಷ್ಮವಾಗಿರುವ ಹಂತವಿದ್ದು, ಆ ವಿರಾಟ್‌ವ್ಯಾಪ್ತಿಯಲ್ಲಿ ಅಷ್ಟೊಂದು ಪ್ರಾಮುಖ್ಯತೆಯನ್ನು ಹೊಂದಿಲ್ಲ. ಇನ್ನು ಈ ವಿಶ್ವರಚನೆಯ ಅತೀಂದ್ರಿಯ ದೃಷ್ಟಿಕೋನದಿಂದ, ಇದೊಂದು ಆ ವಿಶ್ವಸೃಷ್ಟಿಯ ಸಂಸರ್ಗದಿಂದ ಅಥವಾ ಸಾದೃಶ್ಯದಿಂದಾಗಿ ರೂಪಾಂತರಣಗೊಳ್ಳುವದನ್ನು ಪ್ರತಿನಿಧಿಸುತ್ತಿದೆ. ಏಕೆಂದರೆ, ಈ ಪೃಥ್ವಿಯು ಆ ವಿಶ್ವದ ಸಂಕೇತವೇ ಆಗಿದೆ. ಇದೇ ನಡವಳಿಕೆಯೇ

ದೇವತೆಗಳಿಂದ ಅನುಷ್ಠಾನಗೊಳಿಸಿಕೊಳ್ಳಲ್ಪಡುತ್ತದೆ. ಈ ಪೀಠದಲ್ಲಿಯೇ ಈ ದೇವತೆಗಳ ಅಸ್ತಿತ್ವವಿರುವದರಿಂದಾಗಿಯೇ ಶ್ರೀ ಅರವಿಂದರು ಇದನ್ನು ಅಧಿಮಾನಸವೆಂದು ಕರೆದಿದ್ದಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/158**



**ಕಣ್ಮರೆಯಾದ ಸ್ವರ್ಗ**

ಥಿಯಾನ್ ನನಗೆ ಯಾವಾಲೂ ಹೇಳುತ್ತಿದ್ದುದು ಏನೆಂದರೆ, ಬೈಬಲ್ಲಿನಲ್ಲಿ ಉಲ್ಲೇಖಿಸಲ್ಪಟ್ಟಿರುವ "ಈಡನ್ ತೋಟದ ಸರ್ಪ"ದ ಕಥೆಯ ನೈಜ ಅರ್ಥವೆಂದರೆ, ಮಾನವ ಸಮುದಾಯವು ಪಶುಸದೃಶ ದಿವ್ಯತೆಯಿಂದ ಪ್ರಗತಿ ಹೊಂದಿ ಮತ್ತೆ ಚಿತ್ತಿನ ದೈವೀ ಭಾವದಲ್ಲಿ ಅಂದರೆ ಜಾಗೃತ ಪ್ರಜ್ಞೆಯ ಮಾನಸಿಕ

ಪ್ರಗತಿಯ ಹಂತದಲ್ಲಿ ಬಾಳಲು ಯತ್ನಿಸಿದ ಕಥಾನಕವಾಗಿದೆ. ಅದನ್ನು ಸಂಕೇತಿಸಲೆಂದೇ ಆ ಜ್ಞಾನವೃಕ್ಷದ ಫಲವನ್ನು ತಿನ್ನುವದರ ಮೂಲಕ ಇದನ್ನು ಹೇಳಲಾಗಿದೆ. ಮತ್ತೆ, ಥಿಯಾನ್ ಸದಾ ಹೇಳುತ್ತಿದ್ದ ವಿಷಯವೇನೆಂದರೆ, ಆ ಸರ್ಪವು ವರ್ಣ ವೈವಿಧ್ಯತೆಯಲ್ಲಿ ಇದ್ದು ತ್ರಿಕೋನ ಪಟ್ಟಕದಂತೆ ಎಲ್ಲ ಏಳೂ ವರ್ಣಗಳನ್ನು ಪ್ರತಿಫಲಿಸುತ್ತಿತ್ತು. ಅದು ಯಾವುದೇ ದುಷ್ಟಶಕ್ತಿಯದ್ದಾಗಿರಲಿಲ್ಲ. ಅದೊಂದು ವಿಕಾಸದ ಬಲವಾಗಿತ್ತು. ಆ ಸತ್ವ, ಅಂದರೆ ವಿಕಾಸವಾದದ ಶಕ್ತಿಯು ಅದಾಗಿತ್ತು. ಹೀಗಾಗಿ ಈ ವಿಕಸನದ ಶಕ್ತಿಯೇ ಸಹಜವಾಗಿಯೇ ಆ ಜ್ಞಾನಫಲವು ತುಂಬ ರುಚಿಕರವಾಗುವಂತೆ ಮಾಡಿತ್ತು.

ಇದೀಗ, ಥಿಯಾನನ ಅಭಿಪ್ರಾಯದಂತೆಯೇ, ಜಹೋವನೂ ಅಸುರರ ಮುಖ್ಯಸ್ಥನಾಗಿದ್ದಾನೆ. ಏಕೆಂದರೆ, ಇವನೇ ಅಸುರರ ರಾಜ. ಅಂದರೆ ಅಹಂಭಾವದ ದೇವತೆಯಾಗಿದ್ದು ಸರ್ವಸ್ವವನ್ನೂ ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಬಯಸುತ್ತಾನೆ. ಅದಕ್ಕಾಗಿ ಎಲ್ಲವನ್ನೂ ತನ್ನ ಆಧೀನದಲ್ಲಿಯೇ ಇಟ್ಟುಕೊಳ್ಳುತ್ತಾನೆ. ಅವನ ಈ ಕಾರ್ಯ ಬಹತೇಕವಾಗಿ ಆತನನ್ನು ಉಗ್ರನನ್ನಾಗಿಸಿದೆ. ಹೀಗಿರುವದರಿಂದಲೇ ಈ ಮಾನವ ಕುಲವು ವಿಕಾಸವಾದದ ಮೂಲಕವೇ ಅಂದರೆ ಚೇತನದ ವಿಕಸನದ ಮೂಲಕವೇ ದೈವತ್ವವನ್ನು ಪಡೆದುಕೊಳ್ಳಲು ಅವರನ್ನು ಸಮರ್ಥಗೊಳಿಸಿದೆ. ಈ ಕಾರಣದಿಂದಲೇ ಅವನನ್ನು ಸ್ವರ್ಗದಿಂದ ಬಹಿಷ್ಕರಿಸಲಾಗಿದೆ.

ಅತ್ಯಂತ ಬಾಲಿಶ ರೀತಿಯಲ್ಲಿಯೇ ಇದನ್ನು ಹೇಳಿದ್ದರೂ ಸಹಿತ, ಈ ಕಥೆಯಲ್ಲಿ ಒಂದು ಮಹತ್ತರವಾದ ಪರಮ ಸತ್ಯದ ಪ್ರತಿಪಾದನೆ ಇದೆ. ಹೌದು, ಅದೊಂದು ಮಹತ್ತರವಾದ ಸಂಗತಿಯ ಕುರಿತು ಹೇಳುತ್ತಿದೆ.

**– ಶ್ರೀಮಾತೆ: ಭಕ್ತನೋರ್ವನೊಡನೆ ಸಂದರ್ಶನ, ಫೆಬ್ರುವರಿ 4, 1961**

**ಸಾವಿತ್ರಿ ಮತ್ತು ಸತ್ಯವಾನನ ಕಥೆ**

ಈ ಜಗತ್ತಿನ ಸಂಕೇತಾತ್ಮಕವಾಗಿ ಮತ್ತು ಪ್ರತಿನಿಧಿಯಾಗಿ ಈ ಪೃಥ್ವಿ ಇದೆ. ಇದು ಅತ್ಯಂತ ಸುಭದ್ರವಾದ ವಾಸ್ತವವಾಗಿದ್ದು, ವಿಕಾಸವಾದದ ಪ್ರಕ್ರಿಯೆಯಲ್ಲಿ ಶ್ರಮದ ಮೂಲಕವೇ ನಿರ್ಮಿತಿಯಾಗುವ ಸ್ಫಟಿಕೀಕರಣದ ಮತ್ತು ಏಕಾಗ್ರತೆಯಲ್ಲಿ ರೂಪುಗೊಂಡಿರುವ ಘಟನೆಯಾಗಿದೆ. ಅದನ್ನು ಈ ರೀತಿಯಲ್ಲಿ ಗ್ರಹಿಸಬೇಕು; ಈ

ಪೃಥ್ವಿಯ ಇತಿಹಾಸವೆಂದರೆ ಪ್ರತಿಮಾತ್ಮಕವಾದ ಇತಿಹಾಸವಾಗಿದೆ. ಮತ್ತೆ ಈ ಪೃಥ್ವಿಯ ಮೇಲೆ ಅವತರಣಗೊಂಡಿರುವ ಘಟನೆ (ಇದು ವಿಶ್ವದ ಇತಿಹಾಸವಲ್ಲ), ಆದರೆ (ಇದು ಭೌಮಿಕ ಸೃಷ್ಟಿಯ ಕಥೆಯಾಗಿದೆ) ಈ ಅವತರಣವು ಪ್ರತಿಯೊಂದು ಜೀವಿಯ ವಲಯದಲ್ಲೂ ಘಟಿಸುತ್ತದೆ. ಅಂದರೆ ಪ್ರತಿಯೋರ್ವನ ಭೌಮಿಕ ವಾತಾವರಣದಲ್ಲಿಯೇ ಘಟಿಸುತ್ತದೆ.

ಇದೀಗ ಸಾವಿತ್ರಿಯನ್ನು ಉದಾಹರಿಸುವದಾದಲ್ಲಿ, ಇದೊಂದು ಈ ವಿಷಯದಲ್ಲಿ ಅತ್ಯಂತ ಸುಸ್ಪಷ್ಟವಾಗಿ ಇರುವ ಸಂಗತಿಯಾಗಿದೆ; ಈ ಲೋಕಮಾತೆಯು ವೈಶ್ವಿಕವಾಗಿಯೇ ತನ್ನ ಕಾರ್ಯದಲ್ಲಿ(ಕರ್ಮದಲ್ಲಿ) ತೊಡಗಿಕೊಂಡಿದ್ದು, ಆದರೆ ಈ ವಿಕಸನದ ಎಲ್ಲ ಕಾರ್ಯಗಳೂ ಪರಿಪೂರ್ಣವಾಗಿ ಘಟಿಸಲು ಈ ಪೃಥ್ವಿಯು ಆಧಾರವಾಗಿದೆ. ಅದೇ ಅದರ ಗಮ್ಯವೂ ಆಗಿದೆ. ಹಾಗಾದರೆ, ಮೊದಲಿಗೆ ಈ ವಿಶ್ವಮಾತೆಯ ಪ್ರತಿನಿಧಿಯಾಗಿ ಕೆಲವೊಂದು ಉತ್ಪತ್ತಿಗಳು ಇದ್ದು, ಇದು ಯಾವಾಗಲೂ ಈ ಪೃಥ್ವಿಯ ಮೇಲೆಯೇ ಇದ್ದು ಸಹಾಯ ಮಾಡಲು, ಜೊತೆಗೆ ತನ್ನಲ್ಲೇ ತಾನು ಸಿದ್ಧಗೊಳ್ಳಲು ಪ್ರತ್ಯಕ್ಷವಾಗುತ್ತದೆ; ತದನಂತರದಲ್ಲಿ ಯಾವಾಗ ಈ ಸಿದ್ಧತೆಯು ಸಂಪೂರ್ಣವಾಯಿತೋ, ಆಗ ಲೋಕಮಾತೆಯು ಅವಳಾಗಿಯೇ ಇಲ್ಲಿ ಭೂಮಿಯ ಮೇಲೆ ಕರ್ಮಗಳನ್ನು ಪೂರ್ಣಗೊಳಿಸಲು ಅವತರಣಗೊಳ್ಳುತ್ತಾಳೆ. ಮತ್ತೆ ಇದನ್ನೆಲ್ಲ ಸತ್ಯವಾನನ ಸಂಗಡವೇ ಮಾಡಬೇಕಾಗಿರುತ್ತದೆ. ಸತ್ಯವಾನನು ಈ ಭೂಮಿಯ ಆತ್ಮವಾಗಿದ್ದಾನೆ. ಹೀಗಾಗಿ ಇವಳು ಈ ಭೂಮಿಯ ಆತ್ಮದ ಸಾಮೀಪ್ಯದಲ್ಲಿಯೇ, ಅವನ ಸಾಂಗತ್ಯದಲ್ಲಿಯೇ ಬದುಕುತ್ತಾಳೆ. ಮತ್ತು ಈ ರೀತಿಯಲ್ಲಿ ಅವರು ಜಂಟಿಯಾಗಿಯೇ ಕಾರ್ಯ ಮಾಡುತ್ತಾರೆ. ಅವಳು ಈ ಭೂಮಿಯ ಆತ್ಮವನ್ನು ತನ್ನ ಕಾರ್ಯಕ್ಕಾಗಿ ಆಯ್ಕೆ ಮಾಡಿಕೊಡಿದ್ದಾಳೆ. ಅದಕ್ಕಾಗಿಯೇ " ಇಲ್ಲಿಯೇ ನಾನು ಕಾರ್ಯ ನಿರ್ವಹಿಸುವದಾಗಿದೆ" ಎನ್ನುತ್ತಾಳೆ. ಅದೋ ಅಲ್ಲಿರುವದೆಲ್ಲಾ (ಆ ಉನ್ನತ ಚೇತನಾ ವಲಯದತ್ತ ಸಂಕೇತಿಸುತ್ತ) ಅದು ಅಲ್ಲಿಯೇ ಇರಲಿ ಬಿಡಿ, ಅಲ್ಲಿರುವ "ಅಸ್ತಿತ್ವವು" ಅದು ಇರುವಂತೆಯೆ "ಸರಳವಾಗಿಯೆ ಇರುತ್ತದೆ". ಆದರೆ ಇಲ್ಲಿ ಈ ಭೂಮಿಯ ಮೇಲೆ ನೀವು ಕಾರ್ಯ ನಿರ್ವಹಿಸಬೇಕಾಗಿದೆ. ಇದು ಖಂಡಿತವಾಗಿಯೂ ನಿರ್ವಹಿಸಬೇಕಾದ ಕಾರ್ಯವಾಗಿದೆ.

ಅಲ್ಲಿ ಸುಸ್ಪಷ್ಟವಾದ ಲೋಕೋತ್ತರವಾದ ಪ್ರತಿನಿನಾದಗಳು ಮತ್ತು ಪರಿಣಾಮಗಳು ಇರುತ್ತವೆ. ಹಾಗಿದ್ದರೂ ಇಲ್ಲಿ ಉದ್ದೇಶಿತ ಕಾರ್ಯವು ನೆರವೇರಿದೆ. ಏಕೆಂದರೆ ಆ ಕಾರ್ಯದ ಸ್ಥಳವು "ಇದೇ" ಆಗಿದೆ. 'ಅವಳ' ವೈಶ್ವಿಕ ಹಂತದಲ್ಲಿ ಮತ್ತು ತದುತ್ತರದಲ್ಲಿ ಧನ್ಯತಾಮನೋಭಾವದೊಂದಿಗೆ ಆ ಸಮಯದಲ್ಲಿಯೇ ಆ ಅತಿರಿಕ್ತ ಸಾರ್ವಭೌಮಿಕ ಅನಂತತೆಯಲ್ಲಿ ಇರುವದಕ್ಕಿಂತ, ಅವಳು ಹೇಳುವದೇನೆಂದರೆ, ಇಲ್ಲಿ ನಾನು ನನ್ನ ಕರ್ಮವನ್ನು ಅನುಷ್ಠಾನಗೊಳಿಸಲು "ಇಲ್ಲಿಗೇ" ಹೋಗುತ್ತೇನೆ, ನಾನು ಆಯ್ಕೆ ಮಾಡಿಕೊಳ್ಳುವ "ಇಲ್ಲಿಯೇ" ಕಾರ್ಯ ನಿರ್ವಹಿಸುವದನ್ನೂ ಮಾಡುತ್ತೇನೆ.

ಆಗ ಆ ಪರಮದೇವನು ಅವಳಿಗೆ ಹೇಳುವದೇನೆಂದರೆ, ನೀನು ಏನನ್ನು ಅಭಿವ್ಯಕ್ತಗೊಳಿಸಿದ್ದೀಯೊ ಅದೇ ನನ್ನ "ಸಂಕಲ್ಪ"ವು ಆಗಿದೆ... "ನಾನು" ಇಲ್ಲಿಯೇ ಕಾರ್ಯ ಮಾಡಲು ಇಚ್ಛಿಸುತ್ತೇನೆ. ಯಾವಾಗ ಸರ್ವವು ಸಿದ್ಧಗೊಳ್ಳುತ್ತದೆಯೋ, ಯಾವಾಗ ಈ ಭೂಮಿಯು ಸಿದ್ಧಗೊಳ್ಳುತ್ತದೆಯೋ, ಯಾವಾಗ ಮಾನವೀಯತೆಯು ಸಿದ್ಧಗೊಳ್ಳುತ್ತದೆಯೋ (ಇದು ಬಹುತೇಕರಿಗೆ ಅರಿವಿಗೆ ಬರದೇ ಹೋಗಬಹುದು), ಯಾವಾಗ ಆ ಮಹತ್ತರವಾದ ಕ್ಷಣವು ಬರುವದೋ, ಒಳ್ಳೆಯದು.. ಆಗ ನನ್ನ ಕಾರ್ಯಗಳನ್ನು ಸಂಪೂರ್ಣಗೊಳಿಸಲು ಅವತರಣಗೊಳ್ಳುತ್ತೇನೆ.

ಇದೇ ಆ ಸಾವಿತ್ರಿ ಮತ್ತು ಸತ್ಯವಾನನ ಕಥೆಯಾಗಿದೆ.

**– ಶ್ರೀಮಾತೆ: ಭಕ್ತನೋರ್ವನೊಡನೆ ಸಂದರ್ಶನ, ಜುಲೈ 28, 1961**

## ಆ ಪರಮದೇವನಿಗೆ ಪೃಥ್ವಿಯ ಪ್ರಥಮ ದೈತ್ಯನ ಸವಾಲು

ನಾನು ಅಲ್ಪ–ಸ್ವಲ್ಪ ಸ್ಮರಣೆಯಲ್ಲಿ ಇದ್ದ ವಿಷಯವೊಂದನ್ನು ಹೇಳುತ್ತೇನೆ. ಇದೊಂದು ಅತ್ಯಂತ ಪ್ರಾಚೀನ ಕಥೆಯೂ ಹೌದು. ಅದನ್ನು ಯಾರೂ ನನಗೆ ಹೇಳಿಲ್ಲ, ಅದರಲ್ಲಿ ಪ್ರಪ್ರಥಮವಾಗಿ ಅಸುರನೋರ್ವನು ಆ ಪರಮದೇವನಿಗೆ ಸವಾಲು ಒಡ್ಡಿದ್ದಾನೆ. ಅವನ ಸವಾಲೆಂದರೆ, "ನಾನೂ ಸಹಿತ ನಿನ್ನಂತೆಯೇ ಮಹಾನ್ ಆಗಿದ್ದೇನೆ!". ಅದಕ್ಕೆ ಬಂದ ಪ್ರತ್ಯುತ್ತರವೆಂದರೆ, "ನನಗಿಂತಲೂ ಹೆಚ್ಚಿನ ಮಹಾನತೆಯನ್ನು ಸಾಧಿಸುವಂತಾಗಲಿ ಎಂದು ಆಶಿಸುತ್ತೇನೆ, ಏಕೆಂದರೆ ಆಗ ಅಲ್ಲಿ ಯಾವುದೇ ಅಸುರತ್ವವೂ ಉಳಿದಿರುವದಿಲ್ಲ."

ಈ ನೆನಪು ಯಾವಾಗಲೂ ಇರುತ್ತದೆ. ಎಲ್ಲಿಯೋ ಒಂದು ಕಡೆಗೆ... ಒಂದು ವೇಳೆ ನಾವು ಈ "ಸರ್ವವೂ" ಆಗುವವದಾದಲ್ಲಿ, ಎಲ್ಲವೂ ಸಂಪನ್ನಗೊಂಡಂತೆ – ನೀವು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಆ ಅಸುರನ ಬಯಕೆಯೂ ಸಹಿತ ಆ ಪರಮದೇವನಿಗಿಂತಲೂ ಮಹತಿಯನ್ನು ಸಾಧಿಸುವದಾಗಿದೆ; ನನಗಿಂತಲೂ ಮಹತ್ತಾಗಿ ಪರಿವರ್ತಿತವಾಗುತ್ತಿದ್ದಲ್ಲಿ ಆಗ ಅಸುರರು ಯಾರೂ ಇರುವದಿಲ್ಲ ಎನ್ನುವದು ಆ ಪರಮದೇವನ ಇಚ್ಛೆಯಾಗಿದೆ.

ಇದೇ ವಿಷಯವೇ ಅತ್ಯಂತ ಸ್ವಲ್ಪ ಪ್ರಮಾಣದಲ್ಲಿ ಸಾವಿನ ವಿಷಯದಲ್ಲಿಯೂ ಇದೆ.

ಚೇತನಾವಸ್ಥೆಯ ಒಂದು ನಿಗದಿತವಾದ ಹಂತದಲ್ಲಿ, ಮುಂದೆ ಏನು ಘಟಿಸಬಹುದು ಎನ್ನುವದರ ಬಗೆಗೆ ಯಾವುದೇ ಚಿಂತೆ ಮಾಡದೇ ಇರಲು ಸಾಧ್ಯವೇ ಆಗದ ಸ್ಥಿತಿಯು ಬರಬಹುದು. ಪ್ರತಿಯೊಂದೂ ದರ್ಶನಕ್ಕೆ ಲಭ್ಯವಾಗುವದು. ನಿಸ್ಸಂಶಯವಾಗಿ ಓರ್ವ ವ್ಯಕ್ತಿಯ ಕಾರ್ಯ ಮತ್ತು ಅದರ ಬಲ, ಅದೇ ಏಕವಾಗಿರುವ ಅದೇ ಚೇತನದ ಆ ಏಕೈಕ ಶಕ್ತಿಯ ಬಗೆಗೆ ಇರುತ್ತದೆ.

ಆದ್ದರಿಂದ ಆ ಸಂವೇದನೆ ಮತ್ತು ಸಂಕಲ್ಪ ಹಾಗೂ ಗುರಿ ಎಲ್ಲವೂ "ಮತ್ತೂ ಮತ್ತೂ ಅಧಿಕ"ವಾಗಿ ಅಧಿಕ ಶಕ್ತಿಯಿಂದ, ಮಹತ್ತರವಾಗಿದ್ದು ಅದು ಮತ್ತೆ ಆ "ಅದೇ" "ಬಲದಂತೆ" ನಿಮ್ಮನ್ನು ನಿಸ್ಸೀಮರಾಗುವತ್ತ ಸೆಳೆಯುತ್ತದೆ. ಯಾವಾಗ ನೀವು ಆ 'ಸೀಮಿತ ಸೀಮೆಯನ್ನು' ದಿಟ್ಟಿಸುತ್ತೀರೋ ಅಲ್ಲಿ ಎಲ್ಲವೂ ಸಂಪನ್ನಗೊಂಡಂತೆ.

ಅವು ಕೆಲವು ಪ್ರಾಚೀನ ವಿಚಾರಗಳಾಗಿದ್ದವು – ಅಲ್ಲಿ ಎರಡು ಶಕ್ತಿಗಳು ಪರಸ್ಪರ ವಿರೋಧದಲ್ಲಿ ಇದ್ದವು; ಅದು ಶಿಷ್ಟತನದ ಶಕ್ತಿ ಮತ್ತು ದುಷ್ಟಶಕ್ತಿಯಾಗಿದ್ದವು. ಈ ಎರಡರ ಮಧ್ಯದ ಹೋರಾಟವು, ಅಲ್ಲಿ ಎರಡೂ ಶಕ್ತಿಗಳಿಗೂ ಅಂತಿಮ ಧ್ವನಿಯನ್ನು ಆಲಿಸುವ ಹಂತವಿರುತ್ತದೆ – ಮಕ್ಕಳೆಲ್ಲರೂ ಇಂತಹ ಕಥೆಗಳಿಂದ ಮನೋರಂಜನೆಯನ್ನು ಪಡೆಯುತ್ತಿದ್ದ ಅವಧಿ ಒಂದಿತ್ತು. ಹೀಗಾಗಿ ಇವೆಲ್ಲವೂ ಕೇವಲ 'ಮಕ್ಕಳ ಕಥೆಯಂತೆ'ಯೇ ಆಗಿವೆ.

ಕೆಲವೊಂದು ಜನರು (ನಾವು ಸಮ್ಮತಿಸಿಕೊಂಡಲ್ಲಿ ಕೆಲವು ಜೀವಿಗಳು, ಅಥವಾ ಚೈತನ್ಯಗಳು) ತಮ್ಮಲ್ಲಿಯೇ ತಾವು ಪ್ರಗತಿಯನ್ನು ಹೊಂದುವದರ ಸಲುವಾಗಿ ಕೊಟ್ಟುಕೊಳ್ಳಬೇಕಾಗುತ್ತದೆ. ಸಂಯೋಗಗೊಳ್ಳಲು ಮತ್ತು 'ಸ್ವಯಂ

ಸರ್ವನಾಶವಾಗಲು (ಲಯವಾಗಲು) ಅವುಗಳೆಲ್ಲವೂ ಸಾಕ್ಷಾತ್ಕಾರವನ್ನು ಹೊಂದಲೇಬೇಕಾಗುತ್ತದೆ. ಇನ್ನುಳಿದವರಿಗೆ ಈ ಪಥವು ನೇರಾನೇರವಾಗಿ ಸಂಪೂರ್ಣ ವಿರುದ್ಧವಾದ ದಿಸೆಯಲ್ಲಿದೆ. ಇದು ಒಂದು ಬೆಳವಣಿಗೆ, ಒಂದು ಪ್ರಾಬಲ್ಯ, ಒಂದು ಅತ್ಯದ್ಭುತ ಪರಿಮಾಣಗಳನ್ನು ಊಹಿಸುತ್ತದೆ. ಅಂದರೆ ಅದು ಆ ವಿಭಾಗಗಳೆಲ್ಲವೂ ಕಣ್ಮರೆಯಾಗುವವರೆಗೂ ಇದ್ದು – ತದನಂತರದಲ್ಲಿ ಅದು ಅಸ್ತಿತ್ವದಲ್ಲಿ ಉಳಿಯುವದಿಲ್ಲ.

ಕೆಲವರು ಈ ಪಥವನ್ನು ಆಯ್ದುಕೊಳ್ಳುತ್ತಾರೆ. ಮತ್ತೆ ಕೆಲವರು ಅದನ್ನು ಅಂದರೆ ಆ ಪಥವನ್ನು ಆಯ್ದುಕೊಳ್ಳಲು ಇಚ್ಛಿಸುತ್ತಾರೆ. ಆದರೆ ಯಾವಾಗ ನಾವು ಅಂತಿಮ ಘಟ್ಟವನ್ನು ತಲುಪುತ್ತೇವೆಯೋ, ಆಗ ಮತ್ತೆ ಆ ಸರ್ವವೂ ಮಿಲನಗೊಳ್ಳುತ್ತವೆ.

ಅಂತಿಮವಾಗಿ, ಈ ಎಲ್ಲ 'ಸೀಮೆಗಳನ್ನು' ನಿರ್ಮೂಲನೆಗೊಳಿಸುವದೇ ಅತಿ ಅವಶ್ಯವಾದ ಸಂಗತಿಯಾಗಿದೆ.

**– ಶ್ರೀಮಾತೆ: ಭಕ್ತನೋರ್ವನೊಡನೆ ಸಂದರ್ಶನ, ಜುಲೈ 3, 1963**

## ದೈವೀ ಸ್ಪರ್ಶ

ಇಂತಹ ಒಂದು ಸಂದರ್ಭವನ್ನು ನಾನು ಫ್ರಾನ್ಸನಲ್ಲಿ ಇದ್ದಾಗ ಕಂಡಿದ್ದೇನೆ. ಅದು ಬಹಳ ಹಿಂದೆ ನಡೆದ ಘಟನೆ. ಅಂದರೆ ನಾನಿನ್ನೂ ಆಗ ಬಹಳ ಚಿಕ್ಕ ಹುಡುಗಿ. ಇನ್ನೂ ಯಾವುದೇ ಶಿಕ್ಷಣವನ್ನು ಪಡೆಯಲು ಪ್ರಾರಂಭಿಸುವ ಮುಂಚಿನ ಅವಧಿಯಲ್ಲಿ ನಡೆದ ಘಟನೆ ಎಂದುಕೊಳ್ಳುತ್ತೇನೆ. ಯಾವುದೇ ಸಲಹೆಯೂ ಸಿಗದ ಹಂತದಲ್ಲಿದ್ದಾಗಲೂ ಎಂದು ಭಾವಿಸಿದ್ದೇನೆ.

ಅವಳು ಒಪೆರಾ ನೃತ್ಯಗಾರ್ತಿಯಾಗಿದ್ದಳು. ಬಹಳ ಒಳ್ಳೆಯವಳೂ ಆಗಿದ್ದಳು. ನಂತರ ಅವಳನ್ನು ಎಂಟನೇ ವಯಸ್ಸಿನಲ್ಲಿ ಶಾಲೆಗೆ ಸೇರಿಸಲಾಯಿತು. ಅಂದರೆ ಸಾಮಾನ್ಯವಾಗಿ ಎಲ್ಲರನ್ನೂ ಶಾಲೆಗೆ ಸೇರಿಸುವ ಪದ್ಧತಿಯಂತೆಯೇ ಇತ್ತು. ಒಂದು ಶಿಶುವಿಗೆ ಶಿಕ್ಷಣ ಕೊಡಲು ಪ್ರಾರಂಭಿಸುವ ಪದ್ಧತಿಯ ಪ್ರಕಾರವೇ ಅದೂ ಇತ್ತು. ಅಲ್ಲಿ ಅವಳು ಇತಿಹಾಸ, ಭೂಗೋಳ, ಗಣಿತ ಮತ್ತಿತರ ವಿಷಯಗಳನ್ನು ಕಲಿಯುವ ಬದಲು ನೃತ್ಯ ಮಾಡುವದನ್ನು ಕಲಿತುಕೊಂಡಳು. ಅವಳಿಗೆ ಅವಳನ್ನು ಹೇಗೆ ಅಭಿವ್ಯಕ್ತಗೊಳಿಸಿಕೊಳ್ಳಬೇಕೆನ್ನುವದು ತಿಳಿದಿರಲಿಲ್ಲ. ಅವಳ ಜಾಣ್ಮೆಯನ್ನು

ಸಾಕ್ಷಾಧಾರಗಳ ಮೂಲಕ ಪ್ರಕಟಪಡಿಸುವದಕ್ಕೂ ಸಹಿತ ತರಬೇತುಗೊಳ್ಳಲಿಲ್ಲ. ಅದೆಲ್ಲ ಸರಿ, ಆದರೆ ಅವಳು ಆಕರ್ಷಣೆಗೊಳಪಟ್ಟು ಅತ್ಯಂತ ಅವಶ್ಯವಾದ ಹಂತವನ್ನಾಗಿಸಿಕೊಂಡು ಅನುಭಾವ ಪಡೆಯಲು ಮತ್ತೆ ಅವಳು ತನ್ನನ್ನು ತಾನೇ ಪರಿಶುದ್ಧಗೊಳಿಸಿಕೊಂಡು "ಆ ದೇವನಿಗೆ" ನೃತ್ಯ ಮಾಡುವದನ್ನು ಕಲಿತಿದ್ದಳು. "ಅವನ" ಗೌರವ ಸಮರ್ಪಣೆಗಾಗಿ "ಪ್ರಥಮದಲ್ಲಿ" ನೃತ್ಯವನ್ನು ಮಾಡಿದ್ದಳು. ಅಂದರೆ ನಾಟ್ರಿ ಡೇಟಿನ ಜಿಗ್ರಲ್ ಹಾಗೆ ಪ್ರಾರಂಭಿಸಿದ್ದಳು. ಅವಳು ನಿಜವಾಗಿಯೂ ಗಮನಾರ್ಹವಾಗಿಯೇ ನರ್ತಿಸಿದ್ದಳು. ಆದಾದ ಮೇಲೆ, ಇದ್ದಕ್ಕಿದ್ದಂತೆ, ತನ್ನ ಅನುಭವಗಳನ್ನು ಅಭಿವ್ಯಕ್ತಗೊಳಿಸಲು ಯತ್ನಿಸಿದ್ದಳು. ಆಗಿನಿಂದಲೇ ಅವಳು ನಾಟಕಗಳನ್ನು/ನೃತ್ಯರೂಪಕಗಳನ್ನು ಬರೆಯಲು ಪ್ರಾರಂಭಿಸಿದ್ದಳು. ಅವು ಅತ್ಯದ್ಭುತವಾಗಿ ಕಾವ್ಯಾತ್ಮವಾಗಿಯೇ ಇದ್ದವು. ಅವಳು ಅತ್ಯಂತ ಆಶ್ಚರ್ಯಜನಕ ಸಂಗತಿಗಳನ್ನೇ ಹೇಳಿದ್ದಳು. ಹಾಗೂ ಅವುಗಳನ್ನು ಮತ್ತೂ ಅಚ್ಚರಿದಾಯಕವಾಗಿರುವಂತೆ ಹೇಳಿದ್ದಳು. ಹಾಗೂ ಅವುಗಳನ್ನು ಮತ್ತೂ ಹೆಚ್ಚು ಹೆಚ್ಚು ಆಶ್ಚರ್ಯಪಡುವಂತೆ ಹೇಳಿದ್ದಳು. ಒಂದಾದ ಮೇಲೆ ಒಂದರಂತೆ ಪುಟಗಟ್ಟಳೇ ಹೇಳುತ್ತಿದ್ದಳು. ಅವಳ ಅತ್ಯಪೂರ್ವವಾದ ವಾಕ್ಪಟುತ್ವದಲ್ಲಿಯೇ ಅವಳು ಬರೆದಿದ್ದಳು.

ಇದೆಲ್ಲವೂ ಘಟಿಸಲು ಕಾರಣವಾದದ್ದೆಂದರೆ, ಕೆಲವು ಸಂದರ್ಭಗಳ ಕಾರಣದಿಂದಾಗಿ, ಅವಳು ಕೆಲವೊಂದು ತೊಂದರೆಗಳನ್ನೂ ಅನುಭವಿಸ–ಬೇಕಾಯಿತು. ಅವಳಲ್ಲಿ ಇದ್ದ ಆ 'ಒಂದು' ವಿಶೇಷ ಸ್ವಭಾವವು ಅವಳನ್ನು ಮತ್ತೆ ಮತ್ತೆ ಅವಳ ಹಿಂದಿನ ಸ್ವಭಾವಕ್ಕೆ – ಅಂದರೆ ಯಾವುದನ್ನು ಅವಳು ತ್ಯಜಿಸಿ ಬಂದಿದ್ದಳೋ – ಆ ಸ್ವಭಾವವು ಅವಳನ್ನು ಹೆಚ್ಚು ಲೌಕಿಕವಾದಿಯನ್ನಾಗಿ ಮತ್ತು ವ್ಯಾವಹಾರಿಕವಾಗಿರುವಂತೆ ಮಾಡಿತ್ತು. ಅವಳು ಅವುಗಳನ್ನು ಬಾಹ್ಯ ದೃಷ್ಟಿಕೋನದಿಂದ ಗಮನಿಸುವಂತೆ ಮಾಡಿತ್ತು. ಅಂತಹ ಸಮಯದಲ್ಲಿಯೂ ಅವಳು ಆ ಕ್ಷಣದಲ್ಲಿ ಒಂದೆರಡು ಶಬ್ದಗಳನ್ನೂ ಹೇಳಲು ಸಮರ್ಥಳಾಗಿರುತ್ತಿರಲಿಲ್ಲ. ತಪ್ಪುಗಳಿಲ್ಲದೇ ಒಂದೇ ಒಂದು ಸಾಲನ್ನೂ ಬರೆಯಲು ಆಗುತ್ತಿರಲಿಲ್ಲ.

ಆದರೆ ಯಾವಾಗ ಅವಳು ಆ ಪ್ರೇರಣೆಯ ಹಂತದಲ್ಲಿ ಇರುತ್ತಿದ್ದಳೋ, ಆಗ ಯಾವುದೇ ತಪ್ಪುಗಳಿಲ್ಲದೇ, ಸರಾಗವಾಗಿ ಬರೆಯುತ್ತಿದ್ದಳು. ಅದೂ ಒಬ್ಬ ಸುಪ್ರಸಿದ್ಧ ಬರಹಗಾರನ ಬರಹದಂತೆಯೇ ಇರುತ್ತಿತ್ತು. ಆದರೆ ಯಾವಾಗ "ಆ ಪ್ರೇರಣಾ ಸ್ವಭಾವದಿಂದ" ಹೊರಗೆ ಬರುತ್ತಲೇ, –ಅಂದರೆ ಜೀವನದ, ಈ

ಭೂಬದುಕಿನ ಚೇತವಾವಸ್ಥೆಗೆ ಬರುತ್ತಿದ್ದಂತೆ, ಜೀವನದ ಬೇಡಿಕೆಗಳು ಪ್ರತಿ ನಿಮಿಷದ ಅವಶ್ಯಕತೆಗಳು ಅವುಗಳನ್ನು ಪೂರೈಸಿಕೊಳ್ಳಬೇಕಾದ ಹಂತಕ್ಕೆ ಬರುತ್ತಲೇ, ಅವಳಲ್ಲಿ ಇದ್ದ ಆ ವಿಶೇಷ ಸ್ವಭಾವವು ಮರೆಯಾಗುತ್ತಿತ್ತು. ಆಗ ಅವಳಿಗೆ ಒಂದೇ ಒಂದು ಸಾಲನ್ನೂ ಬರೆಯಲಾಗುತ್ತಿರಲಿಲ್ಲ. ಬರೆದರೂ ಅದು ಅಪರಿಷ್ಕೃತವಾದ ಲೇಖನದಂತೆ ಇರುತ್ತಿತ್ತು.

ಆದ್ದರಿಂದ. ನೀವು ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ – ಯಾರೇ ಆಗಲಿ ನೈಜ ಚೈತನ್ಯವನ್ನು ಹೊಂದಿದ್ದರೆ, ಆಗ ಅಲ್ಲಿ ಪರಿಹಾರಗೊಳ್ಳದ ಯಾವುದೇ ಸಮಸ್ಯೆಯೂ ಉಳಿಯುವದಿಲ್ಲ. ನೀವು ಏನಾಗಬೇಕೆಂದು ಬಯಸುತ್ತೀರೋ ಅದೇ ಆಗುವಿರಿ; ನೀವು ಏನನ್ನು ಅರಿತುಕೊಳ್ಳು ಬಯಸುತ್ತೀರೋ ಅದನ್ನೇ ಅರಿತುಕೊಳ್ಳುತ್ತೀರಿ. ಮತ್ತೆ ನೀವು ಏನನ್ನು ಮಾಡಬೇಕೆಂದು ಆಶಿಸುತ್ತೀರೋ ಅದನ್ನೇ ಮಾಡಲೂ ಸಮರ್ಥರಾಗುತ್ತೀರಿ. ಮತ್ತೆ ಅಲ್ಲಿ ಯಾವುದೇ ತೊಂದರೆಗಳು ಎಂದಿಗೂ ನಿಮ್ಮನ್ನು ಬೆನ್ನು ಹತ್ತುವದಿಲ್ಲ. ಅವುಗಳನ್ನು ನೀವು ತಕ್ಷಣದಲ್ಲಿಯೇ ಪರಿಹಾರ ಮಾಡಿಕೊಂಡಿರುತ್ತೀರಿ.

ಈ ಪ್ರಕರಣದಲ್ಲಿ ನಾನು ವಿವರಿಸುತ್ತಿರುವದೇನೆಂದರೆ, ಯಾವುದು ಅವಳನ್ನು ಕೆಳಗೆ ತಳ್ಳಿತ್ತೋ ಅದು ಅವಳಲ್ಲಿ ಇದ್ದ ಅಂಶವಾಗಿರಲಿಲ್ಲ. ಅದು ಬೇರೆಯದೇ ಆದ ವ್ಯಕ್ತಿಯಾಗಿತ್ತು. ಮತ್ತೆ ದುದೃಷ್ಟವಶಾತ್ ಆ ಘಟನೆ ಮೇಲಿಂದ ಮೇಲೆ ಜರುಗುತ್ತದೆ. ಯಾರೋ ಒಬ್ಬರು ಜೀವನದಲ್ಲಿ ಕೆಲವು ಹೊಣೆಗಾರಿಕೆಗಳ, ತೊಂದರೆಗಳನ್ನು ವಹಿಸಿಕೊಂಡು, ಆ ವ್ಯಕ್ತಿಯನ್ನು ಪ್ರಗತಿಯ ಪಥದಿಂದ ತಡೆಯುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/394–95**

## ವಿಶ್ವಾಸದ ಶಕ್ತಿ ಮತ್ತು ನಿರಾಸಕ್ತಿ; ಶ್ರೀಮಾನ್ ಹುಲಿರಾಯ!

ಇದೊಂದು ಬೌದ್ಧ ಧರ್ಮದ ಕಥೆ. ಬಹುಶಃ ನಿಮಗದು ಗೊತ್ತಿರಲೂಬಹುದು. ಇದು ನೂತನವಾದ ಕಥೆ. ತುಂಬ ವಿಶ್ವಾಸನೀಯವಾದ ಘಟನೆಯನ್ನು ಆಧರಿಸಿದೆ. ನಾನು ಅದನ್ನು ಮೇಡಮ್ 'ಅ'ಳಿಂದ ಕೇಳಿದ್ದೆ. ಅವಳು ನಿಮಗೂ ಗೊತ್ತಿರಬಹುದು. ಅವಳು ಓರ್ವ ಪ್ರಸಿದ್ಧ ಬೌದ್ಧ ಸಂಪ್ರದಾಯೀ ಮಹಿಳೆ ಆಗಿದ್ದರು. ಅವಳು ವಿಶೇಷವಾಗಿ ಲ್ಹಾಸಾಗೆ ಪ್ರವೇಶ

ಪಡೆದ ಪ್ರಪ್ರಥಮ ಯುರೋಪ ಮಹಿಳೆಯಾಗಿದ್ದಳು. ಅವಳ ಟಿಬೇಟ ಪ್ರವಾಸವು ಅತ್ಯಂತ ಆಪತ್ಕಾರಿ ಘಟನೆಗಳಿಂದಲೇ ಕೂಡಿತ್ತು. ಅಲ್ಲದೇ ಅದು ರೋಮಾಂಚಕಾರಿಯೂ ಆಗಿತ್ತು. ತನ್ನ ಪ್ರವಾಸದ ಬಗೆಗೆ ಒಂದು ಘಟನೆಯನ್ನು ಅವಳು ನನಗೆ ತಿಳಿಸಿದ್ದಳು. ನಾನೀಗ ಅದನ್ನೇ ನಿಮಗೆ ಹೇಳುತ್ತಿದ್ದೇನೆ.

ಅವಳು ಕಾರವಾನ್ ಒಂದರ ಸಂಗಡ ಪ್ರವಾಸ ಮಾಡಬೇಕಾಗಿತ್ತು. ಕೆಲವು ವ್ಯಕ್ತಿಗಳ ಜೊತೆಗೆ ಈ ಕಾರವಾನದಲ್ಲಿ ಅವಳು ಸಂಚಾರ ಮಾಡಬೇಕಿತ್ತು. ಅದೂ ಅಲ್ಲದೇ ಟಿಬೇಟನ್ನು ತಲುಪಲು ಇಂಡೋ–ಚೀನಾ ಮಾರ್ಗವೇ ಸುಲಭವಾಗಿದ್ದರಿಂದ, ಆ ಕಾರವಾನ ಅದೇ ಮಾರ್ಗದಲ್ಲಿಯೇ ಚಲಿಸಿತ್ತು. ಈ ಇಂಡೋ–ಚೀನಾ ಮಾರ್ಗವು ದಟ್ಟವಾದ ಮತ್ತು ಅಷ್ಟೇ ಬೃಹತ್ತಾದ ಅರಣ್ಯದಿಂದ ತುಂಬಿತ್ತು. ಜೊತೆಗೆ ಅಲ್ಲಿ ಹುಲಿಗಳ ಕಾಟವೂ ವಿಪರೀತವಿತ್ತು. ಅವುಗಳಲ್ಲಿ ಕೆಲವು "ನರಭಕ್ಷಕ ಹುಲಿಗಳೂ" ಇದ್ದವು. ಇಂತಹ ಘಟನೆಯನ್ನು ಕಂಡೇ ಅವಳು "ಶ್ರೀಮಾನ್ ಹುಲಿರಾಯ" ಎಂದು ಕರೆದಿದ್ದರು.

ಒಂದು ದಿನ ಸಂಜೆಯ ಸಮಯದಲ್ಲಿ, ಅವರಿನ್ನೂ ಅರಣ್ಯದ ದಟ್ಟ ಭಾಗದಲ್ಲಿಯೇ ಸಾಗುತ್ತಿದ್ದ ಸಂದರ್ಭದಲ್ಲಿ – ಅಂದರೆ ಅವರು ಆ ಭಾಗವನ್ನು ದಾಟಿ ಮುಂದೆ ಸಾಗಿ, ಅಲ್ಲಿ ಕ್ಯಾಂಪ್ ಮಾಡುವ ಯೋಜನೆ ಇತ್ತು. ಆಗ ಮೇಡಮ್ 'ಅ'ಳಿಗೆ ಧ್ಯಾನದ ಸಮಯವಾಗಿತ್ತು. ಆಗ ಅವಳು ಧ್ಯಾನಕ್ಕಾಗಿ ಒಂದು ನಿಗದಿತವಾದ ಸಮಯವನ್ನು ರೂಪಿಸಿಕೊಂಡಿದ್ದಳು. ಅದನ್ನು ಚಾಚೂ ತಪ್ಪದೇ ಪಾಲಿಸಿಕೊಂಡೂ ಬಂದಿದ್ದಳು. ಹೀಗಾಗಿ ಅವಳು ತನ್ನ ಧ್ಯಾನವನ್ನು ಪೂರೈಸಿಕೊಂಡು, ನಂತರ ನಿಮ್ಮನ್ನು ಬಂದು ಸೇರಿಕೊಳ್ಳುತ್ತೇನೆ, ನೀವೆಲ್ಲ ಮುಂದೆ ಸಾಗುತ್ತಿರಿ, ಎಂದು ಕಾರವಾನಿನ ಇತರ ಸದಸ್ಯರಿಗೆ ಹೇಳಿದ್ದಳು. ಆ ಕಾರವನದಲ್ಲಿದ್ದ ಒಬ್ಬ ಕೂಲಿ ಆಗ ತಕ್ಷಣವೇ, 'ಓ.. ಓ.!!' ಬೇಡ ಬೇಡ ಮೇಡಮ್, ಇದು ಇಲ್ಲಿ ಸಾಧ್ಯವೇ ಇಲ್ಲ. ಎಂದಿಗೂ ಸಾಧ್ಯವಾಗುವದಿಲ್ಲ ಎಂದು ತನ್ನ ಮಾತೃಭಾಷೆಯಲ್ಲಿಯೇ ಚೀರಿದ್ದನು. ಅದು ಸಹಜವೂ ಆಗಿದ್ದಿತು. ಆದರೆ ಅವಳು ಮಾತ್ರ ಅದಕ್ಕೆ ಒಪ್ಪಿರಲಿಲ್ಲ.

ಅವಳಿಗೆ ಟಿಬೇಟಿಯನ್ನರು ಮಾತನಾಡುತ್ತಿದ್ದ ರೀತಿಯಲ್ಲಿಯೇ ಟಿಬೇಟ ಮಾತನಾಡಲೂ ಬರುತ್ತಿತ್ತು. ಆ ಕೂಲಿ ಮತ್ತೆ ಹೇಳಿದ್ದೇನೆಂದರೆ, ಇದು ಸಾಧ್ಯವೇ ಇಲ್ಲ ಮೇಡಮ್, ಇಲ್ಲಿ ಶ್ರೀಮಾನ್ ಹುಲಿರಾಯನಿದ್ದಾನೆ, ಅವನು ತನ್ನ ಆಹಾರಕ್ಕಾಗಿ ಅರಸುತ್ತಿದ್ದಾನೆ. ಹೀಗಾಗಿ ನಾವು ನಿಮ್ಮನ್ನು ಬಿಟ್ಟುಹೋಗಲು

ಸಾಧ್ಯವಿಲ್ಲ, ಅದೂ ಅಲ್ಲದೇ ನೀವು ಇಲ್ಲಿ ನಿಲ್ಲುವಂತೆಯೂ ಇಲ್ಲ! ಎಂದು ಹೇಳಿದ್ದನು. ಅದಕ್ಕೆ ಅವಳು ಉತ್ತರಿಸಿದ್ದೇನೆಂದರೆ, ಅದು ತನಗೇನೂ ಮಾಡುವದಿಲ್ಲ. ಇಲ್ಲಿ ನಾನು ಸುರಕ್ಷತೆಯಲ್ಲಿಯೇ ಧ್ಯಾನವನ್ನು ಮುಗಿಸುತ್ತೇನೆ. ಏಕೆಂದರೆ ಸುರಕ್ಷತೆಗಿಂತಲೂ ಧ್ಯಾನವು ಮತ್ತೂ ಮಹತ್ವದ್ದಾಗಿದೆ. ಅವಳ ಮಾತುಗಳನ್ನು ಕೇಳಿದ ಅವರೆಲ್ಲರೂ ಅಲ್ಲಿಂದ ಮುಂದೆ ಹೋಗಿದ್ದರು. ಅಲ್ಲಿ ಅವಳೋರ್ವಳೇ ಉಳಿದಳು.

ಮನಸ್ಸಿಲ್ಲದ ಮನಸ್ಸಿನಿಂದಲೇ ಅವರೆಲ್ಲರೂ ಹೊರಟುಹೋದ ಮೇಲೆ, ಅದೂ ಅಲ್ಲದೇ ಅವಳೊಡನೆ ತರ್ಕ ಮಾಡಲೂ ಸಾಧ್ಯವಿಲ್ಲದ ಕಾರಣದಿಂದ ಅವರು ಅಲ್ಲಿಂದ ತೆರಳಿದ್ದರು. ಯಾವಾಗ ಏನು ಮಾಡಬೇಕೆಂದು ಅವಳು ನಿರ್ಧರಿಸುತ್ತಿದ್ದಳೋ, ಅದರಿಂದ ಅವಳನ್ನು ತಪ್ಪಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಅವರೆಲ್ಲರೂ ಹೊರಟುಹೋದ ಮೇಲೆ, ಅವಳು ಒಂದು ಮರದ ಬುಡದಲ್ಲಿ ನಿರಮ್ಮಳವಾಗಿ ಕುಳಿತುಕೊಂಡಳು. ಅಲ್ಲಿಯೇ ಧ್ಯಾನವನ್ನು ಪ್ರಾರಂಭಿಸಿದ್ದಳು. ಧ್ಯಾನದಲ್ಲಿ ತೊಡಗಿಕೊಂಡ ಸ್ವಲ್ಪ ಸಮಯದಲ್ಲಿಯೇ ಅವಳಿಗೆ ಸಂತಸದಾಯಕವಲ್ಲದ ಯಾವುದೋ ಒಂದು ಘಟನೆಯ ಅನುಭವವಾಯಿತು. ಅದು ಏನು ಎಂದು ಗಮನಿಸುವ ಸಲುವಾಗಿ, ನಿಧಾನವಾಗಿ ಕಣ್ಣು ತೆರೆದು ನೋಡಿದಾಗ, ಅವಳಿಂದ ಕೇವಲ ನಾಲ್ಕಾರು ಹೆಜ್ಜೆಗಳ ಅಂತರದಲ್ಲಿ, ಅದೂ ನೇರವಾಗಿ ಅವಳ ಮುಂದೆಯೇ ಆ ಶ್ರೀಮಾನ್ ಹುಲಿರಾಯ (ನರಭಕ್ಷಕ) ನಿಂತಿದ್ದ! ಅದೂ ಕಣ್ಣುಗಳ ತುಂಬ ದುರಾಶೆಯನ್ನು ತುಂಬಿಕೊಂಡು ಮತ್ತೂ ವಿಶಾಲವಾಗಿಯೇ ಕಣ್ಣುಗಳನ್ನು ತೆರೆದುಕೊಂಡು ನಿಂತಿತ್ತು. ಆಗ ಅವಳು ಓರ್ವ ಪರಿಪೂರ್ಣ ಬೌದ್ಧಾನುಯಾಯಿಯಂತೆ ಹೇಳಿದ್ದು, ‘ಒಳ್ಳೆಯದು, ಒಂದು ವೇಳೆ ಈ ರೀತಿಯಾಗಿ ನಾನು ನಿರ್ವಾಣವನ್ನು ಪಡೆಯುತ್ತೇನೆ ಎಂದರೆ, ಅದೂ ಒಳ್ಳೆಯದೇ ಆಯಿತು’. ನಾನೀಗ ಈ ದೇಹವನ್ನು ಬಿಡಲು ಸೂಕ್ತ ರೀತಿಯಲ್ಲಿ ಸಿದ್ಧಗೊಳಿಸಿಕೊಳ್ಳಬೇಕು. ಅದೂ ಸೂಕ್ತವಾದ ವಿಧದಲ್ಲಿ. ಮತ್ತೆ ಅಲ್ಲಿಂದ ಕೊಂಚವೂ ಅತ್ತಿತ್ತ ಚಲಿಸದಂತೆ – ಸ್ವಲ್ಪವೂ ನಡುಕವಿಲ್ಲದಂತೆ, ಅವಳು ಮತ್ತೆ ಕಣ್ಣುಗಳನ್ನು ಮುಚ್ಚಿಕೊಂಡು ಧ್ಯಾನದಲ್ಲಿ ತೊಡಗಿಕೊಂಡಿದ್ದಳು. ಈ ಬಾರಿ ಮತ್ತೂ ಆಳವಾದ ಧ್ಯಾನದಲ್ಲಿ ತೊಡಗಿಕೊಳ್ಳಲು ಸಿದ್ಧತೆ ಮಾಡಿಕೊಂಡಳು. ಅದೂ ಧ್ಯಾನದ ಪರಿಪೂರ್ಣತೆಯನ್ನು ಪಡೆಯುವ ಉದ್ದೇಶದ ಮಾದರಿಯಲ್ಲಿ ಇತ್ತು. ಅಂದರೆ ಈ ಜಗತ್ತಿನ ಎಲ್ಲ ಭ್ರಮೆಗಳಿಂದ ದೂರವಾಗಿದ್ದುಕೊಂಡು,

ನಿರ್ವಾಣಗೊಳ್ಳಲು ಸಿದ್ಧತೆ ಮಾಡಿಕೊಂಡಳು. ಈ ಹಂತದಲ್ಲಿಯೇ ಐದು ನಿಮಿಷ, ಹತ್ತು ನಿಮಿಷ, ಮುವತ್ತು ನಿಮಿಷವೇ ಕಳೆದವು. ಆದರೆ ಅಲ್ಲಿ ಅಂತಹ ವಿಶೇಷವೇನೂ ಘಟಿಸಲೇ ಇಲ್ಲ. ಆ ಹಂತದ ಧ್ಯಾನದ ನಂತರದಲ್ಲಿ ಅವಳು ಮತ್ತೆ ತನ್ನ ಕಣ್ಣುಗಳನ್ನು ತೆರೆದು ನೋಡಿದಾಗ, ಅಲ್ಲಿ ಆ 'ನರಭಕ್ಷಕ' ಇರಲೇ ಇಲ್ಲ! ಚಲನಶೀಲತೆಯೇ ಇಲ್ಲದ ಶರೀರವೊಂದನ್ನು ನೋಡಿದ ಹುಲಿಯೇ, ಇದು ತನ್ನ ಆಹಾರಕ್ಕೆ ಯೋಗ್ಯವಲ್ಲವೆಂದುಕೊಂಡು ಹಿಂದಿರುಗಿರಬೇಕು! ಹುಲಿಗಳಿಗಾಗಲಿ ಅಥವಾ ಯಾವುದೇ ವನ್ಯಪ್ರಾಣಿಗಳೂ – ಕಿರುಬನನ್ನು ಮಾತ್ರ ಹೊರತು ಪಡಿಸಿ – ಮೃತದೇಹದ ಮೇಲೆ ದಾಳಿ ಮಾಡುವದಿಲ್ಲ. ಮತ್ತು ಅದನ್ನು ತಿನ್ನುವದಿಲ್ಲ. ಈ ಅಚಲತ್ವದ ಹಂತದಿಂದ ಆ ಹುಲಿಯು ಪ್ರಭಾವಿತಗೊಂಡಿರಬೇಕು. ಆದರೆ ಅದೇ ಧ್ಯಾನದ ತಲ್ಲೀನತೆಯಲ್ಲಿ ಇದು ಘಟಿಸಿದೆ ಎಂದು ನಾನು ಹೇಳುತ್ತಿಲ್ಲ! ಅದು ಅಲ್ಲಿಂದ ತಾನೇ ಹಿಂದಿರುಗಿ ಹೋದ ಮೇಲೆ, ಅವಳಿಗೆ ತನ್ನ ಒಂಟಿತನದ ಹಂತದಲ್ಲೂ ಸಹಿತ ಅಪಾಯದಿಂದ ಪಾರಾದುದನ್ನು ಅರಿತುಕೊಂಡಳು. ನಂತರದಲ್ಲಿ ಅವಳು ಮೌನವಾಗಿ, ತಾನು ಸಾಗಬೇಕಾದ ಕ್ಯಾಂಪ್ ಕಡೆಗೆ ನಡೆದಳು. 'ಇದೋ ನೋಡಿ ನಾನು ಮತ್ತೆ ಬಂದಿದ್ದೇನೆ' ಎಂದು ಹೇಳಿದ್ದಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/53–54 – ಶ್ರೀಮಾತೆ**

### ಇಚ್ಚೆಯನ್ನೂ ಮೀರಿ ಬರುವ ಆ ಹರ್ಷ

ಬುದ್ಧನು ಹೇಳುವದೇನೆಂದರೆ, 'ಆಶೆಯನ್ನು ತೃಪ್ತಿಪಡಿಸುವದಕ್ಕಿಂತ ಅದನ್ನು ಮೀರಿ ಮೇಲೆ ಬಂದಲ್ಲಿ ಆಗ ಅಲ್ಲಿ ಪರಮೋಚ್ಚ ಹರ್ಷವಿರುತ್ತದೆ'. ಈ ಅನುಭವವನ್ನು ಪ್ರತಿಯೊಬ್ಬರೂ ಪಡೆಯಬಹುದಾಗಿದೆ, ಅಲ್ಲದೇ ಅದು ತುಂಬ ತುಂಬ ಆಸಕ್ತಿದಾಯಕವಾದ ಸಂಗತಿಯೂ ಆಗಿದೆ.

ಇದು ನಡೆದದ್ದು ಪ್ಯಾರಿಸ್‌ದಲ್ಲಿ. ಅಲ್ಲಿ ಆ ಕಾರ್ಯಕ್ರಮಕ್ಕೆ ಆಹ್ವಾನಿಸಲ್ಪಟ್ಟಿದ್ದ ವ್ಯಕ್ತಿಗೆ ಅದು ಪ್ರಥಮ ರಾತ್ರಿಯಾಗಿತ್ತು. (ಪ್ರಥಮ ರಾತ್ರಿ ಎಂದರೆ, ಪ್ರಪ್ರಥಮವಾಗಿ ಪ್ರದರ್ಶನ ನೀಡುವ ಕಲಾವಿದರಿಗೆ ಅವಕಾಶ ಒದಗಿಸಿ ಕೊಡುವ ಸಂದರ್ಭ). ಅದು ಮ್ಯಾಸೆಂಟೆಯ ಒಪೆರಾ ಆಗಿತ್ತು. ಅದು ಯಾರದ್ದಾಗಿತ್ತು ಎನ್ನುವದು ನನಗೀಗ ನೆನಪಿಲ್ಲ. ಅದೂ ಅಲ್ಲದೇ ನನ್ನ ನೆನಪೂ ಇದಕ್ಕೆ ಸಹಕರಿಸುತ್ತಿಲ್ಲ. ಆ ವಿಷಯ ಮಾತ್ರ ಅತ್ಯಂತ ಸುಂದರವಾಗಿತ್ತು. ಅವರು ನೀಡಿದ ಅಭಿನಯ, ಆ

ನಾಟಕ, ಉತ್ತಮವಾಗಿತ್ತು. ಅದೂ ಅಲ್ಲದೇ ಸಂಗೀತವೂ ಸಹಿತ ಅಷ್ಟೊಂದು ಕಳಪೆಯದ್ದೇನೂ ಆಗಿರಲಿಲ್ಲ. ಮುಖ್ಯವಾಗಿ ಅದೊಂದು ಆ ವ್ಯಕ್ತಿಗೆ ದೊರೆತ ಪ್ರಪ್ರಥಮ ಅವಕಾಶವಾಗಿತ್ತು. ಸರಕಾರೀ ರಂಗಮಂದಿರಗಳಲ್ಲಿ, ಪ್ರಪ್ರಥಮ ಪ್ರದರ್ಶನವನ್ನು ನೀಡಲು 'ಮಿನಿಸ್ಟರ್ ಆಫ್ ಫೈನ್ ಆರ್ಟ'ನ ಗ್ಯಾಲರಿಗೆ, ಎಲ್ಲರಿಗೂ ಅವಕಾಶ ಕೊಡಲಾಗುತ್ತಿತ್ತು. ಈ ಮಿನಿಸ್ಟರ್ರ ಆಫ್ ಫೈನ್ ಆರ್ಟನ ವ್ಯಕ್ತಿ ತುಂಬ ಸರಳವಾದ ಮನುಷ್ಯ. ಸಾಮಾನ್ಯವಾಗಿ ಅವನು ಪ್ಯಾರೀಸನಲ್ಲಿ ಇರುತ್ತಿರಲಿಲ್ಲ. ಅದೂ ಅಲ್ಲದೇ ಮಿನಿಷ್ಟ್ರಿಯಲ್ಲಿಯೇ ಅವನು ಕೊಂಚ ನೂತನ ವ್ಯಕ್ತಿಯಂತೆಯೇ ಇರುತ್ತಿದ್ದನು. ಅದಕ್ಕಿಂತ ಹೆಚ್ಚಾಗಿ ಅವನು ಎಲ್ಲವನ್ನೂ ಚಿಕ್ಕ ಮಕ್ಕಳ ರೀತಿಯಲ್ಲಿ ಸಂತೋಷ ಪಡುತ್ತಿದ್ದ. ಅದೇ ರೀತಿಯ ಕುತೂಹಲವನ್ನೂ ಹೊಂದಿದ್ದ. ಹೊಸ ಹೊಸ ವಸ್ತುಗಳನ್ನು ಕಾಣಲು ಸದಾ ಉತ್ಸುಕನಾಗಿದ್ದ. ಅವನು ತುಂಬ ಸೌಹಾರ್ದಪೂರ್ಣ ಹಾಗೂ ಮೃದು ಸ್ವಭಾವದವನೂ ಆಗಿದ್ದ. ಒಂದು ಬಾರಿ ಓರ್ವ ಮಹಿಳೆಯನ್ನು ಆಹ್ವಾನಿಸಿ, ಅಲ್ಲಿಗೆ ಕರೆದು, ರಂಗದ ಎದುರಿಗೇ ಇದ್ದ ಮುಂದಿನ ಆಸನವನ್ನು ಅವಳಿಗೆ ಕೊಟ್ಟು ತಾನು ಹಿಂದಿನ ಸೀಟಿನಲ್ಲಿ ಕುಳಿತುಕೊಂಡಿದ್ದನು. ಆದರೆ ಆ ಆಸನದಲ್ಲಿ ಅವನು ಅಸಂತುಷ್ಟನಾಗಿದ್ದ. ಕಾರಣವೆಂದರೆ ರಂಗದ ಮೇಲೆ ನಡೆಯುತ್ತಿರುವದನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಹಾಗೆ ಹೀಗೆ ಮುಂದೆ ಹಿಂದೆ ಹೀಗೆ ಬಾಗಿ ಬಾಗಿ ನೋಡುತ್ತಿದ್ದ. ಆದರೆ ಅಷ್ಟೆಲ್ಲ ಮಾಡಿದರೂ ಅದು ತೃಪ್ತಿದಾಯಕವಲ್ಲದ ಕಾರಣದಿಂದಾಗಿ ಅಸಮಾಧಾನದಿಂದ ಕೂಡಿದ್ದನು. ಆದರೂ ಅವನ ಈ ಕ್ರಿಯೆಯನ್ನು ಯಾರಿಗೂ ತೋರಗೊಡದಂತೆ ಪ್ರಯತ್ನಿಸುತ್ತಿದ್ದ. ಆದರೆ ಅಲ್ಲಿ ಮುಂದುಗಡೆಯ ಆಸನದಲ್ಲಿ ಕುಳಿತ ಮಹಿಳೆಯು ಇದನ್ನು ಗಮನಿಸುತ್ತಿದ್ದಳು. ಅವಳೂ ಸಹಿತ ಆ ನಾಟಕದಲ್ಲಿ ಆಸಕ್ತಿಯನ್ನು ಹೊಂದಿದ್ದಳು. ಅದು ಅವಳಿಗೆ ಉಲ್ಲಾಸ ಸಮಯದ ಘಟನೆಯಂತೆ ತೋರಿತ್ತು. ಅದೂ ಅಲ್ಲದೇ ಆ ನಾಟಕವನ್ನು (ಒಪೆರಾವನ್ನು) ತಾನು ಮೆಚ್ಚಿಕೊಳ್ಳಲಿಲ್ಲ ಎನ್ನುವ ಭಾವವೂ ಬರದಂತೆ, ಆ ಒಪೆರಾವನ್ನು ಅವಳು ಮೆಚ್ಚಿಕೊಂಡೇ ನೋಡಿದ್ದಳು. ಆದರೆ ಆ ಮಿನಿಸ್ಟರ್ ಮಾತ್ರ ಅಸಂತುಷ್ಟನಾಗಿರುವದನ್ನು ಅವಳು ಗಮನಿಸಿದ್ದಳು. ಅಂದರೆ ಅವನಿಗೆ ಈ ಒಪೆರಾವನ್ನು ನೋಡಲು ಸಾಧ್ಯವಾಗದಿರುವ ಕಾರಣಕ್ಕಾಗಿ ಅವನು ಅಸಂತುಷ್ಟನಾಗಿದ್ದಾನೆ ಎಂದುಕೊಂಡು, ಅಷ್ಟೇ ಶಾಂತವಾಗಿ ಅವನೆಡೆಗೆ ತಿರುಗಿ ಇಲ್ನೋಡಿ ಎನ್ನುತ್ತ, ಅವಳ ಖುರ್ಚಿಯನ್ನು ಹಿಂದೆ ಸರಿಸಿಕೊಂಡು ಮತ್ತೂ ಹಿಂದಕ್ಕೆ ಸರಿದು ಕುಳಿತುಕೊಂಡಳು. ಅವಳು ಬೇರೆ ವಿಷಯವನ್ನು

ಚಿಂತಿಸುತ್ತಿದ್ದರೂ ಸಹಿತ, ಅ ಮಿನಿಸ್ಟರ್ ಪೂರ್ತಿಯಾಗಿಯೇ ರಂಗದ ಎದುರಿಗೇ ಬರುವಂತೆ, ದೃಶ್ಯವನ್ನು ಪೂರ್ಣವಾಗಿ ಗಮನಿಸುವಂತೆ ಅನುಕೂಲವಾಗುವಂತೆ ಅನುವು ಮಾಡಿಕೊಟ್ಟಿದ್ದಳು. ಅವಳು ಈ ವಿಷಯವಾಗಿ ತನ್ನ ಅಭಿಲಾಷೆಯನ್ನೂ ಸಹಿತ ಬಿಟ್ಟುಕೊಟ್ಟಿದ್ದಳು.

ಅವಳ ಈ ಸ್ವಭಾವದಿಂದ ಅವಳಲ್ಲಿ ಒಂದು ನೆಮ್ಮದಿಯ, ಅಂತರಂಗಿಕವಾಗಿ ಆನಂದ ತುಂಬಿಕೊಂಡಿತು. ಎಲ್ಲ ವಸ್ತುಗಳ ಆಸಕ್ತಿಯೂ ಅನಾಸಕ್ತಿಯಾಗಿ ಪರಿವರ್ತಗೊಂಡು ಬಿಡುಗಡೆಯನ್ನು ಹೊಂದಿದಲ್ಲಿ, ಒಂದು ರೀತಿಯ ಶಾಂತತೆ ನೆಲೆಸುತ್ತದೆ. ತನ್ನ ಸಲುವಾಗಿಯೇ ತೃಪ್ತಿ ಹೊಂದುವದಕ್ಕಿಂತ, ಇನ್ನಿತರರಿಗಾಗಿ ಏನನ್ನಾದರೂ ಮಾಡುವ ಉದ್ದೇಶದಿಂದ ದೊರೆಯುವ ತೃಪ್ತಿಯನ್ನು ಅವಳು ಅವಳಲ್ಲಿಯೇ ಆ ಸಮಯದಲ್ಲಿ ಕಂಡುಕೊಂಡಿದ್ದಳು. ಒಟ್ಟಿನಲ್ಲಿ ಹೇಳಬೇಕೆಂದರೆ, ಆ ಸಂಜೆ ಅವಳಿಗೆ ಅಪರಿಮಿತವಾದ ಮಹತ್ತರವಾದ ಆನಂದವನ್ನು ತಂದಿತ್ತು. ಇದು ಕೇವಲ ಅವಳೊಬ್ಬಳೇ ಆ ಒಪೆರಾವನ್ನು ಪೂರ್ತಿ ಗಮನಿಸಿ ಸಂತೋಷ ಪಡುವದಕ್ಕಿಂತ ಎಷ್ಟೋ ಉತ್ತಮವಾಗಿತ್ತು.

ಇದೊಂದು ನೈಜ ಘಟನೆಯಾಗಿದೆ. ಯಾವುದೇ ಪುಸ್ತಕದಲ್ಲಿ ಬಂದ ಕಥೆಯು ಇದಲ್ಲ. ಅದರಲ್ಲೂ ಮಹತ್ವದ ಸಂಗತಿ ಎಂದರೆ, ಆಗ ಆ ವ್ಯಕ್ತಿಯು ಬೌದ್ಧ ಧರ್ಮದ ಅಧ್ಯಯನದಲ್ಲಿದ್ದ. ಹೀಗಾಗಿ ಬುದ್ಧನು ಹೇಳುತ್ತಿರುವಂತೆಯೇ ಅದನ್ನು ಸಾಕ್ಷೀಕರಿಸುವ ಸಲುವಾಗಿ ಅವಳು ಈ ಅನುಭವವನ್ನು ಒದಗಿಸಲು ಪ್ರಯತ್ನಿಸಿದ್ದಳು.

ಹೀಗಾಗಿ ಇದು ನಿಜವಾಗಿಯೂ ಗಟ್ಟಿಯಾದ ಅನುಭವವಾಗಿದೆ. ಇದು ನೈಜ ಘಟನೆ ಎನ್ನುವದು ನಿಮಗೆ ಈಗಾಗಲೇ ಹೇಳಿದ್ದೇನೆ. ಈ ಘಟನೆಯಾದ ಎರಡೇ ಎರಡು ಕ್ಷಣಗಳಲ್ಲಿ, ಈ ಒಪೆರಾ, ಆ ಸಂಗೀತ, ಆ ನಾಟಕ, ಆ ದೃಶ್ಯ, ಆ ಚಿತ್ರಗಳು ಎಲ್ಲವೂ ಮಹತ್ವದ್ದು ಎನಿಸುವದಿಲ್ಲ.

ಅದೂ ಅಲ್ಲದೇ ಈ ರೀತಿಯ ಓರ್ವ ವ್ಯಕ್ತಿತ್ವದಲ್ಲಿಯೇ ಕೆಲವೊಂದು ವಿಶೇಷವಾದ ಪ್ರಭುತ್ವವನ್ನು ಹೊಂದಿ ಈ ಸಂತೋಷವನ್ನು ಹೊಂದುವದು ಇದೆಯಲ್ಲ, ಅದು ಕೇವಲ ತನ್ನ ವೈಯಕ್ತಿಕಕ್ಕಾಗಿ ಏನನ್ನಾದರೂ ಮಾಡದೇ ಇದ್ದಲ್ಲಿ, ಆಗ ಆ ಸಂತೋಷವು ಯಾವುದೇ ಅಸ್ತಿತ್ವಕ್ಕೂ ಹೋಲಿಸಲು ಸಾಧ್ಯವಿಲ್ಲದ ಪರಿಶುದ್ಧವಾದ ಪ್ರಶಾಂತತೆಯನ್ನು ತುಂಬುತ್ತದೆ. ಅದೊಂದು

ಆನಂದಮಯದ ಅನುಭವವಾಗಿರುತ್ತದೆ... ಒಳ್ಳೆಯದು, ಇದು ಕೇವಲ ಓರ್ವ ವ್ಯಕ್ತಿಗತವಾದದ್ದಾಗಿರುವದಿಲ್ಲ. ವೈಯಕ್ತಿಕ ಅನುಭವವೂ ಆಗಿರುವದಿಲ್ಲ. ಯಾರು ಯಾರು ಇದನ್ನು ಪಡೆಯಲು ಯತ್ನಿಸುತ್ತಾರೋ, ಅವರೆಲ್ಲರೂ ಇದನ್ನು ಪಡೆಯುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/38–39**

## ಪ್ರಶಂಸೆಯ ಬಗೆಗೆ ಉದಾಸೀನತೆ

ಮೇಡಮ್ ಡೇವಿಡ್ ನೀಲಳ ಬಗೆಗೆ ನಾನು ಈಗಾಗಲೇ ನಿಮ್ಮ ಬಳಿ ಚರ್ಚಿಸಿದ್ದೇನೆ, ಅಲ್ಲವೇ? ಈ ಮೇಡಮ್ ಡೇವಿಡ್ ನೀಲಳು ಓರ್ವ ಬೌದ್ಧ ಧರ್ಮದ ಹೋರಾಟಗಾರಳಾಗಿದ್ದಳು. ಅದೂ ಅಲ್ಲದೇ ಬೌದ್ಧ ತತ್ವದ ಜ್ಞಾನನಿಧಿಯೂ ಆಗಿದ್ದಳು. ಅವಳು ಭಾರತಕ್ಕೆ ಬಂದಾಗ, ಅವಳು ಆ ಶ್ರೇಷ್ಠ ಋಷಿಗಳನ್ನು (ಸಾಧುಗಳನ್ನು) ಅಥವಾ ಗುರುಗಳನ್ನು ಸಂದರ್ಶಿಸಲು ತೆರಳಿದ್ದಳು.

ನಾನು ಇಲ್ಲಿ ಅವರ ಹೆಸರುಗಳನ್ನು ಉಲ್ಲೇಖಿಸಲು ಬಯಸುವದಿಲ್ಲ. ಆದರೆ ಅವಳು ಅವರ ಪೈಕಿ ಓರ್ವರ ಬಳಿ ಸಂದರ್ಶನಕ್ಕೆ ಬಂದಾಗ, ಅವಳನ್ನು ಕಂಡು, ಅವಳನ್ನು ಪ್ರಶ್ನಿಸಿದಾಗ – ಅವರೆಲ್ಲ ಯೋಗದ ಕುರಿತಾಗಿಯೇ ಮಾತನಾಡುತ್ತಿದ್ದರು. ಮತ್ತು ಅದರ ಸಲುವಾಗಿ ವೈಯಕ್ತಿಕ ಪ್ರಯತ್ನಗಳ ಬಗೆಗೂ ಚರ್ಚೆ ಮಾಡುತ್ತಿದ್ದರು. ಸಾಧನಾ ಪಥಗಳ ಬಗೆಗೂ ಚರ್ಚೆ ನಡೆಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಓರ್ವ ಗುರು ಅವಳನ್ನು, 'ನೀನು ಟೀಕೆಗಳ ಬಗೆಗೆ ಉದಾಸೀನ ಮನೋಭಾವವನ್ನು ಸಾಧಿಸಿಕೊಂಡಿದ್ದೀಯೇನು?' ಎಂದು ಕೇಳಿದ್ದರು. ಅದಕ್ಕೆ ಅವಳೂ ಸಹಿತ, 'ಯಾರಾದರೂ ನಾಯಿಯ ಬೊಗಳುವಿಕೆಗೆ ತಲೆಕೆಡಿಸಿಕೊಳ್ಳುತ್ತಾರೇನು?' ಎಂದು ಹೇಳಿದ್ದಳು.

ಆದರೆ ಅವಳು ಈ ಕಥೆಯನ್ನು ನನ್ನ ಮುಂದೆ ಹೇಳುವಾಗ ಅದಕ್ಕೆ ಮತ್ತೊಂದು ಜೊಡಣೆಯನ್ನೂ ಹೇಳಿದ್ದಳು. ಅದು ತುಂಬ ಪರಿಹಾಸಮಯವಾದ ಕಥೆಯಾಗಿತ್ತು ಅದು. 'ಸುದೈವವಶಾತ್ ಅವರು ನನಗೆ ಪ್ರಶಂಸೆಯ ಬಗೆಗೆ ಉದಾಸೀನಳಾಗಿದ್ದೀಯಾ' ಎಂದು ಕೇಳಲಿಲ್ಲ. ಅದಕ್ಕೆ ಉತ್ತರಿಸುವದು ತುಂಬ ಕಠಿಣ ಸಂಗತಿ ಇದಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/388**

## ಪ್ರತಿಯೊಬ್ಬರ ಅಂತರಂಗದಲ್ಲಿಯೂ ಪರಿಶುದ್ಧವಾದ ಸ್ವರ್ಣ ಬೀಜ

ಇದು ನಿಜವಾಗಿಯೂ ಇಲ್ಲಿ ಇದ್ದೇ ಇದೆ. ಇದಕ್ಕೆ ಯಾವುದೇ ಸಂಶಯವೂ ಬೇಡ. ಪ್ರತಿ ವ್ಯಕ್ತಿಗಳ ಅಂತರಂಗದಲ್ಲಿ ಇರುವ ಹಾಗೂ ಯಾವುದೇ ಕಾರಣಕ್ಕೂ ಅದನ್ನು ಬೇರು ಸಹಿತ ಕಿತ್ತೊಗೆಯಲಾಗದ ಹಾಗೆ ಇರುವ ವ್ಯತ್ಯಾಸಗಳು ಇವೆ. ಅವುಗಳಲ್ಲಿ ಒಂದು ತನ್ನದೇ ಸ್ಥಾನದಿಂದ (ಪಾತ್ರದಿಂದ) ಅದರ ಸ್ಥಳದಿಂದ, ಅವರ ಅಂತಸ್ತಿನಿಂದ ಅದೂ ಅನಂತವಾಗಿರುವ ಈ ಜೀವಗಳ ಕ್ರಮಾನುಗತ ಜೀವಿಗಳಲ್ಲಿ ಇದು ಸಹಜವಾಗಿರುತ್ತದೆ. ಆದರೆ ಇಲ್ಲಿ, ಯಾವುದೇ ಪಾತ್ರವಾಗಲೀ ಅಥವಾ ಸ್ಥಾನವಾಗಲೀ, ಅವು ಅವುಗಳ ಒಳಗೇ ಅವನ ಗುಣಗಳ ಪರಿಪೂರ್ಣತೆಗೆ ಪ್ರಗತಿಗೊಳ್ಳುತ್ತ ಇರುತ್ತವೆ. ಹೀಗಾಗಿ ಪ್ರತಿಯೋರ್ವನು ಇಂತಹ ಪರಿಪೂರ್ಣ ಪರಿಶುದ್ಧತೆಯನ್ನು, ಪ್ರಾಮಾಣಿಕತೆಯನ್ನು, ಅತ್ಯಂತ ಘನಿಷ್ಠವಾದ ಸಾಮರಸ್ಯವನ್ನು ಪಡೆಯುವ ಸಲುವಾಗಿ ಅಭೀಪ್ಸೆಯನ್ನು ಹೊಂದಲೇಬೇಕಾಗಿದೆ. ಏಕೆಂದರೆ ಇವೆಲ್ಲವೂ ಆ ವಿಶ್ವದ ನಿಯಮಗಳ ಶ್ರೇಣಿಯಲ್ಲಿ ಸಹಮತಿ ಹೊಂದಿರುತ್ತವೆ.

ಮಾನವರನ್ನು ಹಾಗೂ ಖನಿಜ ಪದಾರ್ಥಗಳನ್ನು ಪರಸ್ಪರ ತುಲನೆ ಮಾಡುತ್ತಿದ್ದ ಓರ್ವ ಪ್ರಾಚೀನ ಋಷಿಯ ಬಗೆಗೆ ನಾನು ತಿಳಿದುಕೊಂಡಿದ್ದೇನೆ. ಅದು ಹೆಚ್ಚು–ಕಡಿಮೆ ಅಪರಿಷ್ಕೃತವಾಗಿಯೇ, ಹೆಚ್ಚು–ಕಡಿಮೆ ಸಮೃದ್ಧಮಯ–ವಾಗಿದ್ದರೂ, ಎಲ್ಲವೂ ಬಂಗಾರವನ್ನೇ ಅಂತರ್ಗತ ಮಾಡಿಕೊಂಡಿರುತ್ತವೆ. ಈ ಅದಿರನ್ನು ಪರಿಶುದ್ಧಗೊಳಿಸುವ (ಆಧ್ಯಾತ್ಮೀಕರಣಗೊಳಿಸುತ್ತ) ಸಲುವಾಗಿ, ಅಗ್ನಿಯ ಜ್ವಾಲೆಗಳಿಗೆ ಒಡ್ಡಿದಾಗ, ಮತ್ತೆ ಆ ಅಗ್ನಿಪರೀಕ್ಷೆಯ ಅವಧಿಯಲ್ಲಿ ಅಲ್ಲಿ ಕೆಳಗೆ ಉಳಿಯುವ ಧಾತುಪಿಂಡವು ಸಾಮಾನ್ಯವಾಗಿ ಸಾಂದ್ರತೆಯಲ್ಲಿ ಭಾರವೇ ಆಗಿದ್ದು, ಅದು ಪರಿಶುದ್ಧವಾದ 'ಚಿನ್ನವೇ' ಆಗಿರುತ್ತದೆ.

ಆದ್ದರಿಂದ ನಾವು ನಮ್ಮಲ್ಲಿಯೇ ಗರ್ಭದಾಳದಲ್ಲಿ ಅಡಗಿರುವ ಆ ಪರಿಶುದ್ಧ ಚಿನ್ನವನ್ನು ಕಡ್ಡಾಯವಾಗಿ ಹೊರಗೆ ತರಬೇಕಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/110**

## ಯಾತನೆಯಲ್ಲಿಯೂ ಆನಂದತುಂದಿಲನಾಗುವದು

ನಾನು ಅಬ್ದುಲ್ ಬಹಾ ಅವರನ್ನು ಅತ್ಯಂತ ನಿಕಟವಾಗಿ ಬಲ್ಲೆ, ಅವರು ಬಹಾ ಉಲ್ಲಾದ್ ಅವರ ಉತ್ತರಾಧಿಕಾರಿಯಾಗಿದ್ದಾರೆ. ಅವರು ಬಹಾಯಿ

ಪಂಥದ ಸ್ಥಾಪಕರು; ಅಬ್ದುಲ್ ಬಹಾ ಇವರ ಮಗ. ಅವರು (ಬಹಾ ಉಲ್ಲಾದ್) ಜನಿಸಿದ್ದು ಒಂದು ಸೆರೆಮನೆಯಲ್ಲಿ. ಮತ್ತೆ ಸೆರೆಮನೆಯಲ್ಲಿಯೇ ವಾಸಿಸುತ್ತಿದ್ದರು. ಅವರು ನಲವತ್ತು ವರ್ಷದವನಾಗುವವರೆಗೂ ಅಲ್ಲಿಯೇ ಇರಬೇಕಾಗಿತ್ತು. ಅದರಲ್ಲಿ ನನಗೆ ಪೂರ್ತಿ ವಿಶ್ವಾಸವಿದೆ. ಅವರು ಸೆರೆಮನೆಯಿಂದ ಬಿಡುಗಡೆಯಾಗಿ ಹೊರಬಂದಾಗ, ಅವನ ತಂದೆ ತೀರಿಕೊಂಡಿದ್ದರು. ಇವರು ತಮ್ಮ ತಂದೆಯು ಬೋಧಿಸುತ್ತಿದ್ದ ಮತವನ್ನೇ ಉಪದೇಶಿಸಲು ಪ್ರಾರಂಭಿಸಿದ್ದರು. ಅವರೇ ನನಗೆ ತಮ್ಮ ಕಥೆಯನ್ನು ಹೇಳಿದ್ದರು. ಜೊತೆಗೆ ಈ ಮತದ ಪ್ರಾರಂಭದ ಸಮಯಕ್ಕೆ ಪರ್ಶಿಯಾದಲ್ಲಿ ಏನೇನು ಘಟನೆಗಳು ನಡೆದವು ಎನ್ನುವದನ್ನು ಹೇಳಿದ್ದರು. ಅವರು ಅದನ್ನು ಆತ್ಮ ಸಂತೋಷದಿಂದಲೇ ಹೇಳುತ್ತಿದ್ದರು. ಅಲ್ಲಿ ಅದೆಂಥ ಆ ದೈವೀ ಸಾಕ್ಷಾತ್ಕಾರದ ಸಂವೇದನೆ, ಆ ದೈವೀ ಶಕ್ತಿಯ ಜೊತೆಗೆ ಅವರ ಅನುಭವವೂ ಅಲ್ಲಿತ್ತು. ಯಾರು ತ್ಯಾಗಕ್ಕೆ ಸಿದ್ಧರಾಗುತ್ತಾರೋ – ನಿಜವಾಗಿಯೂ ಇದನ್ನು 'ತ್ಯಾಗ'ವೆಂದು ಕರೆಯಲಾಗದು. – ಅದು ಅವರ ಜೀವನದಲ್ಲಿ ಪರಮ ಸಂತೋಷದ ಕೊಡುಗೆಯಂತೆ ಪಡೆದುಕೊಂಡಿದ್ದಾರೆ. ಅವರು ಯಾವಾಗಲೂ ನನ್ನ ಬಳಿ ಹೇಳುತ್ತಿದ್ದ ವಿಷಯವೆಂದರೆ, ಪ್ರಾಯಃ ಅವರು ಒಬ್ಬ ಶ್ರೇಷ್ಠ ಕವಿಯೋರ್ವನ ಬಗೆಗೆ ಹೇಳುತ್ತಿದ್ದರು ಎಂದುಕೊಳ್ಳುತ್ತೇನೆ. ಮತ್ತೆ ಆ ಕವಿಯು ಬಹಾಯಿ ಮತವನ್ನು ಬೆಂಬಲಿಸಿದ್ದಕ್ಕಾಗಿ ಅವರನ್ನು 'ಪಾಷಂಡೀ' (ಪ್ರಚಂಡ ಮತ ವಿರೋಧಿ) ಎಂದು ಬಂಧಿಸಲಾಗಿತ್ತು. ಆ ಆಡಳಿತದ ವರ್ಗ ಬಯಸಿದ್ದು ಅವರನ್ನು ಎಳೆದುಕೊಂಡು ಹೋಗಿ ಕೊಲ್ಲಲು ಅಥವಾ ಸುಟ್ಟುಹಾಕಲು, ಇಲ್ಲವೇ ನೇಣಿಗೇರಿಸಲು, ತಪ್ಪಿದಲ್ಲಿ ಶಿಲುಬೆಗೇರಿಸಲು... ಒಟ್ಟಿನಲ್ಲಿ ಆ ಸಮಯದಲ್ಲಿ ಪ್ರಚಲಿತದಲ್ಲಿ ಇದ್ದ ಮರಣದಂಡನೆಯ ವಿಧಾನದಲ್ಲಿ ಅವರನ್ನು ಕೊಲ್ಲಲು ಹವಣಿಸಿದ್ದರೋ ಎನ್ನುವದು ನಿಖರವಾಗಿ ನನಗೆ ಗೊತ್ತಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ, ಆ ಕವಿಯ ಈ ಬಹಾಯಿ ಮತದಲ್ಲಿ ಹೊಂದಿದ್ದ ವಿಶ್ವಾಸವೂ ಕಾರಣವಾಗಿದ್ದಿತು. ಮತ್ತು ಆ ವಿಷಯದಲ್ಲಿಯೇ ಅವನು ಸಂತುಷ್ಟ ಜೀವನವನ್ನು ಕಾಣುತ್ತಿದ್ದ. ಅದಕ್ಕಾಗಿ ಯಾವುದೇ ಯಾತನೆಯನ್ನೂ ಸಹಿತ ಅನುಭವಿಸಲು, ತನ್ನ ದೇವರಿಗಾಗಿ ಅದನ್ನು ಸಹಿಸಲು ಸಿದ್ಧರಿದ್ದರು. ಜನರೂ ಸಹಿತ ಅವರ ದೇಹದ ಮೇಲೆ, ಬಾಹುಗಳ ಮೇಲೆ, ಭುಜಗಳ ಮೇಲೆ ಮೇಣದ ಬತ್ತಿಗಳನ್ನು ಉರಿಸಿ, ಹಿಂಸಿಸುವ ಉಪಾಯ ಹೂಡಿದ್ದರು. ಸಾಮಾನ್ಯವಾಗಿ ಆ ಮೇಣದ ಬತ್ತಿಗಳು ಕೊನೆಯವರೆಗೂ ಉರಿಯುವಾಗ, ತಾನು ನಿಂತಿದ್ದ ಚರ್ಮವನ್ನು ಭಯಂಕರವಾದ ಯಾತನೆಯಿಂದ ಹಿಂಸಿಸುತ್ತಿತ್ತು. ಬಹುತೇಕವಾಗಿ ಆ ಕವಿಯನ್ನು ಹಿಂಸಿಸುತ್ತಿರುವಾಗ

ಅಬ್ದುಲ ಬಹಾ ಅಲ್ಲಿದ್ದರು ಎನಿಸುತ್ತದೆ. ಅವರನ್ನು ವಾಸಿಸುವ ಸ್ಥಾನಕ್ಕೆ ಅಬುಲ್ ಬಹಾ ಬಂದಾಗ, ಅವರೊಡನೆ ಆತ್ಮೀಯವಾಗಿ ಮಾತನಾಡಲು ಹೋಗಿದ್ದರು. ಆವಾಗ ಆ ಶಿಕ್ಷೆಗೊಳಗಾಗುತ್ತಿದ್ದ ವ್ಯಕ್ತಿಯು ಸಂಪೂರ್ಣ ಪರಮಾನಂದದ ತೋಷದಲ್ಲಿ ಮಗ್ನರಾಗಿದ್ದರು.

ಅವರ ಯಾತನೆಗಳ ಬಗೆಗೆ ಅಬುಲ್ ಬಹಾ ವಿಚಾರಿಸಿದಾಗ, ಆ ಕವಿಯು ಉತ್ತರಿಸಿದ್ದು ಏನೆಂದರೆ, "ಏನು ಯಾತನೆಯೇ? ಇದು ನನ್ನ ಜೀವನದಲ್ಲಿಯೇ ಅತ್ಯಂತ ಸುಂದರವಾದ ಸಮಯವಾಗಿದೆ." ಇದನ್ನು 'ತ್ಯಾಗ' ಎಂದು ಕರೆಯಲಾಗುವದಿಲ್ಲ, ಹಾಗೆ ಕರೆಯಲು ಸಾಧ್ಯವೇ?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/315–16**

## ಬಾಹ್ಯ ಪರಿಸ್ಥಿತಿ ಮತ್ತು ಆಂತರಿಕ ಪ್ರವೃತ್ತಿ

ಮೇಲ್ನೋಟಕ್ಕೆ ಕಾಣುವಂತೆ ಇದೊಂದು ತುಂಬ ಮೋಜಿನ ಸಂಗತಿಯಾಗಿದೆ. ಈ ಆಶ್ರಮಕ್ಕೆ ಬಂದಿದ್ದ ಓರ್ವ ಮಹಿಳೆಯಿಂದ ಘಟಿಸಿದ ಘಟನೆ ಇದಾಗಿದೆ. ಇನ್ನುಳಿದವರ ಹಾಗೆಯೇ ಇವಳೂ ಸಹಿತ ತರುಣಿಯೇ ಆಗಿದ್ದಳು. ಅವಳಿಗೆ ನಿಶ್ಚಿತಾರ್ಥವಾಗಿತ್ತು; ಆದರೆ ಇನ್ನೂ ಮದುವೆಯಾಗಿರಲಿಲ್ಲ. ಆದರೆ ಆ ಮನುಷ್ಯ ಯಾವುದೋ ಕಾರಣಕ್ಕೆ ಆ ನಿಶ್ಚಿತಾರ್ಥವನ್ನು ಮುರಿದುಕೊಂಡಿದ್ದನು. ಹೀಗಾಗಿ ಅವಳು ತುಂಬ ದುಃಖದಲ್ಲಿ ಇದ್ದಳು. ಅದಕ್ಕಾಗಿ ದುಃಖಿಸುತ್ತ ದುಃಖಿಸುತ್ತ ತನ್ನ ಸುಂದರವಾದ ಮುಖದ ಅಂದದ ಸ್ವರೂಪವನ್ನು ಕಳೆದುಕೊಂಡಿದ್ದಳು. ಮುಖದ ತುಂಬ ಆಳವಾದ ನಿರಿಗೆಗಳು ತುಂಬಿದ್ದವು. ಯಾವಾಗ ಆ ಭಯಾನಕವಾದ ಕೊರಗು ಘಟಿಸಿತೋ ಆಗಿನಿಂದಲೇ ಅವಳು ಮಾತ್ರ ಅಂದವನ್ನು ಉಳಿಸಿಕೊಳ್ಳಲೇ ಇಲ್ಲ. ಹೀಗಾಗಿ ಅವಳು ತೀವ್ರತೆರನಾದ ಪೀಡಿತಳಾಗಿಯೇ ಇದ್ದಳು. ಅವಳು ಮತ್ತೆ ಸುಂದರವಾಗಿ ಕಾಣುವಂತೆ ಮಾಡುವ ವೃತ್ತಿನಿರತರನ್ನು ಅವಳು ಭೇಟಿಯಾದಾಗ, ಅವರು ಮುಖಕ್ಕೆ "ಪ್ಯಾರಾಫಿನ್ ಇಂಜಕ್ಷನ್ ತೆಗೆದುಕೊಳ್ಳವಂತೆ ಸಲಹೆ ಕೊಟ್ಟಿದ್ದರು. ಈ ಇಂಜಕ್ಷನ್ ನಿನ್ನ ಮುಖದ ಮೇಲಿನ ನಿರಿಗೆಗಳನ್ನೆಲ್ಲ ಹೋಗಲಾಡಿಸುತ್ತದೆ. ಮತ್ತೆ ಎಂದಿಗೂ ಬರುವದಿಲ್ಲ" ಎಂದು ಹೇಳಿದ್ದರು. ಆ ಕೊಬ್ಬಿನ ಇಂಜಕ್ಷನ್ ಚಿಕಿತ್ಸೆಯನ್ನು ಅವಳಿಗೆ ಕೊಡಲಾಯಿತು. ಆದರೆ ನಿರೀಕ್ಷಿಸಿದ ಪರಿಣಾಮಕ್ಕಿಂತ, ಅವಳ ಮುಖದ ಮೇಲೆ

ಅಲ್ಲಲ್ಲಿ ಕೊಬ್ಬು ತುಂಬಿದ ಗಂಟುಗಳು ಕಾಣಿಸಿಕೊಂಡವು. ಅವಳಂತೂ ಈಗ ಪೂರ್ತಿ ಹತಾಶಳಾಗಿದ್ದಳು, ಏಕೆಂದರೆ ಅವಳು ಮೊದಲಿಗಿಂತಲೂ ಕುರೂಪಿಯಾಗಿದ್ದಳು. ಹಾಗೆಯೇ ಇರಬೇಕಾಯಿತು. ತದನಂತರದಲ್ಲಿ ಅವಳು ಓರ್ವ ನಾಟೀ ವೈದ್ಯನನ್ನು ಭೇಟಿಯಾದಾಗ ಅವನು, "ಇಂಗ್ಲಂಡಿನಲ್ಲಿ ನಿನ್ನ ಮುಖವನ್ನು ಸರಿಪಡಿಸುವ ಚಿಕಿತ್ಸೆ ಇಲ್ಲವೇ ಇಲ್ಲ, ನೀನು ಭಾರತಕ್ಕೆ ಹೋಗು, ಅಲ್ಲಿ ದೊಡ್ಡ ದೊಡ್ಡ ಯೋಗಿಗಳು ಇದ್ದಾರೆ, ಅವರು ಇದನ್ನೆಲ್ಲ ಸರಿಪಡಿಸುತ್ತಾರೆ, ನಿನಗೆ ಚಿಕಿತ್ಸೆಯನ್ನೂ ಕೊಡುತ್ತಾರೆ" ಎಂದು ಹೇಳಿದ್ದನು. ಆ ಕಾರಣದಿಂದ ಅವಳು ಇಲ್ಲಿಗೆ ಬಂದದ್ದು.

ಇಲ್ಲಿ ಬಂದ ಕೂಡಲೇ ಅವಳು ಕೇಳಿದ್ದ ಪ್ರಥಮ ಪ್ರಶ್ನೆ ಎಂದರೆ, "ಇದೋ ನೋಡಿ, ನನ್ನ ಮುಖ ಎಷ್ಟೊಂದು ವಿರೂಪವಾಗಿದೆ, ನೀವು ಮತ್ತೆ ಇದನ್ನು ಸರಿಪಡಿಸಬಲ್ಲಿರಾ? ಅದಕ್ಕೆ ನಾನು ಕೊಟ್ಟ ಉತ್ತರ "ಖಂಡಿತವಾಗಿಯೂ ಇಲ್ಲ"! ತದನಂತರದಲ್ಲಿ ಅವಳು ಯೋಗದ ಬಗೆಗೆ ಪ್ರಶ್ನೆಗಳನ್ನು ಕೇಳುವದಕ್ಕೆ ಪ್ರಾರಂಬಿಸಿದ್ದಳು. ಆಮೇಲೆಯೇ ಅವಳು ಅಲ್ಲಿಂದ ನಿರ್ಗಮಿಸಿದ್ದು.

ಒಂದು ದಿನ ಅವಳು ನನ್ನ ಹತ್ತಿರ, 'ನಾನು ಭಾರತಕ್ಕೆ ಬಂದದ್ದು ಈ ಮುಖದ ಮೇಲಿನ ನಿರಿಗೆಗಳನ್ನು ಸರಿಪಡಿಸಿಕೊಳ್ಳುವ ಸಲುವಾಗಿ ಆಗಿತ್ತು, ಆದರೆ ಈಗ ನೀವು ಹೇಳುತ್ತಿರುವ (ಯೋಗದ) ವಿಷಯ ಖಂಡಿತವಾಗಿಯೂ ಆಸಕ್ತಿದಾಯಕವಾಗಿದೆ. ಆದರೆ ನಾನು ಬಂದದ್ದಾದರೂ ಏತಕ್ಕೇ? ನಾನು ಈ (ಯೋಗದ) ಉದ್ದೇಶಕ್ಕಾಗಿ ಬಂದೇ ಇಲ್ಲ' ಎಂದು ಹೇಳಿದ್ದಳು.

ಆಗ ನಾನು ಅವಳಿಗೆ, ನಿನ್ನ ಬಾಹ್ಯದ ಅಸ್ತಿತ್ವಕ್ಕಿಂತ ಬೇರೆಯದೇ ಆದ ವಿಶೇಷವೊಂದು ನಿನ್ನನ್ನು ಇಲ್ಲಿಗೆ ಕರೆದುಕೊಂಡು ಬಂದಿದೆ. ಅದು ಅವಳ ಪ್ರಾಣಿಕ ಅಸ್ತಿತ್ವವಾಗಿತ್ತು. ಈ ಬಾಹ್ಯದ ಉದ್ದೇಶಗಳು ಯಾವಾಗಲೂ ನಮ್ಮ ಪ್ರಾಣಿಕ ಶಕ್ತಿಯು ತನ್ನಲ್ಲಿ ತಾನೇ ತನ್ನನ್ನು ಅರಿತುಕೊಳ್ಳುವಲ್ಲಿ ಸಹಾಯಕಕಾರಿ–ಯಾಗಿರುತ್ತವೆ. ಅದೂ ಅಲ್ಲದೇ ಅವು ಸರಳಾತಿಸರಳವಾಗಿಯೇ ಇದ್ದು ನಿಮಿತ್ತ ಮಾತ್ರವಾಗಿರುತ್ತವೆ.

ಆದರೆ ಅವಳು ಅತ್ಯಂತ ಅದ್ಭುತ ವ್ಯಕ್ತಿಯಾಗಿದ್ದಳು! ಪ್ರಾರಂಭದ ಹಂತದಲ್ಲಿ ಅವಳು ಔದಾರ್ಯಪೂರ್ಣ ದೃಷ್ಟಿಕೋನವನ್ನು ಮತ್ತು ಪ್ರತಿ ವಿಷಯದ ಬಗೆಗೂ ಸೌಹಾರ್ದ ಮನೋಭಾವವನ್ನು ಹೊಂದಿದ್ದಳು. ಅವಳು ಯಾವಾಗಲೂ

ಶುಭಕರವಾಗಿರುವದನ್ನೇ ನೋಡಲು ಪ್ರಯತ್ನಿಸುತ್ತಿದ್ದಳು. ಅವಳು ಅದೇ ಸ್ಥಿತಿಯಲ್ಲಿಯೆ ಮುಂದುವರೆದು ಕ್ರಮೇಣ ಅವಳ ಅತ್ಮಪ್ರಜ್ಞೆಯೂ ಜಾಗೃತಗೊಂಡಿತು. ಕೆಲ ಅವಧಿಯ ನಂತರದಲ್ಲಿ ಜನರು ಹೇಗೆ ಇರುತ್ತಾರೋ ಹಾಗೇ ಪರಿಭಾವಿಸುವದನ್ನು ಅವಳು ರೂಢಿಸಿಕೊಂಡಳು.

ಒಂದು ದಿನ ಅವಳು ನನಗೆ ಹೇಳಿದ್ದು. 'ನಾನು ಯಾವಾಗ ಸುಪ್ತತೆಯಲ್ಲಿ ಇರುತ್ತೇನೆಯೋ ಆಗ ಎಲ್ಲವೂ ಒಳ್ಳೇಯದೇ ಆಗಿರುತ್ತದೆ. ಜನರೂ ಸಹಿತ ಎಷ್ಟೊಂದು ನಯ–ನಾಜೂಕಿನಿಂದ ವರ್ತಿಸುತ್ತಿದ್ದಾರೆ ಎಂದುಕೊಂಡಿದ್ದೇನೆ! ಹಾಗಿರುವಾಗ ಮತ್ತೆ ಏಕೆ ನನ್ನನ್ನು ಈ ಲೌಕಿಕದ ಜಾಗೃದಾವಸ್ಥೆಗೆ ತರುತ್ತೀರಿ?' ಎಂದು ಕೇಳಿದ್ದಳು. "ನೀನು ಇಲ್ಲಿಗೆ ನಿಲ್ಲಿಸಿ ಬಿಡಬೇಡ, ಮತ್ತೂ ಮುಂದುವರೆ.. ಮುಂದುವರೆ." ಎಂದು ಅವಳಿಗೆ ತಿಳಿಸಿದ್ದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/3–4**

**ವಿಶ್ವಾಸವು ಪವಾಡಗಳಲ್ಲಿ ಪ್ರಕಟಗೊಳ್ಳುತ್ತದೆ**

ಬಹು ದಿನಗಳ ಹಿಂದೆ, ಜನರು ರಂಧ್ರವಿರುವ ನಾಣ್ಯವನ್ನು ಬಳಸುತ್ತಿದ್ದರು. ಆಗ ರಂಧ್ರವಿರದ ನಾಣ್ಯಗಳೂ ಇದ್ದವು. ಈಗಲೂ ರಂಧ್ರವಿರುವ ನಾಣ್ಯಗಳು ಬಂದಿವೆ... ಇವು ನಮ್ಮಲ್ಲಿ ಇರಲಿಕ್ಕಿಲ್ಲ, ಆದರೆ ಕೆಲವು ದೇಶಗಳಲ್ಲಿ ಈ ರೀತಿಯ ರಂಧ್ರದ ನಾಣ್ಯಗಳು ಇವೆ. ಆದರೆ ಅವೇ ನಾಣ್ಯಗಳೇ ಹಿಂದೆ ಯಾವುದೇ ರಂಧ್ರವಿಲ್ಲದಂತೆಯೇ ಚಲಾವಣೆಯಲ್ಲಿ ಇದ್ದವು. ಆದರೂ ಅಂತಹ ನಾಣ್ಯವು ಯಾರಿಗಾದರೂ ಸಿಕ್ಕಲ್ಲಿ, ಅದು ಅದೃಷ್ಟದ ಸಂಕೇತದಂತೆ ಆರಾಧಿಸುತ್ತಿದ್ದರು. ಭಾಗ್ಯವನ್ನು ತರುತ್ತದೆ ಎನ್ನುವ ಅಂಥ ವಿಶ್ವಾಸವೂ ಇತ್ತು. ನೀವು ಏನನ್ನು ಆಶಿಸುತ್ತೀರೋ ಅದೆಲ್ಲವೂ ಆ ನಾಣ್ಯದ ದೆಸೆಯಿಂದ ಈಡೇರುತ್ತದೆ ಎನ್ನುವ ಮನೋಭಾವವಿತ್ತು. ಈ ಮೂಲಕ ಅದೃಷ್ಟವಂತರನ್ನಾಗಿಸುತ್ತದೆ, ಯಶಸ್ಸು ತಂದು ಕೊಡುತ್ತದೆ ಎನ್ನುವ ವಿಶ್ವಾಸ ಜನರಲ್ಲಿ ತುಂಬಿತ್ತು.

ಒಂದು ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಓರ್ವ ವ್ಯಕ್ತಿಯು ಸದಾ ಬಡತನದಲ್ಲಿಯೇ ಇದ್ದನು. ಜೀವನದಲ್ಲಿ ಅಷ್ಟೊಂದು ಯಶಸ್ಸು ಕಂಡಿರಲಿಲ್ಲ. ಹಾಗಿರುವಾಗ ಒಮ್ಮೆ ಅವನಿಗೆ ರಂಧ್ರವಿರುವ ಒಂದು ನಾಣ್ಯ ದೊರಕಿತ್ತು. ಅವನು ಅದನ್ನು ಯಾವಾಗಲೂ ಭದ್ರವಾಗಿ ತನ್ನ ಜೇಬಿನಲ್ಲಿಯೇ ಇಟ್ಟುಕೊಳ್ಳುತ್ತಿದ್ದ.

ಆಮೇಲೆ ತನ್ನಷ್ಟಕ್ಕೆ ತಾನೇ, 'ನಾನು ಇದೀಗ ಸಮೃದ್ಧಿಯನ್ನು ಹೊಂದುತ್ತೇನೆ' ಎಂದು ಹೇಳಿಕೊಳ್ಳುತ್ತಿದ್ದನು. ಹೀಗಾಗಿ ಅವನು ತುಂಬ ಭರವಸೆಯಿಂದ, ಧೈರ್ಯದಿಂದ, ಶಕ್ತಿದುಂಬಿದವನಾಗಿ ಪರಿವರ್ತಿತಗೊಂಡನು. ಏಕೆಂದರೆ ಅವನ ಬಳಿಯಿರುವ ನಾಣ್ಯ ಖಂಡಿತವಾಗಿಯೂ ಯಶಸ್ಸನ್ನು ತರುತ್ತದೆ ಎನ್ನುವ ಸಂಪೂರ್ಣ ವಿಶ್ವಾಸ ಅವನಲ್ಲಿ ತುಂಬಿತ್ತು.

ಈ ಆತ್ಮವಿಶ್ವಾಶದದಿಂದಲೇ ಅವನು ಸುಧಾರಿಸಿಕೊಳ್ಳುತ್ತಲೇ ಸಾಗಿದ. ಅವನ ಗಳಿಕೆಯೂ ಹೆಚ್ಚುತ್ತಲೇ ಹೋಯಿತು. ಸಮಾಜದಲ್ಲಿಯೂ ಸಹಿತ ಅವನಿಗೆ ಉನ್ನತ ಸ್ಥಾನಮಾನಗಳು ಲಭ್ಯವಾದವು. ಆಗ ಜನರೆಲ್ಲರೂ ಅವನ ಬಗೆಗೆ ಎಂತಹ ವಿಚಿತ್ರ ಮನುಷ್ಯನೀತ! ಎಷ್ಟೊಂದು ನಿಖರವಾಗಿ ಕಾರ್ಯ ಮಾಡುತ್ತಾನೆ! ಎಲ್ಲ ಸಮಸ್ಯೆಗಳಿಗೂ ಅದು ಹೇಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳುತ್ತಾನೆ! ಎಂದು ಅಚ್ಚರಿ ವ್ಯಕ್ತಪಡಿಸುತ್ತಿದ್ದರು. ಏನೇ ಆದರೂ ಅವನೋರ್ವ ಗಮನಾರ್ಹವಾದ ವ್ಯಕ್ತಿಯಾಗಿಯೇ ತನ್ನನ್ನು ರೂಪಿಸಿಕೊಂಡಿದ್ದನು. ಪ್ರತಿದಿನವೂ ಮುಂಜಾನೆ ತನ್ನ ಕೋಟ್ ಧರಿಸುವಾಗ, ಆ ನಾಣ್ಯವು ತನ್ನ ಜೇಬಿನಲ್ಲಿಯೇ ಇದೆ ಎನ್ನುವದನ್ನು ಖಾತ್ರಿಪಡಿಸಿಕೊಂಡೇ – ಅದನ್ನು ಸ್ಪರ್ಶಿಸುತ್ತಿದ್ದ. ಅದರ ಅನುಭವವನ್ನೂ ಆನಂದಿಸುತ್ತಿದ್ದ. ಇದೆಲ್ಲವೂ ಅವನ ಆತ್ಮವಿಶ್ವಾಸವನ್ನು ವೃದ್ಧಿಸಿತ್ತು.

ಆಮೇಲೆ ಕೆಲವು ವರ್ಷಗಳ ನಂತರ ಒಂದು ದಿನ, ಅವನು ಕುತೂಹಲದಲ್ಲಿ ನಾನು ಒಮ್ಮೆ ಆ ನಾಣ್ಯವನ್ನು ನೋಡಬೇಕು" ಎಂದು ಹೆಂಡತಿಗೆ ಹೇಳಿದ್ದ. ಅವನು ಉಪಾಹಾರ ಸ್ವೀಕರಿಸುತ್ತಿದ್ದಾಗ ಈ ವಿಷಯವನ್ನು ಹೇಳಿದಾಗ, ಅವನ ಹೆಂಡತಿ, ಅದನ್ನೇಕೆ ಈಗ ನೋಡಲು ಬಯಸುತ್ತೀರೀ? ಅದರ ಅವಶ್ಯಕತೆ ಏನೂ ಇಲ್ಲವಲ್ಲ ಎಂದು ಹೇಳಿದ್ದಳು. "ಹೌದು, ಹೌದು ಇರಬಹುದು, ಆದರೂ ಒಮ್ಮೆ ಆ ನಾಣ್ಯವನ್ನು ನೋಡಬೇಕಾಗಿದೆ" ಎಂದು ಆ ನಾಣ್ಯವನ್ನು ಇಟ್ಟಿದ್ದ ಪುಟ್ಟ ಪೆಟ್ಟಿಗೆಯನ್ನು ತೆಗೆದು ನೋಡಿದ್ದನು, ಅಲ್ಲಿ ಆ ರಂಧ್ರದ ನಾಣ್ಯವು ಇರಲೇ ಇಲ್ಲ!. ಈ ಸಂಗತಿ ಅವನಿಗೆ ಆಗಲೇ ಗೊತ್ತಾಗಿದ್ದು.

'ಓ', 'ಓ' ಏನಿದು? ನನ್ನ ನಾಣ್ಯ ಇಲ್ಲಿ ಇಲ್ಲವೇ? ಯಾರು ಈ ನಾಣ್ಯವನ್ನು ಬದಲು ಮಾಡಿದ್ದು? ಎಂದು ಜೋರಾಗಿಯೇ ಚೀರಿದ್ದ. ಆಗ ಅವನ ಹೆಂಡತಿ, "ಒಂದು ದಿನ ನಿಮ್ಮ ಕೋಟ್ ಸ್ವಚ್ಛ ಮಾಡುವಾಗ ಅದರ ಮೇಲಿದ್ದ ಧೂಳನ್ನು ತೆಗೆಯಲು ಜೋರಾಗಿ ಝಾಡಿಸಿದ್ದೆ, ಆಗ ಅದು ಕಿಟಕಿಯ ಹೊರಗೆ ಬಿದ್ದಿತ್ತು,

ಅದರ ಸಂಗಡ ಆ ನಾಣ್ಯವೂ ಎಲ್ಲಿಯೋ ಬಿದ್ದ ಹೋಗಿತ್ತು. ನಾನು ಅದನ್ನು ಹುಡಕಲು ತುಂಬ ಪ್ರಯತ್ನ ಪಟ್ಟೆ, ಆದರೆ ಸಿಗಲೇ ಇಲ್ಲ. ಯಾರೋ ಅದನ್ನು ನೋಡಿ ಎತ್ತಿಕೊಂಡು ಹೋಗಿರಬೇಕು ಎನಿಸುತ್ತದೆ. ಈ ವಿಷಯ ತಿಳಿದು ನೀವು ದುಃಖಿತರಾಗಬಾರದೆಂದು ನಾನೇ ಮತ್ತೊಂದು ಬೇರೆ ನಾಣ್ಯವನ್ನು ಅಲ್ಲಿ ಇಟ್ಟಿದ್ದೆ" ಎಂದಳು.

ನಗು ನಗುತ್ತಲೇ ಶ್ರೀಮಾತೆಯವರು ಹೇಳಿದ್ದೇನೆಂದರೆ, ಬಹತೇಕವಾಗಿ ತನ್ನಲ್ಲಿ ಆ ನಾಣ್ಯ ಇದೆ ಇದೆ ಎಂದುಕೊಂಡೇ ಅವನು ಅಪರಿಮಿತ ವಿಶ್ವಾಸದಲ್ಲಿ ಉಳಿದಿದ್ದನು ಎಂದು ತೋರುತ್ತದೆ. ಇಷ್ಟೇ ಆ ಕಥೆ.

ಇದು ವಿಶ್ವಾಸ. ಇದು ನಂಬಿಕೆ. ಈ ನಂಬಿಕೆಯೇ ಎಲ್ಲವನ್ನೂ ನಡೆಸುತ್ತದೆ. ನೀವೇ ಗಮನಿಸಿ ನೋಡಿ, ಆ ರಂಧ್ರವಿರುವ ನಾಣ್ಯವೇ ಅವನಿಗೆ ಎಲ್ಲವನ್ನೂ ಕೊಡಲು ಸಾಧ್ಯವೇ ಇಲ್ಲ. ಅದಕ್ಕಾಗಿ ನೀವು ಸತತ ಪ್ರಯತ್ನ ಮಾಡಲೇ–ಬೇಕಾಗುತ್ತದೆ. ಯಾವಾಗ ಓರ್ವನು ಆತ್ಮವಿಶ್ವಾಸವನ್ನು ಹೊಂದುತ್ತಾನೆಯೋ.. "ಅಲ್ಲಿಯೇ"! ಎಲ್ಲವೂ ಇರುತ್ತದೆ.

ಇಷ್ಟು ಸಾಕು ಎನಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/234–35**

## ತಿರುಗು ಬಾಣವಾಗಬಲ್ಲ ಆಲೋಚನಾ ಲಹರಿಗಳು

– ಅನುವಾದ: ಡಾ॥ ಉದಯ ರವಿ ಶಾಸ್ತ್ರಿ

ಟಿಬೆಟ್ಟಿಗೆ ಹೋಗಿ, ಟಿಬೆಟ್‌ನ ಬಗ್ಗೆ ಪುಸ್ತಕಗಳನ್ನು ಬರೆದು, ಬೌದ್ಧ ಮತಕ್ಕೆ ಸೇರಿದ ಮೆಡೇಮ್ ಡೇವಿಡ್ ನೀಲ್ ಬಗ್ಗೆ ನೀವು ಕೇಳಿರಲಾರಿರಿ. ನಿಜವಾದ ಅರ್ಥದ ಅಪ್ಪಟ ಬೌದ್ಧರಿಗೆ ದೈವೀಕದಲ್ಲಿ ನಂಬಿಕೆ ಇರುವುದಿಲ್ಲ. ಅವರು ತಮ್ಮ ಶಾಶ್ವತತೆಯ ಬಗೆಗಾಗಲೀ, ನಿಜವಾದ ದೈವಿಕವಾದ ದೇವರುಗಳ ಬಗ್ಗೆಯಾಗಲೀ ನಂಬಿಕೆ ಇರುವುದಿಲ್ಲ. ಆದರೆ ಅವರಿಗೆ ತಮ್ಮ ಮನೋ–ಸಾಮ್ರಾಜ್ಯವನ್ನು ಹೇಗೆ ಬಳಸಿಕೊಳ್ಳಬೇಕೆಂದು ಅದ್ಭುತವಾಗಿ ತಿಳಿದಿರುತ್ತದೆ. ಮನೋ–ಸಾಧನಗಳ ಹಾಗೂ ಮನೋ–ಸಾಮ್ರಾಜ್ಯದ ಮೇಲೆ ಪ್ರಭುತ್ವವನ್ನು ಪಡೆಯಲು ಬೌದ್ಧ ರೀತಿಯ ಶಿಸ್ತು ಅತ್ಯಂತ ಉಪಯುಕ್ತವಾದದ್ದು.

ನಾವು ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆವು, ಹೀಗೆ ಒಮ್ಮೆ ಅಕೆ ಹೇಳಿದಳು: ಕೇಳು, ನಾನೊಂದು ಪ್ರಯೋಗ ನಡೆಸಿದ್ದೇನೆ. (ಆಕೆ ಸ್ವಲ್ಪಮಟ್ಟಿಗೆ ತತ್ವ ಶಾಸ್ತ್ರವನ್ನೂ ಸಹ ಅಧ್ಯಯನ ಮಾಡಿದ್ದಳು.). 'ನನ್ನ ಆಲೋಚನೆಯಲ್ಲೇ ನಾನೊಬ್ಬ 'ಮಹಾತ್ಮ'ನನ್ನು ಸೃಷ್ಟಿಸಿದೆ.' ಕಲ್ಪನೆ ಮಾಡಿಕೊಳ್ಳುವ ವ್ಯಕ್ತಿಯ ಪ್ರಭಾವವಿಲ್ಲದೆ ಮನಸ್ಸಿನಲ್ಲಿ ಕಾಲ್ಪನಿಕ ವ್ಯಕ್ತಿಯ ವೈಯಕ್ತಿಕ ಜೀವನದ ಮನೋ–ರಚನೆಗಳನ್ನು ಮಾಡಿಕೊಳ್ಳಲು ಸಾಧ್ಯವೆಂದು ಆಕೆಗೆ ಸ್ಪಷ್ಟವಾಗಿ, ನಿರೂಪಿತವಾಗಿ ತಿಳಿದಿತ್ತು. ಇಂತಹ 'ವ್ಯಕ್ತಿಗೆ' ತನ್ನದೇ ಅದ ಧೀಶಕ್ತಿ ಇರಬಲ್ಲದು. ಹೀಗಾಗಿ, ಅವಳೆಂದಳು, 'ನಾನು ನನ್ನ 'ಮಹಾತ್ಮ'ನನ್ನು ಎಷ್ಟು ಚೆನ್ನಾಗಿ ರೂಪಿಸಿದ್ದೇನೆಂದರೆ, ನನ್ನದಲ್ಲದ ಒಂದು ವ್ಯಕ್ತಿತ್ವವಾಗಿ ಬೆಳೆದು, ಆಗಾಗ ಬಂದು ನನಗೆ ತೊಂದರೆ ಕೊಡುತ್ತಿದ್ದ. ಅವನು ಬಂದು, ಯಾವುದಕ್ಕೋ ಬೈದು, ಯಾವುದಕ್ಕೋ ಸಲಹೆ ಕೊಟ್ಟು, ನನ್ನ ಜೀವನವನ್ನು ನಿರ್ದೇಶಿಸಲು ಉದ್ದೇಶಿಸಿದ್ದ. ಅವನಿಂದ ವಿಮೋಚನೆ ಪಡೆಯಲು ನಾನು ಯಶಸ್ವಿಯಾಗಲಿಲ್ಲ. ಅದು ಬಹಳ ಕಷ್ಟಕರವಾಗಿತ್ತು. ಹಾಗೂ ನಾನು ಏನು ಮಾಡಬೇಕೆಂದು ತಿಳಿದಿರಲಿಲ್ಲ.

ನೀನು ಇದನ್ನು ಹೇಗೆ ಪ್ರಯತ್ನಿಸಿದೆ ಎಂದು ಕೇಳಿದಾಗ, ಆಕೆ ಹೇಳಿದಳು, 'ನನ್ನ 'ಮಹಾತ್ಮ' ತುಂಬಾ ತೊಂದರೆ ಕೊಡುತ್ತಾನೆ. ನನ್ನನ್ನು ನೆಮ್ಮದಿಯಾಗಿರಲು ಬಿಡುವುದಿಲ್ಲ. ನನ್ನ ಧ್ಯಾನಕ್ಕೆ ತೊಂದರೆ ಮಾಡುತ್ತಾನೆ. ನನ್ನ ಕೆಲಸಕ್ಕೆ ಅಡ್ಡಿ ಮಾಡುತ್ತಾನೆ, ಅವನನ್ನು ನಾನೇ ಸೃಷ್ಟಿಸಿರುವುದು ಎಂದು ಚೆನ್ನಾಗಿ ತಿಳಿದಿದೆ, ಇಷ್ಟಾದರೂ ಅವನಿಂದ ಬಿಡುಗಡೆ ಪಡೆಯಲು ಸಾಧ್ಯವಾಗುತ್ತಿಲ್ಲ!' ಅದಕ್ಕೆ ನಾನು, – 'ಏಕೆಂದರೆ ನಿನ್ನಲ್ಲಿ 'ಉಪಾಯ'ಗಳಿಲ್ಲ.' ಎಂದು (ತಾಯಿ ನಗುತ್ತಾಳೆ) ಅವಳೇನು ಮಾಡಬೇಕೆಂದು ವಿವರಿಸಿದೆ. ಮರುದಿನ, – ಹೌದು, ಅ ದಿನಗಳಲ್ಲಿ ನಾನು ಅವಳನ್ನು ಹೆಚ್ಚೂ ಕಡಿಮೆ, ಪ್ರತಿದಿನ ನೋಡುತ್ತಿದ್ದೆ – ಮರುದಿನ, ಆಕೆ ಬಂದು ನನಗೆ ಹೀಗೆಂದು ಹೇಳುತ್ತಾ ನಗುತ್ತಾಳೆ, 'ಆಹ್! ನನ್ನ ಮಹಾತ್ಮನಿಂದ ನಾನು ಬಿಡುಗಡೆ ಹೊಂದಿದ್ದೇನೆ!' ಆದರೆ, ಅದರಿಂದ ಏನೂ ಪ್ರಯೋಜನವಿಲ್ಲವೆಂದು ಅವಳು ಅದರ ಸಂಬಂಧವನ್ನು ಕಡಿದಿರಲಿಲ್ಲ. ನಮ್ಮ ಸೃಷ್ಟಿಯನ್ನು ಮರಳಿ–ಹೀರಿಕೊಳ್ಳುವುದು ಹೇಗೆಂದು ನಮಗೆ ತಿಳಿದಿರಬೇಕು. ಇರುವುದು ಅದೊಂದೇ ದಾರಿ. ನಮ್ಮ ರಚನೆಗಳನ್ನು ನಾವು ನುಂಗಿಬಿಡಬೇಕು.

ಸಣ್ಣ ಪ್ರಮಾಣದಲ್ಲಿ ನಾವೆಲ್ಲರೂ ಅಷ್ಟೇನೂ ನಿಖರವಲ್ಲದ ರಚನೆಗಳನ್ನು ಸದಾ ಕಾಲ ಮಾಡುತ್ತಲೇ ಇರುತ್ತೇವೆ. ಉದಾಹರಣೆಗೆ, ನಾವು ಯಾರ

ಬಗ್ಗೆಯಾದರೂ ಪ್ರಬಲವಾಗಿ ಯೋಚಿಸಿದಾಗ ತಕ್ಷಣ, ಆ ವ್ಯಕ್ತಿಗೆ ನಮ್ಮಿಂದ ಮನೊ–ವಸ್ತುವೊಂದು ರವಾನೆಯಾಗುತ್ತದೆ. ಅಂದರೆ, ನಮ್ಮ ಆಲೋಚನೆಗಳ ಕಂಪನವು ಅವನ ಆಲೋಚನೆಗಳನ್ನು ತಟ್ಟುತ್ತವೆ. ಅವನು ಸೂಕ್ಷ್ಮವಾಗಿದ್ದರೆ ನಿಮ್ಮನ್ನು ನೋಡಬಲ್ಲ. ನೋಡಿ, 'ನಿನ್ನೆ ರಾತ್ರಿ ನೀನು ನನ್ನನ್ನು ನೋಡಲು ಬಂದಿದ್ದೆ' ಎಂದು ಹೇಳುತ್ತಾನೆ. ಹೀಗೇಕೆ ಆಗುತ್ತದೆ ಎಂದರೆ, ನೀನು ಮಾಡಿದ ಒಂದು ಸಣ್ಣ ರಚನೆಯು ತನ್ನ ಕೆಲಸವನ್ನು ನಿಭಾಯಿಸಿತು. ಆ ವ್ಯಕ್ತಿಯೊಂದಿಗೆ ನಿನ್ನ ಸಂಪರ್ಕ ಬೆಸೆಯುವುದೇ ಅದರ ಕೆಲಸವಾಗಿತ್ತು. ಅಥವಾ ಅವನಿಗೆ ಏನಾದರೂ ವಿಶೇಷವಾದ ಮಾಹಿತಿ ನೀಡುವುದಾದರೆ ಅದು, ಯಶಸ್ವಿಯಾಗಿ ನೆರವೇರಿತು. ಹೀಗೆ ಪದೇ ಪದೇ ನಡೆಯುತ್ತದೆ. ಇದು ಸಾಕಷ್ಟು ಸತತವಾಗಿ ಹಾಗು ಒಮ್ಮಿಂದೊಮ್ಮೆಗೇ ನಡೆಯುವ ಗೂಢವಾಗಿಯೇ ನಡೆಯುವ ಪ್ರಕ್ರಿಯೆಯಾದ್ದರಿಂದ, ನಾವು ಇದನ್ನು ಮಾಡುತ್ತೇವೆ ಎಂಬ ಅರಿವೂ ಸಹ ನಮಗೆ ಇರುವುದಿಲ್ಲ. ಇದನ್ನು ಯಾಂತ್ರಿಕವಾಗಿ ಮಾಡಿರುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/277–78**

**ಆಲೋಚನೆಗಿರುವ ಕೊರತೆ**

ಫ್ರಾನ್ಸಿನ ದಕ್ಷಿಣ ಭಾಗದಲ್ಲಿ ವಾಸಿಸುತ್ತಿದ್ದ ಒಬ್ಬ ತತ್ವಜ್ಞಾನಿಯ ಕಥೆಯನ್ನು ನೀವು ಎಂದಾದರೂ ಕೇಳಿದ್ದೀರಾ? ಅತನ ಹೆಸರು ನನಗೆ ನೆನಪಾಗುತ್ತಿಲ್ಲ, ಆದರೆ ಬಹಳ ಪ್ರಖ್ಯಾತನಾದವನು.

ಮಾಂಟ್‌ಪೆಲ್ಲಿಯರ್ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿದ್ದು, ಅಲ್ಲೆ ಸನಿಹದಲ್ಲೇ ವಾಸಿಸುತ್ತಿದ್ದ. ಆತನ ಮನೆಗೆ ಹೋಗಲು ಅನೇಕ ರಸ್ತೆಗಳಿದ್ದವು. ಆತ ತನ್ನ ವಿಶ್ವವಿದ್ಯಾಲಯವನ್ನು ಬಿಟ್ಟು, ತನ್ನ ಮನೆಯ ರಸ್ತೆಯಿಂದ ಕವಲೊಡೆದು ಹಲವಾರು ರಸ್ತೆಗಳಾಗುವ ಆ ಕೂಡು ದಾರಿಯ ಬಳಿ ಬರುತ್ತಿದ್ದ. ಕೆಲವು ರಸ್ತೆಗಳು ಹೀಗೆ, ಕೆಲವು ರಸ್ತೆಗಳು ಹಾಗೆ, ಒಂದು, ಒಂದು ಕಡೆಯಿಂದ ಮತ್ತೊಂದು ಇನ್ನೊಂದು ಕಡೆಯಿಂದ, ಹೀಗೆ ರಸ್ತೆ ಕವಲೊಡೆದಿತ್ತು. ಅವನು ಹೇಗೆ ಪ್ರತಿದಿನ ಕವಲು ದಾರಿಯಲ್ಲಿ ನಿಂತು ಈವತ್ತು ನಾನು ಯಾವ ದಾರಿಯಲ್ಲಿ ಹೋಗಲಿ ಎಂದು ಅರ್ಧ ಗಂಟೆ ತನ್ನನ್ನು ತಾನೆ ಪ್ರಶ್ನಿಸಿಕೊಳ್ಳುತ್ತಿದ್ದ. ಪ್ರತಿಯೊಂದು ರಸ್ತೆಗೂ ತನ್ನದೇ ಆದ ಪ್ರಯೋಜನಗಳು, ತೊಂದರೆಗಳು ಇದ್ದವು. ಇವು ಅವನ ತಲೆ ಹೊಕ್ಕಿದ್ದವು.

ಕ್ರಿಯಾರೂಪಕ್ಕೆ ತರಲು ಆಲೋಚನೆಗಳಿಗೆ ಇರುವ ನ್ಯೂನತೆಗೆ ಉದಾಹರಣೆಯಾಗಿ ಇದನ್ನು ಹೇಳಿದ್ದೇನೆ. ನೀನು ಬರೀ ಯೋಚಿಸಲು ಪ್ರಾರಂಭಿಸಿದರೆ, ಕಾರ್ಯಗತಗೊಳಿಸಲು ಸಾಧ್ಯವಿಲ್ಲ.

ಈ ನೆಲೆಯಲ್ಲಿ ಇಂತಹದೊಂದು ನಿದರ್ಶನ ಅತ್ಯಂತ ಸೂಕ್ತವಾದದ್ದು. ಆದರೆ ಉನ್ನತ ಹಂತಗಳಲ್ಲಿ ಇದನ್ನು ನಾವು ಅನ್ವಯಿಸಲು ಸಾಧ್ಯವಾಗುವುದಿಲ್ಲ. ಉನ್ನತ ಹಂತಗಳಲ್ಲಿ ಇದಕ್ಕೆ ತದ್ವಿರುದ್ಧವಾಗಿ ಕೆಲಸ ಮಾಡುತ್ತದೆ. ಒಂದೇ ಒಂದು ಅಂಶವನ್ನು ಗುರಿಯಲ್ಲಿಟ್ಟುಕೊಂಡ ಬಿಲ್ಲುಗಾರನಾಗಿ ನೀನು ಇರುವವರೆಗೂ, ಕೆಳಗಿನ ಹಂತಗಳಲ್ಲಿ ಎಲ್ಲ ಬುದ್ಧಿವಂತಿಕೆಯೂ ಹೀಗೇ – ಎಲ್ಲ ಸಾಧ್ಯತೆಗಳನ್ನೂ ನೋಡುವುದರಿಂದ ಕಾರ್ಯರೂಪಕ್ಕೆ ತರಲು ಒಂದು ನಿರ್ಧಾರವನ್ನು ಮಾಡಲು ಸಾಧ್ಯವಾಗುವುದಿಲ್ಲ. ಇಡೀ ಲಕ್ಷ್ಯವನ್ನು ನೋಡಲು (ಅಂದರೆ ಎಲ್ಲವೂ ಒಳಗೊಂಡಿರುವ ಪರಮ ಸತ್ಯ) ನಾವು ಇನ್ನೊಂದು ಅಂಚಿಗೆ ಹೋಗಬೇಕಾಗುತ್ತದೆ. ಅಲ್ಲಿಗೆ ನೀನು ಹೋದಾಗ ನಿನಗೆ ಗೋಚರಿಸುವುದು ಈ ಅಸಂಖ್ಯಾತವಾದ ಸತ್ಯಗಳ ಒಟ್ಟು ಮೊತ್ತ ಅಲ್ಲ. ಅಗಣಿತ ಪ್ರಮಾಣದ ಸತ್ಯಗಳನ್ನು ಒಂದರ ನಂತರ ಮತ್ತೊಂದರಂತೆ ನೋಡಲು ಮಾತ್ರ ಸಾಧ್ಯವಾಗುತ್ತದೆ. ಆದರೆ ಎಲ್ಲವನ್ನೂ ಒಮ್ಮೆಲೇ ನೋಡಲು ನಿಲುಕುವುದೇ ಇಲ್ಲ. ಆದರೆ ಉನ್ನತ ಮಟ್ಟಕ್ಕೆ ಏರುತ್ತಿದ್ದಂತೆ, ನಿಮಗೆ ಮೊದಲು ಗೋಚರಿಸುವುದೇ ಇಡೀಯಾಗಿ – ಯಾವುದೇ ವಿಭಜನೆಗಳಿಲ್ಲದೆ.

ಹೀಗಾಗಿ ಇಲ್ಲಿ ಆಯ್ಕೆ ಮಾಡುವ ಯಾವುದೇ ಅವಕಾಶವಿಲ್ಲ. ಇದು ಕೇವಲ ಮಾಡಬೇಕಾದ ಒಂದು ದೃಷ್ಟಿ. ಇದರ ಮತ್ತು ಅದರ ನಡುವಿನ ಆಯ್ಕೆ ಎಂಬುದು ಇಲ್ಲ ಹಾಗೆ ಇನ್ನು ನಡೆಯುವುದಿಲ್ಲ. ಹಾಗೂ ಒಂದು ಕಳೆದ ನಂತರ ಮತ್ತೊಂದು ಎಂದೂ ಸಹ ಇಲ್ಲ. ಇಡೀ ದೃಷ್ಟಿಯನ್ನು ಒಟ್ಟಾರೆಯಾಗಿ ಒಂದೇ ಬಾರಿಗೆ ಒಂದೇ ವಸ್ತುವೆಂಬಂತೆ ನೋಡಬೇಕಿದೆ. ಆಯ್ಕೆ ಎಂಬುದು ಕೇವಲ ಒಂದು ದೃಷ್ಟಿ.

ನೀನು ಆ ಸ್ಥಿತಿಯಲ್ಲಿ ಇಲ್ಲದಿರುವವರೆಗೂ ನಿನಗೆ ಸಂಪೂರ್ಣ ದೃಷ್ಟಿ ಸಿಗುವುದಿಲ್ಲ. ನಮ್ಮ ಮನಸ್ಸು ಮಾಡುವಂತೆ, ಒಂದು ಸತ್ಯಕ್ಕೆ ಮತ್ತೊಂದನ್ನು ಬೆಸೆಯುವುದರಿಂದ ಯಶಸ್ವಿಯಾಗಿ, ಸತತವಾಗಿ ಆ ಸಮಗ್ರತೆಯನ್ನು ನೋಡಲು ಸಾಧ್ಯವಿಲ್ಲ. ಮನಸ್ಸು ಯಾವಾಗಲೂ ಒಂದಾದ ನಂತರ ಒಂದರಂತೆ ವಸ್ತುಗಳನ್ನು ನೋಡಬಲ್ಲದು – ಗುಣಾತ್ಮಕವಾಗಿ. ಆದರೆ ಏನೋ ಒಂದು ನಮಗೆ ತಪ್ಪಿಹೋಗುತ್ತದೆ – ಸತ್ಯದ ಅರಿವೇ ನಮಗೆ ತಪ್ಪಿ ಹೋಗುತ್ತದೆ.

ಏಕಕಾಲದಲ್ಲಿ, ಇಡೀ ಸಮಗ್ರತೆಯ ವಿಶ್ವ ದೃಷ್ಟಿಯನ್ನು ಒಂದು ಘಟಕವಾಗಿ ಪರಿಗಣಿಸಿದರೆ ಮಾತ್ರ ನಮಗೆ ಸಂಪೂರ್ಣವಾದ ಸತ್ಯ ಕಾಣಿಸುವುದು.

ಹೀಗಾಗಿ, ಕ್ರಿಯೆಯು ತಪ್ಪು, ತಿದ್ದುಪಡಿ, ಚರ್ಚೆಗಳ ಫಲಶ್ರುತಿಯಾದ ಆಯ್ಕೆಯಲ್ಲ, ಬದಲಿಗೆ, ಏನು ಆಗಬೇಕಿದೆ ಎಂಬುದರ ಸ್ಪಷ್ಟವಾದ ದೃಷ್ಟಿ. ಇಂಥಹ ದೃಷ್ಟಿಯು ದೋಷಾತೀತವಾದದ್ದು.

**– ಶ್ರೀಮಾತೆ: ಭಕ್ತನೋರ್ವನೊಡನೆ ಸಂದರ್ಶನ, ಫೆಬ್ರವರಿ 3, 1962**

## ಕಲ್ಪನೆಯ ಸಾಮಾರ್ಥ್ಯ ಮತ್ತು ಭರವಸೆ

ಕೋಯೆ ಒಬ್ಬ ವೈದ್ಯನಾಗಿದ್ದ. ಆತ ಮನೋವೈದ್ಯಕೀಯ ಹಾಗೂ ಸ್ವಯಂ–ಸಲಹೆ ಬಳಸಿ ರೋಗಿಗಳಿಗೆ ಗುಣಪಡಿಸುತ್ತಿದ್ದ. ಈ ರೀತಿಯ ಉಪಚಾರವನ್ನು ಆತ ಕಲ್ಪನೆಯ ಸಹಜ ಕ್ರಿಯೆ ಎಂದು ಕರೆಯುತ್ತಿದ್ದ. ಆತ ಕಲ್ಪನೆ ಎಂಬುದನ್ನು ಭರವಸೆ/ನಂಬಿಕೆ ಎಂಬ ಅರ್ಥದಲ್ಲಿ ಹೇಳಿದ್ದಾನೆ. ಹೀಗಾಗಿ ತನ್ನ ಎಲ್ಲ ರೋಗಿಗಳಿಗೂ ಆತ ಈ ರೀತಿಯಲ್ಲಿಯೇ ಚಿಕಿತ್ಸೆ ನೀಡಿದ್ದಾನೆ: ಅವರು ಎಲ್ಲರೂ, ತಾವು ರೋಗಮುಕ್ತವಾಗಿದ್ದಾರೆ, ಅಥವಾ ಪೂರ್ಣ ವಾಸಿಯಾಗುವ ಹಂತಕ್ಕೆ ಬಂದಿದ್ದಾರೆ ಎಂದು ಕಲ್ಪಿಸಿಕೊಳ್ಳಬೇಕೆಂದು ಹೇಳುತ್ತಾನೆ. ಹೀಗೆ ಪದೇ ಪದೇ ಕಲ್ಪಿಸಿಕೊಂಡರೆ ಅದು ಯಶಸ್ವೀಯಾಗಿ ಪರಿಣಮಿಸಿ ಖಾಯಿಲೆ ನಿಜಕ್ಕೂ ವಾಸಿಯಾಗುತ್ತದೆ. ಹೀಗೆ ಅವನು ಅನೇಕ ರೋಗಿಗಳಿಗೆ ಉಪಶಮನ ನೀಡಿದ್ದಾನೆ. ಅದರಲ್ಲಿ ಕೆಲವು ವೈಫಲ್ಯಗಳೂ ಆಗಿವೆಯಂತೆ. ಮತ್ತು ಕೆಲವು ಉಪಶಮನಗಳು ಶಾಶ್ವತವಾದುದಾಗಿರಲಿಲ್ಲ. ನನಗೆ ಈ ಬಗ್ಗೆ ಗೊತ್ತಿರಲಿಲ್ಲ. ಏನೇ ಆಗಲಿ, ಇದರಿಂದ ಅನೇಕರು ಈ ಪ್ರಮುಖ ಸತ್ಯದ ಬಗ್ಗೆ ಚಿಂತಿಸುವಂತೆ, ಚರ್ಚಿಸುವಂತೆ ಮಾಡಿತು.

ಮನಸ್ಸೆಂದರೆ ಒಂದು ರಚನಾತ್ಮಕ ಉಪಕರಣ. ಅದನ್ನು ಹೇಗೆ ಸರಿಯಾದ ರೀತಿಯಲ್ಲಿ ಬಳಸಬೇಕು ಎಂದು ಅರಿತವನು ಒಳ್ಳೆಯ ಪರಿಣಾಮಗಳನ್ನು ಪಡೆಯಬಹುದು. ಜನರು ತಮ್ಮ ಸಮಯವನ್ನು ತಪ್ಪು ಕಲ್ಪನೆಗಳಲ್ಲೇ ಹಾಳುಮಾಡಿಕೊಳ್ಳುತ್ತಾರೆ ಎಂದು ಆತ ಗಮನಿಸಿದ್ದ. ನನಗೂ ಆತನ ಈ ಮಾತಿನ ಬಗ್ಗೆ ಅನುಮೋದನೆ ಇದೆ. ಅವರ ಮನೋ ಚಟುವಟಿಕೆಯು ಸದಾ ಅರ್ಧ ಅಥವಾ ನಿರಾಶಾಭಾವದ್ದೇ ಆಗಿರುತ್ತದೆ, ಹಾಗೂ ಅದು ವಿಧ್ವಂಸಕಾರಿಯಾಗಿಯೂ

ಇರುತ್ತದೆ. ಮುಂದೆ ಬರಬಹುದಾದ ದುರಂತ, ಕರಾಳ ದಿನಗಳ ಬಗ್ಗೆಯೇ ಅವರು ಯಾವಾಗಲೂ ಚಿಂತಿಸುತ್ತಿರುತ್ತಾರೆ. ಅವರು ಈಗಾಗಲೇ ಮಾಡಿರುವ ದುಷ್ಕೃತ್ಯಗಳ ಪರಿಣಾಮ ಇದಾಗಿದೆ.. ಅಪಾರ ಕಲ್ಪನಾ ಸಾಮರ್ಥ್ಯದಲ್ಲಿ ಭಾರೀ ದುರಂತಗಳನ್ನು ಕಲ್ಪನೆಯಲ್ಲಿ ರಚಿಸಿಕೊಳ್ಳುತ್ತಾರೆ. ಇದೇ ಕಲ್ಪನೆಯನ್ನು ಅವರು ಬೇರೆ ರೀತಿ ಬಳಸಿಕೊಳ್ಳುವಂತಿದ್ದರೆ, ಸಹಜವಾಗಿಯೇ ಅದರಿಂದ ಗುಣಾತ್ಮಕವಾದ ತೃಪ್ತಿಕರವಾದ ಪರಿಣಾಮಗಳು ಬರುತ್ತಿದ್ದವು.

ಕೋಯೆ ಶಿಫಾರ್ಸು ಮಾಡುತ್ತಿದ್ದುದು ಇಂತಹ ಗುಣಾತ್ಮಕ ಆಲೋಚನೆಗಳನ್ನು. ಹೀಗೆ ಅವನು ತನ್ನ ರೋಗಿಗಳಿಗೆ ಖಾಯಿಲೆಯನ್ನು ವಾಸಿಮಾಡುತ್ತಿದ್ದ. ಆ ವೈದ್ಯ ಹೇಳುತ್ತಿದ್ದ: 'ಈ ಮಾತನ್ನು ಪದೇ ಪದೇ ಹೇಳಿಕೋ.. ನನಗೆ ವಾಸಿಯಾಗುತ್ತಿದೆ. ನಾನು ವಾಸಿಯಾಗುತ್ತಿದ್ದೇನೆ, ನಾನು ಶಕ್ತಿವಂತನಾಗಿದ್ದೇನೆ, ನಾನು ಸಾಕಷ್ಟು ಆರೋಗ್ಯವಂತನಾಗಿದ್ದೇನೆ. ನಾನು ಈ ಕೆಲಸವನ್ನು ಮಾಡಬಲ್ಲೆ, ನಾನು ಆ ಕೆಲಸವನ್ನು ಮಾಡಬಲ್ಲೆ..'

ಒಬ್ಬ ಮಹಿಳೆಗೆ ಭಾರೀ ಪ್ರಮಾಣದಲ್ಲಿ ಹಿಡಿ ಹಿಡಿ ಗಾತ್ರದಲ್ಲಿ ತಲೆಗೂದಲು ಉದುರುತ್ತಿದ್ದು. ಆಕೆಗೆ ಈ ಪ್ರಯೋಗ ಮಾಡಲು ಸಲಹೆ ಮಾಡಿದರು. ತನ್ನ ತಲೆ ಬಾಚುವಾಗ ಅವಳು ಹೀಗೆ ಹೇಳಿಕೊಳ್ಳಬೇಕು. 'ನನ್ನ ಕೂದಲು ಉದುರುವುದಿಲ್ಲ.' ಮೊದಲೆರಡು ಸಲ ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಆದರೆ ಅವಳು ತನ್ನ ಪ್ರಯತ್ನವನ್ನು ಬಿಡಲಿಲ್ಲ. ಪ್ರತಿಬಾರಿ ಬಾಚಿಕೊಳ್ಳುವಾಗಲೂ, 'ನಾನು ತಲೆ ಬಾಚಿಕೊಳ್ಳುತ್ತೇನೆ, ಆದರೆ ಈಗ ಕೂದಲು ಉದುರುವುದಿಲ್ಲ' ಎಂದೇ ಹೇಳಿಕೊಳ್ಳುತ್ತಿದ್ದಳು. ನಂತರ ನಾನೇ ಕಣ್ಣಾರೆ ಕಂಡಿದ್ದೇನೆ ಇದರಿಂದ ಅದ್ಭುತವಾದ ಪರಿಣಾಮವುಂಟಾಗಿ ಕೂದಲು ಉದುರುವುದು ನಿಂತಿತು. ಅವಳು ಇನ್ನೂ ಮುಂದುವರಿಸಿ, 'ಇನ್ನು ನನ್ನ ಕೂದಲು ಬೆಳೆಯುತ್ತದೆ' ಎಂದು ಹೇಳಿಕೊಳ್ಳ–ತೊಡಗಿದಳು. ಕಾಲ ಕ್ರಮೇಣ ಅದರಲ್ಲೂ ಅವಳಿಗೆ ಯಶಸ್ಸು ದೊರಕಿತು. ನನ್ನ ತಲೆ ತೀರಾ ಬೋಳಾಗಿ ಹೋದ ಸಂದರ್ಭದಲ್ಲಿ ಹೀಗೆ ಮಾಡಿದೆ ಎಂದು ಇದನ್ನು ಆಕೆಯೇ ನನಗೆ ವಿವರಿಸಿದ್ದಳು.

ಇದು ಬಹಳ ಪರಿಣಾಮಕಾರಿಯಾದದ್ದು. ಮನಸ್ಸಿನ ಒಂದು ಮೂಲೆಯಲ್ಲಿ ವ್ಯಕ್ತಿ ಇಂತಹ ರಚನೆಗಳನ್ನು ಮಾಡಿಕೊಳ್ಳುತ್ತಿದ್ದರೆ ಅದೇ ಮನಸ್ಸಿನ ಮತ್ತೊಂದು

ಮೂಲೆಯಲ್ಲಿ, ನನ್ನ ಪ್ರಯತ್ನ ಯಶಸ್ವಿಯಾಗುವುದಿಲ್ಲ. ಎಂದು ಅಂದುಕೊಳ್ಳುತ್ತಿರ–ಬಾರದು. ಹೀಗೆ ಮಾಡಿದರೆ ನಿಮ್ಮ ಪ್ರಯತ್ನವನ್ನು ನೀವೇ ಹಾಳು ಮಾಡಿಕೊಂಡ ಹಾಗೆ ಆಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/3–5**

**ಮಂತ್ರದ ಶಕ್ತಿ / ಸಾಮರ್ಥ್ಯ**

ಒಬ್ಬ ಗುರುವಿನಿಂದ ದೊರೆತ ಮಂತ್ರದಿಂದ, ಆ ಮಂತ್ರವನ್ನು ಕಂಡುಹಿಡಿದವನ ಸಾಮರ್ಥ್ಯದ ಆರಿವು ಮೂಡುತ್ತದೆ. ಅದರ ಶಕ್ತಿಯು ಸಹಜವಾಗಿ ಆ ಮಂತ್ರದಲ್ಲೇ ಇರುತ್ತದೆ. ಏಕೆಂದರೆ ಶಬ್ದವು ಅನುಭವವನ್ನು ಒಳಗೊಂಡಿರುತ್ತದೆ. ಭಾರತದ ಬಗ್ಗೆ ನನಗೆ ಏನೇನೂ ಗೊತ್ತಿರದ ಕಾಲದಲ್ಲಿ, ಇದನ್ನು ನಾನು ಒಮ್ಮೆ ಪ್ಯಾರಿಸ್ಸಿನಲ್ಲಿ ನೋಡಿದೆ. ಆಗ ನನಗೆ ಮಂತ್ರ ಎಂದರೆ ಏನೆಂದೂ ಸಹ ಗೊತ್ತಿರಲಿಲ್ಲ. ಹಿಮಾಲಯದಲ್ಲಿ ಒಂದು ವರ್ಷ ಯೋಗಾಭ್ಯಾಸ ಮಾಡಿದ್ದ ವ್ಯಕ್ತಿಯೊಬ್ಬನ ಭಾಷಣ ಕೇಳಲು ಹೋಗಿದ್ದೆ. ಅವನು ಅಲ್ಲಿಯ ಅನುಭವಗಳನ್ನು ಹೇಳಿದ್ದ. ಅವು ಯಾವುವೂ ಸ್ವಾರಸ್ಯಕರವಾಗಿರಲಿಲ್ಲ. ಇದ್ದಕ್ಕಿದ್ದಂತೆ, ಅವನ ಭಾಷಣದ ಮಧ್ಯೆ ಆತ 'ಓಂ' ಕಾರದ ಶಬ್ಧವನ್ನು ಉಚ್ಚರಿಸಿದ. ಆ ಕ್ಷಣ, ಇಡೀ ಕೋಣೆಯು ಬಂಗಾರ ಬಣ್ಣದ ಬೆಳಕಿನಲ್ಲಿ ಪ್ರಜ್ವಲಿಸಿದ ಹಾಗೆ ಭಾಸವಾಯಿತು. ಬಹುಶಃ ಇಡೀ ಕೋಣೆಯಲ್ಲಿ ಇಂತಹ ಅನುಭವ ನನಗೆ ಮಾತ್ರ ಆಗಿತ್ತು. ನನಗೆ ನಾನೇ ಇದು ಚೆನ್ನಾಗಿದೆ ಎಂದು ಹೇಳಿಕೊಂಡೆ. ನಂತರ ನಾನು ಇದರ ಬಗ್ಗೆ ಇನ್ನು ಹೆಚ್ಚಿನ ಚಿಂತೆ ಮಾಡಲಿಲ್ಲ, ಇದರ ಬಗ್ಗೆ ಮರೆತೇಬಿಟ್ಟೆ. ಆದರೆ ಈ ಅನುಭವ ಇನ್ನೆರಡು ಮೂರು ದೇಶಗಳಲ್ಲಿ, ವಿವಿಧ ಪ್ರವಚನಕಾರರ ಸಮ್ಮುಖದಲ್ಲಿ ಮತ್ತೆ ಮತ್ತೆ ಆಯಿತು. ಪ್ರತಿ ಬಾರಿ ಓಂಕಾರವನ್ನು ಕೇಳಿದಾಗಲೂ ಅದೇ ದಿವ್ಯ ತೇಜಸ್ಸಿನ ಬೆಳಕು ನನ್ನನ್ನು ಆವರಿಸಿದ್ದು ಕಂಡಿತು. ಆ ಶಬ್ದದಲ್ಲಿ ಸಾವಿರ ಸಾವಿರ ವರ್ಷಗಳ ಆಧ್ಯಾತ್ಮಿಕ ಮಹತ್ವಾಕಾಂಕ್ಷೆಯ ಕಂಪನಗಳು ಇವೆ ಎಂದು ಆಗ ನನಗೆ ಅರ್ಥವಾಯಿತು. ಇಡೀ ಮನುಕುಲದ ಪರಮಾತ್ಮನ ಬಗೆಗಿನ ಮಹತ್ವಾಕಾಂಕ್ಷೆಯು ಅದರಲ್ಲಿದೆ ಎಂದು ಅರಿವಾಯಿತು. ಆ ಶಕ್ತಿಯು ತಂತಾನೆ, ಸಹಜವಾಗಿ ಇದೆ ಏಕೆಂದರೆ ಆ ಅನುಭವವು ಅಲ್ಲಿದೆ.

**– ಶ್ರೀಮಾತೆ: ಭಕ್ತನೋರ್ವನೊಡನೆ ಸಂದರ್ಶನ, ಮೇ 11, 1963**

# ಪ್ರೇರಣೆ

– ಅನುವಾದ: ಪ್ರೊ. ವೀರಭದ್ರಪ್ಪ ಕೆ.

## ಮನುಷ್ಯನ ನಿಷ್ಕಲ್ಮಶ ಪ್ರೀತಿಯ ಶಕ್ತಿ

*ಆದರೆ ಅನುಸೂಯ[1] ಯಾರನ್ನು ಪ್ರತಿನಿಧಿಸುತ್ತಾಳೆ?*

ಹಿಂದುಗಳ ಕಲ್ಪನೆಯ ಪ್ರಕಾರ ಅವಳು ಆದರ್ಶ ಹೆಣ್ಣಿನ ಪ್ರತಿರೂಪದಂತಿದ್ದಾಳೆ; ತನ್ನ ಗಂಡನನ್ನು ದೇವರಂತೆ ಆರಾಧಿಸುವವಳು. ಅದರರ್ಥ ಏನೆಂದರೆ, ಅವಳು ತನ್ನ ಗಂಡನಲ್ಲಿ ಪರಮಾತ್ಮನನ್ನು ಕಾಣುತ್ತಾಳೆ ಮತ್ತು ಈ ಹೆಣ್ಣು ಪುರಾಣದ ಎಲ್ಲಾ ದೇವತೆಗಳಿಗಿಂತ ಶಕ್ತಿಶಾಲಿ. ಏಕೆಂದರೆ ಸಂಪೂರ್ಣವಾಗಿ ತನ್ನನ್ನು ತಾನು ಒಪ್ಪಿಸಿಕೊಳ್ಳುವ ಅಂತರಾತ್ಮದ ಸಾಮರ್ಥ್ಯದಿಂದಾಗಿ; ಮತ್ತು ಪರಮಾತ್ಮನು ಪತಿಯಲ್ಲಿದ್ದಾನೆಂಬ ಅವಳ ನಂಬಿಕೆಯಿಂದಾಗಿ, ಅವಳಿಗೆ ಎಲ್ಲಾ ದೇವತೆಗಳಿಗಿಂತ ಹೆಚ್ಚಿನ ಶಕ್ತಿ ಇತ್ತು.

ಸಿನಿಮಾದಲ್ಲಿ ಕಥೆ ಈ ರೀತಿ ಹೇಳಲ್ಪಟ್ಟಿತ್ತು. ನಾರದ ಎಂದಿನಂತೆ ಹಾಸ್ಯದಿಂದಿದ್ದ. (ನಾರದ ಪೂರ್ಣದೇವತೆಯಲ್ಲ – ಏನೆಂದರೆ, ಅವನು ಅವನ ಬಯಕೆಯಂತೆಯೇ ದೇವತೆಗಳ ಕೂಡ ಮತ್ತು ಮಾನವರ ಕೂಡ ಸಂವಹಿಸಬಲ್ಲವನಾಗಿದ್ದ ಜೊತೆಗೆ ಅವನು ಮಧ್ಯಸ್ಥಗಾರನಾಗಲೂ ಬಲ್ಲವನಾಗಿದ್ದ. ಆದರೆ ಅವನು ಈ ಮೂಲಕವಾಗಿ ಇದರಿಂದ ತಮಾಷೆಪಡಲೂ ಇಷ್ಟಪಡುತ್ತಿದ್ದ), ಅವನು ಒಬ್ಬ ದೇವತೆಯ ಹತ್ತಿರ ಜಗಳವಾಡುತ್ತಿದ್ದ. ಯಾವ ದೇವತೆ ಅಂತ

---

1. ಅನುಸೂಯಾ: ಅತ್ರಿ ಋಷಿಯ ಮಡದಿ ಮತ್ತು ಹೆಚ್ಚಿನ ಅಂತ:ಶಕ್ತಿ ಭರಿತಳಾಗಿದ್ದಳು. ಅವಳ ಗಂಡನ ಅನುಪಸ್ಥಿತಿಯಲ್ಲಿ ಮೂವರು ದೇವತೆಗಳು (ಬ್ರಹ್ಮ ವಿಷ್ಣು ಮತ್ತು ಶಿವ) ಬ್ರಾಹ್ಮಣರ ಮಾರುವೇಷದಲ್ಲಿ ಬಂದು ತಿನ್ನಲು ಏನಾನ್ನಾದರು ಕೊಡು ಎಂದು ಕೇಳಿದರು. ನಗ್ನಳಾಗಿ ಬಡಿಸದಿದ್ದರೆ ಊಟ ಮಾಡುವುದಿಲ್ಲಾ ಎಂದು ಹೇಳಿದರು. ಅವರು ಬ್ರಾಹ್ಮಣರಾಗಿದ್ದರಿಂದ ಭೋಜನ ನೀಡದೆ ಕಳುಹಿಸುವ ಹಾಗಿರಲಿಲ್ಲ ಆದ್ದರಿಂದ ಅವಳು ತನ್ನ ಅಂತಃಶಕ್ತಿಯನ್ನು ಪ್ರಯೋಗಿಸಿ ತ್ರಿಮೂರ್ತಿಗಳನ್ನು ಹಸುಗೂಸುಗಳನ್ನಾಗಿಸಿದ ಮೇಲೆ ನಗ್ನಳಾಗಿಯೇ ಉಣಬಡಿಸಿದಳು. (ಈ ಚಿತ್ರವನ್ನು ಸುಮಾ ಆಶ್ರಮದ ಆಟದ ಮೈದಾನದಲ್ಲಿ ಆಗಸ್ಟ್ 1958 ತೋರಿಸಲಾಗಿತ್ತು)

ನೆನಪಿಲ್ಲಾ ಅವನೇ ಹೇಳಿದಂತೆ (ಉದಾ: ಹೌದು ಅದು ಸರಸ್ವತಿಯ ಹತ್ತಿರ ಜಗಳವಾಡುತ್ತಿದ್ದ) ಜ್ಞಾನವು ಪ್ರೇಮಕ್ಕಿಂತ ದೊಡ್ಡದು ಎಂದು ಸರಸ್ವತಿ ಹೇಳುತ್ತಿದ್ದಳು) (ಅತಿ ಹೆಚ್ಚಿನದೆಂದರೆ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿ), ಆಗ ನಾರದನು ಹೇಳಿದ್ದು "ನೀವು ಏನು ಏನು ಮಾತಾಡುತ್ತಿರುವಿರಿ ಎಂದು ನಿಮಗೇ ತಿಳಿದಿಲ್ಲಾ (ಶ್ರೀಮಾತೆ ನಗುತ್ತಾರೆ) ಪ್ರೀತಿ ಜ್ಞಾನಕ್ಕಿಂತ ಹೆಚ್ಚು ಶಕ್ತಿಶಾಲಿ, "ಆಗ ಅವಳು ಅವನಿಗೆ ಪಂಥಾಹ್ವಾನ ನೀಡಿ ಹೇಳುತ್ತಾಳೆ, ಹಾಗಾದರೆ ಇದನ್ನು ನನಗೆ ರುಜುವಾತುಪಡಿಸು" ಎಂದಾಗ ನಾರದನು "ನಾನು ರುಜುವಾತುಪಡಿಸಬಲ್ಲೆ" ಎಂದು ಉತ್ತರಿಸುತ್ತಾನೆ. ಜೊತೆಗೆ ಈ ಎಲ್ಲ ಕಥೆಯೂ ಅಲ್ಲಿಂದಲೇ ಪ್ರಾರಂಭವಾಗುತ್ತದೆ. ನಾರದನು ತನ್ನ ಗುರಿಯನ್ನು ಸಾಬೀತುಪಡಿಸಲು ಭೂಮಿಯ ಮೇಲೆ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸೃಷ್ಟಿಸುತ್ತಾನೆ. ಇದು ಚಲನಚಿತ್ರದ ಕಥೆ ಆಗಿದ್ದರೂ ಸಹಿತ, ಆ ದೇವತೆಗಳಾದ ತ್ರಿಮೂರ್ತಿಗಳ ಪತ್ನಿಯರು – ಬ್ರಹ್ಮನ ಹೆಂಡತಿ, ವಿಷ್ಣುವಿನ ಹೆಂಡತಿ ಮತ್ತು ಶಿವನ ಹೆಂಡತಿ – ಅವರೆಲ್ಲಾ ಸೇರಿಯೇ ಒಟ್ಟಾಗಿ ನಾರದ ಹೇಳಿದ್ದು ತಪ್ಪೆಂದು ಸಾಧಿಸಲು ಎಲ್ಲಾ ಪ್ರಯತ್ನ ಮಾಡಿದರು. ನನಗೆ ಕಥೆ ವಿಸ್ತಾರವಾಗಿ ನೆನಪಾಗುತ್ತಿಲ್ಲಾ, ಓಹ್ ಹೌದು ಕಥೆ ಈ ರೀತಿ ಪ್ರಾರಂಭವಾಗುತ್ತೆ; ಮೂವರಲ್ಲಿ ಒಬ್ಬರನ್ನು ಅಂದರೆ ಶಿವನ ಹೆಂಡತಿಯಾಗಲು ಇಚ್ಛಿಸಿ ಪಾರ್ವತಿ ಅವನನ್ನು ಪೂಜೆ ಮಾಡುತ್ತಾ ಇದ್ದಳು. ಶಿವ ಧ್ಯಾನದಲ್ಲಿದ್ದ, ಮತ್ತು ಅವಳು ಅವನ ಮುಂದೆ ಪೂಜೆ ಮಾಡುತ್ತಾ ಇದ್ದಳು. ಅವಳು ಪೂಜೆಗೆ ಎಣ್ಣೆ ದೀಪ ಉಪಯೋಗಿಸುತ್ತಾ ಇದ್ದಳು, ದೀಪ ಅವಳ ಕಾಲ ಮೇಲೆ ಬಿದ್ದು ಸುಟ್ಟು ಹೋದ ಕಾರಣ ಜೋರಾಗಿ ಚೀರಿದಳು. ಶಿವ ಧ್ಯಾನದಿಂದ ಹೊರಬಂದು ಮತ್ತು ಅವಳಿಗೆ ಹೇಳಿದ, "ಅದೇನು ದೇವಿ?" (ನಗು) ಅದಕ್ಕೆ ಅವಳು ಉತ್ತರಿಸಿದ್ದು "ನಾನು ಕಾಲು ಸುಟ್ಟುಕೊಂಡೆ". ಆಗ ನಾರದ ಹೇಳುತ್ತಾನೆ ನೀನು ಏನು ಮಾಡಿಕೊಂಡೆ ಎಂದು ನಿನಗೆ ನಾಚಿಕೆಯಾಗುವುದಿಲ್ವಾ? ನೀನು ಅಮರಳಿದ್ದೀಯಾ. ನಿನ್ನ ಕಾಲನ್ನು ಕೂಡ ಸುಟ್ಟುಕೊಳ್ಳುವದಕ್ಕೆ, ಅಂತಹ ನಿನ್ನ ಇಷ್ಟಕ್ಕೆ ಶಿವನನ್ನು ಧ್ಯಾನದಿಂದ ಬರುವ ಹಾಗೆ ಮಾಡಿದೆ. ಈ ಮಾತು ಕೇಳಿ ಅವಳಿಗೆ ಕೋಪ ಬಂತು. ಇದು ಬೇರೆ ರೀತಿ ಇರಬಹುದೆಂದು ನನಗೆ ನೀನು ತೋರಿಸು! ಎಂದು ಜೋರಾಗಿಯೇ ಹೇಳುತ್ತಾಳೆ. ಅದಕ್ಕೆ ನಾರದ ಉತ್ತರಿಸುತ್ತ 'ಗಂಡನ ಮೇಲೆ ನಿಜವಾದ ಪ್ರೀತಿ ಏನೆಂದು ನಾನು ನಿನಗೆ ತೋರಿಸಿಕೊಡುತ್ತೇನೆ' – ನಿನಗೆ ಅದೇನಾಗಬಹುದು ಗೊತ್ತಿಲ್ಲಾ.

ಆಮೇಲೆ ಅನುಸೂಯ ಮತ್ತು ಅವಳ ಗಂಡನ ಕಥೆ (ಅವನು ನಿಜವಾಗಿ ಒಬ್ಬ ಗಂಡ. ಒಬ್ಬ ಒಳ್ಳೆಯ ಮನುಷ್ಯ, ಆದರೆ ಆದಾಗ್ಯೂ ಅವನು ದೇವರಾಗಿದ್ದಿಲ್ಲಾ) ಅವನು ಅನುಸೂಯಳ ತೊಡೆಯ ಮೇಲೆ ಮಲಗಿದ್ದನು. ಅವರು ತಮ್ಮ ಪೂಜೆ ಮುಗಿಸಿದ್ದರು (ಇಬ್ಬರು ಶಿವನ ಆರಾಧಕರಾಗಿದ್ದರು) ಮತ್ತು ಪೂಜಾನಂತರ ಅವನು ಅನುಸೂಯಳ ತೊಡೆಯ ಮೇಲೆ ತಲೆ ಇಟ್ಟು ನಿದ್ರಿಸುತ್ತಿದ್ದ. ಈ ನಡುವೆ, ದೇವತೆಗಳೆಲ್ಲಾ ಭೂಮಿಯ ಮೇಲೆ ಇಳಿದಿದ್ದರು, ಖಚಿತವಾಗಿ ಈ ಪಾರ್ವತಿ ಮತ್ತು ಅವರು ಅನುಸೂಯಳು ಹಾಗೆ ಇರುವುದನ್ನು ನೋಡಿದರು. ಆಗ ಪಾರ್ವತಿ ಉದ್ಗರಿಸಿದಳು ಇದು ಒಳ್ಳೆ ಸಂದರ್ಭ. ಬಹಳ ಸಮೀಪ ಕಟ್ಟಿಗೆಯ ಅಡುಗೆಯ ಒಲೆ ಉರಿಯುತ್ತಿತ್ತು. ಆಗ ಪಾರ್ವತಿಯು ತನ್ನ ಶಕ್ತಿಯಿಂದ, ಅಲ್ಲಿದ್ದ ಉರಿಯನ್ನು ಉರುಳಿಸುತ್ತಾ ಅನುಸೂಯಾಳ ಕಾಲಿಗೆ ತಗುಲುವಂತೆ ಮಾಡಿದಳು. ಅದು ಅವಳನ್ನು ನೋವಿನಿಂದ ಬೆಚ್ಚಿಬೀಸಿತು ಅದು ಸುಡಲು ಪ್ರಾರಂಭಿಸಿತು; ಒಂದು ಚೀರಾಟವಿಲ್ಲಾ ಒಂದು ಅಲುಗಾಟವಿಲ್ಲಾ, ಏನೂ ಇಲ್ಲಾ... ಏಕೆಂದರೆ ಅವಳು ಗಂಡನನ್ನು ಎಬ್ಬಿಸಲು ಬಯಸಲಿಲ್ಲಾ. ಆದರೆ ಅವಳು ಶಿವನನ್ನು ಪ್ರಾರ್ಥಿಸಲು ಪ್ರಾರಂಭಿಸಿದಳು (ಆಗ ಶಿವನು ಅಲ್ಲಿ ಪ್ರತ್ಯಕ್ಷನಾದನು.) ಮತ್ತು ಅವಳು ಶಿವನನ್ನು ಪ್ರಾರ್ಥಿಸಿದ ಕಾರಣ (ಇದು ಕಥೆಯಲ್ಲಿ ಸುಂದರವಾಗಿದೆ), ಹೌದು, ಶಿವನನ್ನು ಪ್ರಾರ್ಥಿಸಿದ ಕಾರಣ, ಶಿವನ ಕಾಲು ಸುಡಲಾರಂಭಿಸಿತು!

(ಶ್ರೀಮಾತೆ ನಗುತ್ತಾರೆ)

ನಾರದ ಪಾರ್ವತಿಗೆ ಶಿವನನ್ನು ತೋರಿಸುತ್ತಾನೆ; ನೋಡು ನೀನು ಏನು ಮಾಡುತ್ತಿರುವೆ; ನೀನು ನಿನ್ನ ಗಂಡನ ಕಾಲನ್ನು ನೀನೆ ಸುಡುತ್ತಿರುವೆ!' ಆಗ ಪಾರ್ವತಿಯು ಆ ಕ್ರಿಯೆಯ ವಿರುದ್ಧವಾಗಿ ಸೂಚನೆಯನ್ನು ಕೊಡುತ್ತಾಳೆ ಮತ್ತು ಈ ಮೂಲಕ ಆ ಬೆಂಕಿ ಆರಿಸಲ್ಪಟ್ಟಿತ್ತು... ಕಥೆ ಈ ರೀತಿ ಆಗಿತ್ತು. ಸುಂದರವಾದದ್ದು.

**– ಶ್ರೀಮಾತೆ: ಭಕ್ತನೋರ್ವನೊಡನೆ ಸಂದರ್ಶನ, ನವೆಂಬರ್ 4, 1958**

*(ಶ್ರೀಮಾತೆ ಕಥೆಯ ಬಗ್ಗೆ ಈ ಕೆಳಕಂಡಂತೆ ವ್ಯಾಖ್ಯಾನಿಸಿದ್ದಾರೆ):* ಮನುಷ್ಯನಲ್ಲಿನ ಪ್ರೀತಿ ನಿಷ್ಕಲ್ಮಷವಾಗಿದ್ದರೆ, ಅದು ಸರ್ವಶಕ್ತವಾಗಿರುತ್ತದೆ. ದುರಾದೃಷ್ಟತೆಯಿಂದ

ಮನುಷ್ಯ ಪ್ರೀತಿಯಲ್ಲಿ ಸಾಮಾನ್ಯವಾಗಿಯೇ ಪ್ರೀತಿ ಪಾತ್ರರಿಗಿಂತಲೂ ಸ್ವಂತಕ್ಕೆ ಪ್ರೀತಿ ಹೆಚ್ಚಾಗಿರುತ್ತದೆ; ಇಂತಹ ಪ್ರೀತಿಯಿಂದ ನಮ್ಮನ್ನು ನಾವು ತಲ್ಲೀನಗೊಳಿಸಲಾಗುವುದಿಲ್ಲಾ. ನಾವು ನಿನ್ನೆ ಚಿತ್ರದಲ್ಲಿ ನೋಡಿದಂತೆಯೇ (ಮತ್ತು ಆ ಕಥೆ ಪರಮ ಸತ್ಯವಾಗಿದೆ) ಪುರಾಣಗಳಲ್ಲಿನ ದೇವತೆಗಳು ಮನುಷ್ಯರಿಗಿಂತ ಕೆಟ್ಟವರಿರುತ್ತಾರೆ. ಅತಿಮಾನಸ ಸ್ತರದಲ್ಲಿನ ದೇವತೆಗಳೆಲ್ಲಾ ಅನಂತದಷ್ಟು ಅಹಂಕಾರಿಗಳಾಗಿರುತ್ತಾರೆ. ಅವರಿಗೆ ಅವರ ಶಕ್ತಿಯದೇ ಗಣನೆ, ಆದರೆ ಮನುಷ್ಯನಲ್ಲಿ ಅಂತರಾತ್ಮವಿದೆ. ಆದ ಕಾರಣ ಅವನಲ್ಲಿ ನಿಜವಾದ ಪ್ರೀತಿ ಮತ್ತು ಸಹಾನುಭೂತಿ ಇದೆ. ಅದರಲ್ಲಿ ದೇವತೆಗಳಿಗಿಂತ ಉನ್ನತವಾದದ್ದು ಅಡಗಿದೆ. ಇದನ್ನು ಚಿತ್ರದಲ್ಲಿ ಬಹಳ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಮತ್ತು ಅದು ನಿಜವಾಗಿ ಸತ್ಯವಾಗಿದೆ.

ದೇವತೆಗಳು ದೋಷರಹಿತರು. ಅವರು ತಮ್ಮ ಸ್ವಭಾವಕ್ಕನುಗುಣವಾಗಿ ಜೀವಿಸುತ್ತಾರೆ, ಸ್ವಾಭಾವಿಕವಾಗಿ ಮತ್ತು ನಿರ್ಬಂಧವಿಲ್ಲದೆ ಸ್ವತಂತ್ರದಿಂದ ಇರುತ್ತಾರೆ; ಅದು ಅವರ ದೈವತ್ವದ ಹಾದಿ. ಇನ್ನು ಉನ್ನತ ಹಂತದಿಂದ ಸಂಪೂರ್ಣವಾಗಿ ಉನ್ನತ ದೃಷ್ಟಿಕೋನದಿಂದ, ನೋಡಿದರೆ ಮನುಷ್ಯರಿಗಿಂತ ಕೆಲವೇ ಗುಣಗಳಿರುವುದು ತಿಳಿದು ಬರುತ್ತದೆ. ಈ ಚಿತ್ರದಲ್ಲಿ, ಮನುಷ್ಯನಲ್ಲಿನ ಪ್ರೀತಿ ಮತ್ತು ಸಮರ್ಪಣಾ ಮನೋಭಾವದ ಸಾಮರ್ಥ್ಯದಿಂದಾಗಿ ದೇವತೆಗಳಷ್ಟು ಶಕ್ತಿಶಾಲಿಗಳು ಮತ್ತು ಅವರಿಗಿಂತ ಹೆಚ್ಚೇ ಶಕ್ತಿಶಾಲಿಗಳಾಗಿದ್ದಾರೆ. – ಅವರಲ್ಲಿ ಆವಾಗ ಅಹಂಕಾರವಿರುವುದಿಲ್ಲ – ಯಾವಾಗ ಅವರು ಅಹಂಕಾರವನ್ನು ಮೀರುವರೋ ಆಗಲೇ ಮಾನವರು ಶಕ್ತಿಶಾಲಿಗಳಾಗುತ್ತಾರೆ.

ಮನುಷ್ಯರು ನಿಸ್ಸಂಶಯವಾಗಿ ದೇವತೆಗಳಿಗಿಂತ ಪರಮಾತ್ಮನ ಹತ್ತಿರವಿದ್ದಾರೆ. ಈ ರೀತಿಯಾಗಿ ಪರಿವರ್ತಗೊಳ್ಳಲು ಅವಶ್ಯವಿದ್ದ ಸ್ಥಿತಿಗತಿಗಳನ್ನು ರೂಪಿಸಿಕೊಂಡರೆ, ಅವನು ದೇವನ ಸಮೀಪದಲ್ಲಿರುತ್ತಾನೆ. ಇದು ತಂತಾನೆ ಆಗುವುದಿಲ್ಲಾ. ಆದರೆ ಅವನು ಆ ರೀತಿ ಆಗಬಹುದು, ಏಕೆಂದರೆ ಅವನಲ್ಲಿ ಶಕ್ತಿಯಿದೆ, ಸಂಭಾವ್ಯತೆ ಇದೆ.

**– ಶ್ರೀಮಾತೆ: ಭಕ್ತನೋರ್ವನೊಡನೆ ಸಂದರ್ಶನ, ಆಗಸ್ಟ್ 9, 1959**

**ಆದರೆ ಸಾವು ಕಾಯಬಹುದು**

ಎಲಿಜಿಬೆತ್ ರಾಣಿಯ ನಿಜವಾದ ಕಥೆ ಕೂಡ ಇದೆ. ಅವಳು ತನ್ನ ಜೀವನದ ಕೊನೆ ದಿನಗಳಿಲ್ಲಿದ್ದಳು. ಅತ್ಯಂತ ಅನಾರೋಗ್ಯದ ಸ್ಥಿತಿಯಲ್ಲಿದ್ದಳು. ಆದರೆ ದೇಶದಲ್ಲೊಂದು ಅಶಾಂತಿಯ ಘಟನೆ ನಡೆಯಿತು. ಹೆಚ್ಚಿನ ಕರ ಹೇರಿಕೆಯ ಪ್ರಶ್ನೆಯಿಂದಾಗಿ, ಕೆಲ ಜನರ ಗುಂಪು (ವ್ಯಾಪಾರಿಗಳು, ನಾ ಅಂದುಕೊಂಡ ಹಾಗೆ) ತಮ್ಮಲ್ಲೇ ನಿಯೋಗವನ್ನು ರಚಿಸಿಕೊಂಡು ಒಂದು ಪಕ್ಷದ ಮುಖಾಂತರ ಅಹವಾಲನ್ನು ರಾಣಿಗೆ ಕೊಡುವ ಯೋಜನೆ ರೂಪಿಸಿದ್ದರು. ಅವಳು ತನ್ನ ಕೋಣೆಯಲ್ಲಿ ಬಹಳ ವ್ಯಾಧಿಯಿಂದ ಮಲಗಿದ್ದಳು. ಎಷ್ಟೊಂದು ಅನಾರೋಗ್ಯದಿಂದ ಬಳಲುತ್ತಿದ್ದಳು ಎಂದರೆ, ನಿಲ್ಲಲು ಕೂಡ ಆಗುತ್ತಿರಲಿಲ್ಲ, ಆದರೆ ಅವಳು ಎದ್ದು, ಬಟ್ಟೆ ಹಾಕಿಕೊಂಡು ಅವರನ್ನು ಬರಮಾಡಲು ತಯಾರಾದಳು. ರಾಣಿಯನ್ನು ನೋಡಿಕೊಳ್ಳುತ್ತಿದ್ದ ಸೇವಕಿ ಚೀರುತ್ತ "ಇದು ಅಸಾಧ್ಯ. ಇದರಿಂದ ನಿಮಗೆ ಸಾವು ಖಂಡಿತ" ಎನ್ನುತ್ತಿದ್ದರೂ, ರಾಣಿಯು ನಿಧಾನವಾಗಿ ಏಳುತ್ತಲೇ ಹೇಳಿದ್ದು, "ನಾವು ಆಮೇಲೆ ಸಾಯೋಣ". ರಾಣಿಯ ಜೀವನದ ಅನುಭವಗಳ ಸರಮಾಲೆಯಲ್ಲಿ ಇದು ಒಂದು ಮುಖ್ಯ ಘಟನೆಯಾಗಿದ್ದು ಇಂತಹ ಉದಾಹರಣೆಗಳು ಇಂತಹ ಜೀವನವನ್ನು ನಡೆಸಲು ಅಂತರಾತ್ಮದ ಆಯ್ಕೆಯನ್ನೇ ಪುಷ್ಠೀಕರಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/150–51**

ಈ ಹೇಳಿಕೆ "ನಾವು ಆಮೇಲೆ ಸಾಯೋಣ" ಎನ್ನುವದು ಇದೆಯಲ್ಲವೇ? ಇದು ನನ್ನ ಸ್ವಂತ ಅನುಭವ, ಇದು ಕನಸಲ್ಲಾ" ಅದು ಒಂದು ತರಹ ಕನಸಾಗುವುದಿಲ್ಲಾ: ಇದು ಒಂದು ತರಹದ ಸ್ಥಿತಿ. ಪ್ರಜ್ಞಾಪೂರ್ವಕವಾಗಿಯೇ ಇಲ್ಲಿ ಪ್ರವೇಶಿಸುತ್ತೀರಿ. ಮತ್ತು ಈ ಮೂಲಕವೇ ನೀವು ಮುಕ್ತರಾಗುತ್ತೀರಿ.

ಈಗಲೂ ನಾನು ಆ ಚಿತ್ರವನ್ನು ನೋಡಬಲ್ಲೆ, ಅದು ಜನಗಳ ಚಿತ್ರ, ಹೌದು ಜನರು. ಏಕೈಕ ಮನಸ್ಸಿನಿಂದ ನನಗೆ ಆರೈಕೆ ಮಾಡಿದ ವ್ಯಕ್ತಿಯನ್ನೂ ಜೊತೆಗೆ ನಾನು ಎಲ್ಲವನ್ನೂ ನೋಡುತ್ತೇನೆ, ಮತ್ತು ನಾನು ಈ ವಿಷಯಕ್ಕೆ ಉತ್ತರಿಸುವದೂ ಸಹಿತ ಅತಿ ಸ್ಪಷ್ಟವಾಗಿ! ಅದಕ್ಕಾಗಿಯೇ ನಾನು ಹೇಳಿದ್ದು, "ಎಲ್ಲವೂ ಸಂಕಲ್ಪ ಮಾತ್ರದಿಂದ ನಡೆಯುತ್ತದೆ." ಹೀಗಾಗಿಯೇ, ಬಹಳ ಸರಳವಾಗಿ "ನಾವು ಆಮೇಲೆ ಸಾಯೋಣ".

**– ಶ್ರೀಮಾತೆ: ಭಕ್ತನೋರ್ವನೊಡನೆ ಸಂದರ್ಶನ, ಸಪ್ಟೆಂಬರ್ 12, 1964**

## ಆಧ್ಯಾತ್ಮಿಕ ಜೀವನ ಮತ್ತು ತೊಂದರೆಗಳು

ಪ್ರಾಮಾಣಿಕ ಅಭಿಪ್ಸೆಯಿಂದ ಆಧ್ಯಾತ್ಮ ಜೀವನಕ್ಕೆ ನೀವು ಬಂದಿದ್ದೆ ಆದರೆ ಅಹಿತಕರವಾದ ವಿಷಯಗಳು ನಿಮ್ಮ ಮೇಲೆ ಬಂದು ಎರಗುತ್ತವೆ; ನೀವು ನಿಮ್ಮ ಗೆಳೆಯರ ಹತ್ತಿರ ಜಗಳವಾಡುತ್ತೀರಿ, ನಿಮ್ಮ ಕುಟಂಬ ನಿಮ್ಮನ್ನು ಒದ್ದು ಹೊರ ಹಾಕುತ್ತಾರೆ. ನೀವು ಏನು ಸಾಧಿಸಿದರೆಂದು ಅಂದುಕೊಳ್ಳುತ್ತಿರೋ ಅದು ಕಳೆದು ಹೋಗುತ್ತದೆ.. ನನಗೆ ಪರಿಚಯವಿದ್ದವರೊಬ್ಬರು ಹೆಚ್ಚಿನ ಅಭೀಪ್ಸೆಯೊಂದಿಗೆ ಜ್ಞಾನಕ್ಕಾಗಿ ಮತ್ತು ಯೋಗಕ್ಕಾಗಿ ಕೂಡ ಬಹಳ ದಿನದ ಸಾಧನೆ ಮಾಡಿ ಭಾರತಕ್ಕೆ ಬಂದಿದ್ದರು. ಅದು ಬಹಳ ದಿನದ ಹಿಂದೆ. ಆ ಸಮಯದಲ್ಲಿ ಗಡಿಯಾರಕ್ಕೆ ಸರಪಳಿಯಂತೆ ಆಭರಣ ಹಾಕುತ್ತಿದ್ದರು. ಈ ಸಜ್ಜನನಿಗೆ ಅವನ ಅಜ್ಜಿ ಕೊಟ್ಟ ಬಂಗಾರದ ಪೆನ್ಸಿಲ್ ಜಗತ್ತಿನಲ್ಲಿನ ಅತ್ಯಂತ ಬೆಲೆ ಬಾಳುವ ವಸ್ತುವೆಂದು ಅದನ್ನು ಬಹಳ ಹಚ್ಚಿಕೊಂಡಿದ್ದನು. ಅದನ್ನು ಸರಪಳಿಗೆ ಹಾಕಿಕೊಂಡಿದ್ದನು. ಅವನು ಕೆಳಗಿನ ಯಾವುದೋ ಬಂದರಿನಲ್ಲಿ ಬಂದಿಳಿದ – ಪಾಂಡಿಚೆರಿಯಲ್ಲೊ, ಅಥವಾ ಭಾರತದ ಇನ್ನಾವುದು ಬಂದರಿನಲ್ಲೊ ಅಥವಾ ಕೊಲೊಂಬೋದಲ್ಲೆ – ನನಗನ್ನಿಸಿದ ಹಾಗೆ ಕೊಲೊಂಬೋದಲ್ಲಿ ಸಣ್ಣ ನಾವೆಯಲ್ಲಿ ಸಮುದ್ರ ತೀರಕ್ಕೆ ಹೋಗಬೇಕಾಗಿದ್ದಿತು. ಹಡಗಿನಿಂದ ನಾವೆಗೆ ಇಳಿಯುವಾಗ ಸ್ಥಿಮಿತ ಕಳೆದುಕೊಂಡನು. ಆದರೆ ಅಷ್ಟರಲ್ಲಿ ತೀವ್ರತರವಾದ ಚಲನೆಯಿಂದಾಗಿ ಬಂಗಾರದ ಪೆನ್ಸಿಲ್ ಸಮುದ್ರದಲ್ಲಿ ಬಿದ್ದು ತಳ ಸೇರಿತು. ಅವನು ಮೊದಲಿಗೆ ಬಹಳ ನೊಂದುಕೊಂಡ, ಆದರೆ ಅವನು ತನ್ನಷ್ಟಕ್ಕೆ ಅಂದುಕೊಂಡ "ಏಕೆ, ಇದು ಭಾರತದ ಪರಿಣಾಮ ನಾನು ನನ್ನ ಬಂಧದಿಂದ ಮುಕ್ತನಾದೆನು" ಬಹಳ ಪ್ರಾಮಾಣಿಕ ವ್ಯಕ್ತಿಗಳಿಗೆ ಘಟನೆಗಳು ಹೀಗೆಯೇ ರೂಪುಗೊಳ್ಳುತ್ತವೆ. ಮೂಲಭೂತವಾಗಿ ಕಷ್ಟಗಳ ಸರಮಾಲೆ ಬರುವುದೂ ಕೂಡ ಪ್ರಾಮಾಣಿಕ ವ್ಯಕ್ತಿಗಳಿಗೇ ಆಗಿದೆ. ಯಾರು ಪ್ರಾಮಾಣಿಕರಲ್ಲರೋ ಅವರಿಗೆ ವಸ್ತುಗಳು, ಘಟನೆಗಳು ವರ್ಣಗಳಿಂದ ಕೂಡಿ ಅವರನ್ನು ಮೋಸಗೊಳಿಸುತ್ತವೆ. ಮತ್ತು ಕೊನೆಗೆ ತಾವು ಏನು ತಪ್ಪು ತಿಳಿದುಕೊಂಡಿದ್ದೆವು ಎಂದು ಗೊತ್ತಾಗುತ್ತದೆ! ಆದರೆ ಯಾರಿಗಾದರು ಬಹಳ ತೊಂದರೆ ಬಂದರೆ, ಅದು ಅವನು ಪ್ರಾಮಾಣಿಕತೆಯಲ್ಲಿ ಹೆಚ್ಚಿನ ಸ್ಥರದಲ್ಲಿದ್ದಾನೆಂದು ಸಾಬೀತಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/157–58**

## ಪರಿಪೂರ್ಣ ಉಡುಗೊರೆ

ನೀವು ಏನು ಇದ್ದಿರೊ, ಅದನ್ನು ಸಮರ್ಪಿಸಿ; ನಿಮ್ಮಲ್ಲಿ ಏನು ಇದೆ ಸಮರ್ಪಿಸಿ, ಆಗ ನಿಮ್ಮ ಈ ಉಡುಗೊರೆಯು ಪರಿಪೂರ್ಣವಾಗಿರುತ್ತದೆ. ಇದು ನಿಮ್ಮಲ್ಲಿನ ಸಂಪತ್ತನ್ನು ಅವಲಂಬಿಸಿಲ್ಲ ಅಥವಾ ನಿಮ್ಮ ಸ್ವಭಾವದಲ್ಲಿನ ಸಾಮಾರ್ಥ್ಯವನ್ನೂ ಅವಲಂಬಿಸಿಲ್ಲಾ. ಇದು ನಿಮ್ಮ ಉಡುಗೊರೆಯ ಪರಿಪೂರ್ಣತೆಯನ್ನು ಅವಲಂಬಿಸಿದೆ. ಹೇಳಬೇಕೆಂದರೆ, ನಿಮ್ಮ ಉಡುಗೊರೆಯ ಸಂಪೂರ್ಣತೆಯನ್ನು, ನನಗೆ ನೆನಪಿದ್ದ ಹಾಗೆ ಭಾರತೀಯ ದಂತ ಕಥೆಯ ಗ್ರಂಥವನ್ನು ಓದಿದಾಗ ತಿಳಿದ ಕಥೆಯ ಪ್ರಕಾರ, ಒಬ್ಬಳು ಬಹಳ ಬಡ ನಿರ್ಗತಿಕ ಮುದುಕಿ ಇದ್ದಳು, ಮುರಿದುಹೋದ ಗುಡಿಸಲಿನಲ್ಲಿ ವಾಸಿಸುತ್ತಿದ್ದಳು. ಮತ್ತು ಅವಳಿಗೆ ಹಣ್ಣೊಂದನ್ನು ಕೊಟ್ಟರು ಅದು ಮಾವಿನ ಹಣ್ಣು. ಅವಳು ಅರ್ಧ ಹಣ್ಣನ್ನು ತಿಂದು ಮೂರನೇ ದಿನಕ್ಕೆ ತೆಗೆದಿಟ್ಟಿದ್ದಳು. ಏಕೆಂದರೆ ಅಂತಹ ಅದ್ಭುತವಾದ ಹಣ್ಣು ಅವಳಿಗೆ ಯಾವಾಗಲೂ ಸಿಗುತ್ತಿರಲಿಲ್ಲಾ. ಮತ್ತು ಯಾವಾಗ ರಾತ್ರಿಯಾಯಿತೊ, ಯಾರೋ ಮುರುಕು ಬಾಗಿಲನ್ನು ಬಡಿದು ಅತಿಥ್ಯಕ್ಕಾಗಿ ಕೇಳಿದರು. ಬಂದವರು ನಾನು ಬಹಳ ಹಸಿದಿದ್ದೇನೆ ಮತ್ತು ನನಗೆ ಆಸರೆ ಬೇಕೆಂದು ಅವಳಲ್ಲಿ ಕೇಳಿದಾಗ, ಅವಳು ಅವನಿಗೆ ಹೇಳಿದ್ದು, "ನನ್ನ ಹತ್ತಿರ ಗುಡಿಸಲನ್ನು ಬೆಚ್ಚಗಿಡಲು ಬೆಂಕಿಯಿಲ್ಲಾ, ನಿನಗೆ ಹೊದೆಯಲು ಕೊಡಲು ನನ್ನಲ್ಲಿ ವಸ್ತುಗಳಿಲ್ಲ ಮತ್ತು ನಾನು ಅರ್ಧ ತಿಂದುಳಿಸಿದ ಹಣ್ಣು ಮಾತ್ರ ಇದೆ ನಿನಗೆ ಬೇಕೆಂದರೆ ಕೊಡುವೆ" ಎಂದು. ಅಲ್ಲಿಗೆ ಬಂದು ಬಾಗಿಲಲ್ಲಿ ನಿಂತವನು 'ಶಿವ'. ಅದು ಅವಳಿಗೆ ತಿಳಿದ ನಂತರ, ಅವಳ ಅಂತರಂಗದಲ್ಲಿ ಆನಂದ ತುಂಬಿತು, ಅವಳು ತನ್ನನ್ನು ಮತ್ತು ತನ್ನಲ್ಲಿದ್ದ ಪರಿಪೂರ್ಣ ಉಡುಗೊರೆಯನ್ನು ಕೊಟ್ಟಿದ್ದಳು.

ಇದನ್ನು ನಾನು ಓದಿದಾಗ, ನನಗದು ಅದ್ಭುತವೆನಿಸಿತು. ಸರಿ, ಹೌದು, ಅಲ್ಲಿ ಎಲ್ಲವೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿತು. ಸರಿಯಾಗಿ ಅದನ್ನೇ ಶ್ರೀಮಂತ, ಅಥವಾ ಯಾರಿಗೆ ಜೀವನದಲ್ಲಿ ಎಲ್ಲ ಇದ್ದು ಹೆಚ್ಚಿನದನ್ನು ದೇವರಿಗೆ ಸಮರ್ಪಿಸುತ್ತಾರೋ ಅವರಿಗೆಲ್ಲವೂ ಇದು ಸಾಮಾನ್ಯವಾದ ನಟನೆ; ಕೆಲವರಿಗೆ ಅಗತ್ಯಕ್ಕಿಂತ ತುಸು ಹೆಚ್ಚಿಗೆ ಹಣವಿರುತ್ತದೆ ಕೆಲವರಿಗೆ ಅಗತ್ಯಕ್ಕಿಂತ ಹೆಚ್ಚಿನ ವಸ್ತುಗಳಿರುತ್ತವೆ. ಮತ್ತು ಹೀಗಾಗಿ ಅದನ್ನು ದೇವರಿಗೆ ಕೊಡುತ್ತಾರೆ. ಏನು ಕೊಡದಿರುವುದಕ್ಕಿಂತ ಇದು ಉತ್ತಮ ಮಾರ್ಗ. ಅದೇ ತುಸು ಹೆಚ್ಚಿಗೆ ಅಂದರೆ ಲಕ್ಷಾಂತರ ರೂಪಾಯಿಯ ಕೊಡುಗೆಯಾಗಿಯಿದ್ದರೂ. ಇದು ಅರ್ಧ ಮಾವಿನ ಹಣ್ಣಿನ ಉಡುಗೊರೆಗಿಂತ

ಕಡಿಮೆಯೆ. ಅದು ಪರಿಮಾಣ ಮತ್ತು ಉತ್ಕೃಷ್ಟತೆಯಿಂದ ಅಳೆಯಲ್ಪಡಲಾಗುವುದಿಲ್ಲಾ ಅದು ಕೊಡುವ ಪ್ರಮಾಣಿಕತೆಯಲ್ಲಿ ಮತ್ತು ಪರಿಪೂರ್ಣವಾಗಿ ಸಮರ್ಪಿಸುವದರಲ್ಲಿ ಇರುತ್ತದೆ.

ನಾನು ಹೇಳಿದ ಕಥೆಯ ಸೌಂದರ್ಯ ಏನೆಂದರೆ, ಇದನ್ನು ಇತರೆ ಎಲ್ಲರೂ ಮೆಚ್ಚಿಕೊಳ್ಳುವರು ಇದು ಹೇಗೆ – ಆ ಮುದುಕಿಯು ಹಣ್ಣು ಕೊಟ್ಟಾಗ ಅದನ್ನು ಸ್ವೀಕರಿಸಲು ಬಂದವನು ಶಿವ ಎಂದು ಅವಳಿಗೆ ಗೊತ್ತಿರಲಿಲ್ಲಾ. ಅಲ್ಲಿಗೆ ಬಂದ ದಾರಿಹೋಕ ಭಿಕ್ಷುಕನಿಗೆ ಅವಳು ಕೊಟ್ಟಿದ್ದಳು. ಒಳ್ಳೆಯದನ್ನು ಮಾಡಿದೆನೆಂಬ ಸಂತೋಷಕ್ಕಾಗಿ, ಸಮರ್ಪಣೆಗಾಗಿ, ಅವಳಿಗೆ ತೃಪ್ತಿ ಇತ್ತು. ಆದರೆ ಅವನು ದೇವರೆಂಬ ಕಾರಣಕ್ಕಾಗಿ ಮಾತ್ರ ಅಲ್ಲ. ಜೊತೆಗೆ ಮುಕ್ತಿ ದೊರೆಯಬಹುದೆಂಬ ಆಸೆಗಾಗಿಯೂ ಕೊಡಲ್ಪಟ್ಟಿಲ್ಲ. ಅದೂ ಅಲ್ಲದೇ ಕೊಟ್ಟದ್ದರ ಫಲವಾಗಿ ಯಾವುದೇ ಜ್ಞಾನವನ್ನು ಪಡೆಯುವುದಕ್ಕೂ ಅಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/15**

## ಸ್ವಾತಂತ್ರ್ಯ ಮತ್ತು ಪ್ರೀತಿ

ಸ್ವಾತಂತ್ರ್ಯ! ಓರ್ವ ವಯಸ್ಸಾದ ರಹಸ್ಯವಾದಿ ಸಾಧುವು ಯಾರೋ ಪ್ರಶ್ನೆ ಕೇಳಿದಾಗ ಅವರು ಕೊಟ್ಟ ಸುಂದರವಾದ ಉತ್ತರ ನನಗೆ ನೆನಪಿಗೆ ಬರುತ್ತಿದೆ, "ನಾನು ಮುಕ್ತನಾಗಿ ಇರಬಯಸುತ್ತೇನೆ! ನಾನು ಮುಕ್ತನಾದ ಜೀವಿ, ನಾನು ಯಾವಾಗ ಮುಕ್ತನಾಗಿರುತ್ತೇನೆಯೋ ಆಗ ಮಾತ್ರ ನನ್ನ ಇರುವಿಕೆಯಿರುತ್ತದೆ," ಜೊತೆಗೆ ಅವನು ನಗುವಿನೊಂದಿಗೆ ಉತ್ತರಿಸುತ್ತ "ಅಂದರೆ ನಿನ್ನನ್ನು ಯಾರು ಪ್ರೀತಿ ಮಾಡುವುದಿಲ್ಲ, ಯಾರಾದರೂ ಪ್ರೀತಿ ಮಾಡಿದರೆ, ನೀನು ಆ ಪ್ರೀತಿಯ ಮೇಲೆ ತತ್‌ಕ್ಷಣ ಪರಾಧೀನನಾಗುತ್ತೀಯ" ಅದು ಬಹು ಸುಂದರವಾದ ಉತ್ತರ, ಪ್ರೀತಿಯು ಏಕತ್ವದ ಸಂಕೇತ. ಏಕತ್ವವೇ ನಿಜವಾದ ಸ್ವಾತಂತ್ರ್ಯದ ಅಭಿವ್ಯಕ್ತಿ ಮತ್ತು ಯಾರು ತಮ್ಮ ಬಿಡುಗಡೆಯ ಹಕ್ಕಿಗಾಗಿ ಸ್ವಾತಂತ್ರ್ಯ ಬಯಸುವರೋ ಅವರು ನಿಜವಾದ ಬಿಡುಗಡೆಗೆ ಬೆನ್ನು ಹಾಕುವರು ಅಂದರೆ ಅವರು ಪ್ರೀತಿಯಲ್ಲಿ ಅಲ್ಲಗಳೆಯುತ್ತಾರೆ.

ವಿಕೃತಿಯು ನಿರ್ಬಂಧದಿಂದಾಗಿ ಬರುತ್ತದೆ, ಯಾರೂ ಒತ್ತಾಯಪೂರ್ವಕವಾಗಿ ಪ್ರೀತಿ ಮಾಡಲಾರರು, ನಿಮ್ಮನ್ನು ಪ್ರೀತಿ ಮಾಡಲು ಒತ್ತಾಯಿಸಲಾಗುವುದಿಲ್ಲ ಅದು ಪ್ರೀತಿಯೇ ಅಲ್ಲಾ. ಆದ ಕಾರಣ ಒತ್ತಾಯ ಹಸ್ತಕ್ಷೇಪ ಮಾಡಿದಾಗ, ಅದು

ಅಸತ್ಯವಾಗುತ್ತದೆ. ಅಂತರಂಗದ ಎಲ್ಲಾ ಕ್ರಿಯೆಗಳು ಸ್ವಾಭಾವಿಕವಾಗಿರಬೇಕು. ಆ ಸ್ವಾಭಾವಿಕತನದಿಂದ ಬಂದ ಒಳ ಸಾಮರಸ್ಯ, ತಿಳುವಳಿಕೆ – ಸ್ವಪ್ರೇರಿತ ಆತ್ಮ ಸಮರ್ಪಣೆ, ಆಳವಾದ ಸತ್ಯದೆಡೆಗೆ ತಿರುಗುವುದು. ಏಕೆಂದರೆ ಇದೇ ನಿಜವಾದ ಅಸ್ತಿತ್ವ, ಅದರ ಮೂಲ ಮತ್ತು ಅದರ ಧ್ಯೇಯವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/51–52**

**ಭಯವನ್ನು ಗೆಲ್ಲಲೇಬೇಕು**

ನೀವು ಯಾವುದಕ್ಕೂ ಹೆದರಬಾರದು. ಇದು ಪರಿವರ್ತನೆಯ ಮೊದಲ ಪಾಠ. ಅದಕ್ಕಾಗಿ ಎಲ್ಲರು ಭಯವನ್ನು ಗೆಲ್ಲಲೇಬೇಕು.

ನೀವು ಯಾವಾಗ ಹೆದರುತ್ತಿರೋ, ಆಗ ದೇವರಲ್ಲಿ ಆಶ್ರಯ ಪಡೆಯಬೇಕು ಮತ್ತು ಎಲ್ಲದರಲ್ಲಿಯೂ ದೇವರಿದ್ದಾನೆ ಎಂದು ಭಾವಿಸಬೇಕು. ಎಲ್ಲಾ ವಸ್ತುಗಳು ಸುಮ್ಮನೆ ಆಕರ್ಷಕವಾಗಿವೆ ಮತ್ತು ಅದ್ಭುತವಾಗಿವೆ. ಏಕೆಂದರೆ, ಸತ್ಯವಾಗಿಯೂ ಎಲ್ಲವೂ ದೇವರೆ, ಯಾವುದಕ್ಕೂ ಭಯಪಡಬೇಕಿಲ್ಲಾ.

ಒಂದು ಸಲ ರಾಮಕೃಷ್ಣರು ದೊಡ್ಡ ಗಿಡದ ಕೆಳಗೆ ಕುಳಿತು ಧ್ಯಾನಾಸಕ್ತರಾಗಿದ್ದರು. ಒಂದು ದೊಡ್ಡ ನಾಗರಹಾವು ಬಂದು ಅವರ ಮುಂಗೈಗೆ ಕಡಿಯಿತು. ರಾಮಕೃಷ್ಣರು ಎಚ್ಚರಗೊಂಡು ಮುಂಗೈನ್ನು ಉಜ್ಜಿಕೊಂಡರು. ಮತ್ತು ನಾಗರಹಾವಿಗೆ ಕೇಳಿದರು "ಓಹ್ ಕಾಳಿಮಾತೆ, ನನ್ನನ್ನು ಏಕೆ ಕಚ್ಚಿದೆ" ತಕ್ಷಣವೇ ರಾಮಕೃಷ್ಣರಿಗೆ ಆ ಹಾವು ಕಚ್ಚಿದ್ದರಿಂದಾದ ವೇದನೆಯು ನಿವಾರಣೆಯಾಯಿತು.

ನೀವು ಯಾವುದಕ್ಕೂ ಭಯಪಡಬೇಡಿ.

**ಶ್ರೀಮಾತೆ ನೀವು ಹೇಳಿದಂತೆ: 16.7.56**

**ಒಬ್ಬ ತಾಯಿಯ ತಾಳ್ಮೆ**

ನನ್ನಲ್ಲೊಂದು ಬೆಕ್ಕು ಇತ್ತು. ಅದು ಮೊದಲ ಬಾರಿಗೆ ಮರಿ ಹಾಕಿದಾಗ ಅಲ್ಲಿಂದ ಕದಲಲೇ ಇಲ್ಲಾ. ಏನೂ ತಿನ್ನಲಿಲ್ಲಾ. ಅದು ಪ್ರಕೃತಿಯ ಕರೆಗೆ ಓಗೊಡಲಿಲ್ಲಾ. ಅದು ಅಲ್ಲಿ ಉಳಿದು ತನ್ನ ಮರಿಗೇ ಅಂಟಿಕೊಂಡಿತ್ತು. ಅವುಗಳನ್ನು ರಕ್ಷಿಸುತ್ತಾ, ಹಾಲುಣಿಸುತ್ತಿತ್ತು, ಅವುಗಳಿಗೆ ಏನೋ ಆಗಿಬಿಡಬಹುದೆಂದು ಬಹಳ

ಭಯಭೀತವಾಗಿತ್ತು. ಆದರೆ ಅದು ಆಲೋಚನೆಯಿಲ್ಲದೆ, ಸ್ವಾಭಾವಿಕವಾಗಿತ್ತು. ಅದು ಅಲ್ಲಿಂದ ಕದಲಲು ನಿರಾಕರಿಸುತ್ತಿತ್ತು, ತನ್ನ ಮರಿಗಳಿಗೆ ಏನೋ ಹಾನಿಯಾಗಬಹುದೆಂದು ಹೆದರಿತ್ತು – ಸುಮ್ಮನೆ ಸಹಜ ಪ್ರವೃತ್ತಿಯಿಂದಾಗಿ, ಮತ್ತು ಆಮೇಲೆ ಅವು ಯಾವಾಗ ದೊಡ್ಡವಾದವೋ, ಅವುಗಳಿಗೆ ಕಲಿಸಲು ಕಷ್ಟಪಟ್ಟಿತು. ಅದು ಅದ್ಭುತವಾಗಿ ಮತ್ತು ಏನು ತಾಳ್ಮೆ! ಗೋಡೆಯಿಂದ ಗೋಡೆಗೆ ಹಾರುವುದನ್ನು ಹೇಗೆ ಕಲಿಸಿತು, ಆಹಾರವನ್ನು ಹೇಗೆ ಹಿಡಿಯಬೇಕು, ಹೇಗೆ ಬಹಳ ಜಾಗರೂಕತೆಯಿಂದ, ಬೇಕೆಂದರೆ ಒಂದು ಸಲ, ಹತ್ತು ಸಲ, ನೂರು ಸಲ, ಮರುಯತ್ನ ಮಾಡಿಸುತ್ತಲೇ ಕಲಿಸುತ್ತಿತ್ತು. ಆ ಮರಿಗಳು ಸಂಪೂರ್ಣವಾಗಿ ತಾನು ಬಯಸಿದ್ದು ಕಲಿಯುವರೆಗೆ ಈ ತಾಯಿ ಬೆಕ್ಕು ಸುಸ್ತಾಗಲಿಲ್ಲ, ಅದೊಂದು ಅಸಾಧಾರಣ ಕಲಿಸುವಿಕೆಯಾಗಿತ್ತು. ಮನೆಯ ಅಂಚಿನ ಮೇಲೆ ಬೀಳದ ಹಾಗೆ ಹೇಗೆ ನಡೆಯಬೇಕೆಂದು ಕಲಿಸಿತು. ಗೋಡೆಯಿಂದ ಗೋಡೆಗೆ, ಮಧ್ಯದಲ್ಲಿ ದೊಡ್ಡ ಕಂದಕವಿದ್ದಾಗ ಹೇಗೆ ದಾಟಬೇಕೆಂದು ಕಲಿಸಿತು. ಸಣ್ಣ ಮರಿಗಳು ಅಂತರವನ್ನು ನೋಡಿ ಎಗರಲು ಅಂಜುತ್ತಿದ್ದವು (ಅಂತರ ಬಹಳ ದೊಡ್ಡದಿರಲಿಲ್ಲಾ ಆದರೆ ಅವು ಧೈರ್ಯ ಮಾಡುತ್ತಿರಲಿಲ್ಲ). ಆಗ ತಾಯಿ ಆ ಕಡೆಗೆ ಹಾರಿ ಹೋಗಿ, ತಾನಿದ್ದ ಕಡೆಗೆ ಅವುಗಳನ್ನು ಕರೆಯಿತು; ಬನ್ನಿ ಬನ್ನಿ, ಹೀಗೆ ಬನ್ನಿ, ಆದರೂ ಮರಿಗಳು ಕದಲುತ್ತಿದ್ದಿಲ್ಲಾ, ಅವು ಕಂಪಿಸುತ್ತಿದ್ದವು ಅದು ಮತ್ತೆ ವಾಪಾಸ್ ಹಾರಿಬಂದು ಅವುಗಳಿಗೆ ಹೇಳಿತು, ಪಂಜಾದಿಂದ ಸಣ್ಣ ಹೊಡೆತ ಕೊಟ್ಟು ಮತ್ತೆ ಅವುಗಳನ್ನು ನೇವರಿಸಿತು. ಆದರೂ ಅವುಗಳು ಕದಲಲಿಲ್ಲಾ, ಅದು ಹಾರಿತು, ನಾನು ನೋಡಿದ ಹಾಗೆ ಅದು ಬಂದು ಅರ್ಧಗಂಟೆಯವರೆಗೆ ಹೀಗೆ ಮಾಡಿತು. ಆದರೆ ಅರ್ಧಘಂಟೆ ಸಮಯದೊಳಗಾಗಿ ಅವು ಸಾಕಷ್ಟು ಕಲಿತಿದ್ದವು ಅವುಗಳಲ್ಲಿ ಅದು ತಿಳಿದ ಹಾಗೆ ಯಾವುದು ಹೆಚ್ಚು ತಯಾರಾಗಿದೆ ಅಂದುಕೊಂಡಿತ್ತೋ, ಹೆಚ್ಚು ಸಾಮರ್ಥ್ಯವುಳ್ಳದ್ದು ಆಗಿತ್ತೋ ಅದಕ್ಕೆ ತನ್ನ ತಲೆಯಿಂದ ಜೋರಾಗಿ ಗುದ್ದಿತು. ಆ ಸಣ್ಣ ಮರಿ ತತ್‌ಕ್ಷಣ ಹಾರಿತು ಒಂದು ಸಲ ಹಾರಿದ ಮೇಲೆ, ಮೇಲಿಂದ ಮೇಲೆ ಹಾರಿತು. ಮತ್ತೆ,.. ಮತ್ತೆ....

ಕೆಲವು ತಾಯಂದಿರಿಗೆ ಈ ರೀತಿಯ ತಾಳ್ಮೆ ಇರುತ್ತದೆ. ಅದು ಹೇಗೆ, ನನ್ನ ಮಕ್ಕಳೇ, ಇದಿಷ್ಟು? ಹೆಚ್ಚೇನು ಇಲ್ಲ! ಶುಭರಾತ್ರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/242–43** **– ಶ್ರೀಮಾತೆ**

# ಒಳನೋಟಗಳು

– ಅನುವಾದ: ಡಾ॥ ಬಿ.ಆರ್. ಭೀಡ

## ಪ್ರಬಲ ಪ್ರಾಣಿಕದ ಲಕ್ಷಣಗಳು

ನೀವು ಬಾಹ್ಯತಃ ದುರ್ಬಲರಾಗಿದ್ದರೆ, ಅಂದರೆ ನಿಮ್ಮ ಪ್ರಾಣಿಕವು ದುರ್ಬಲವಾಗಿದ್ದರೆ, ನೀವು ಸದಾ ಗುಡುಗು, ಹೊಡೆದಾಟ, ಕೋಪದ ಸಂಗತಿಗಳನ್ನು ಇಷ್ಟಪಡುತ್ತೀರಿ – ಬದಲಾಗಿ, ನಿಮಗೆ ಪ್ರಬಲವಾದ ಪ್ರಾಣಿಕವಿದ್ದರೆ, ಮಾಧುರ್ಯವನ್ನು, ಮಾರ್ದವತೆಯನ್ನು ಇಷ್ಟಪಡುತ್ತೀರಿ – ಈ ಎರಡರ ನಡುವೆ ಸಮತೋಲನ ಕಾಯ್ದುಕೊಳ್ಳಲು ಈ ಎರಡೂ ವಿರುದ್ಧ ದಿಶೆಯ ಚಲನೆಗಳು ಅವಶ್ಯವಾಗಬೇಕು. ಪೂರ್ಣತಃ ಪರಿಪೂರ್ಣರಾಗಲು ಸಾಕಷ್ಟು ಸಮಯ ತಗಲುವದು.

ನಿಮಗೇ ಗೊತ್ತಿರುವಂತೆ, ಒಬ್ಬರ ಸ್ವಭಾವದಲ್ಲಿ ಕೂಡಾ ವಿರುದ್ದ ಚಲನೆಗಳಿರುತ್ತವೆ – ಉದಾ: ಒಂದು ಸಲ ಫ್ರಾನ್ಸದಲ್ಲಿ ರಾಜನು (ಬಹುಶಃ ಲೂಯಿಸ್ 11) ತುಂಬ ಕ್ರೂರಿಯಾಗಿದ್ದ, ತುಸುವಾದರೂ ದಯೆ ಇರಲಿಲ್ಲ. ಆದರೆ ತನ್ನ ಬೆಕ್ಕಿನ ಮರಿಯನ್ನು ಮಾತ್ರ ತನ್ನ ಪಾಣಕ್ಕಿಂತ ಹೆಚ್ಚು ಪ್ರೀತಿಸುತ್ತಿದ್ದನು. ಅನೇಕ ಜನರನ್ನು ಕೊಲ್ಲಲು, ಅವರ ರಕ್ತ ಹರಿಸಲು ಅವನು ಎಂದಿಗೂ ಹಿಂದೆ ಮುಂದೆ ನೋಡಲಿಲ್ಲವಾದರೂ ತನ್ನ ಬೆಕ್ಕಿನ ಮರಿಗೆ ಏನೇ ಆದರೂ ಸಾಕು ಕಣ್ಣೀರು ಸುರಿಸಲಾರಂಬಿಸುತ್ತಿದ್ದನು.

**ಶ್ರೀಮಾತೆ ನೀವು ಹೇಳಿದಂತೆ: 11.10.57**

## ಬೆಕ್ಕಿನ ಮರಿ ಮತ್ತು ಚೇಳು

ಬೆಕ್ಕೊಂದು ತನ್ನ ಮರಿಯನ್ನು ಬಾಯಿಯಲ್ಲಿ ಹಿಡಿದುಕೊಂಡು ಹೊರಟಿತ್ತು, ಮರಿ ಟಣ್ಣನೆ ಹಾರಿ ಸನಿಹದಲ್ಲಿದ್ದ ಚೇಳಿನೊಂದಿಗೆ ಆಟವಾಡಲು ಹೋಯಿತು. ಆದರೆ ತಾಯಿಗೆ, ಆ ಚೇಳಿನಂಥ ಕೆಟ್ಟ ಹುಳುವಿನ ಜೊತೆ ಮರಿ ಆಟವಾಡುವುದು ಇಷ್ಟವಿರಲಿಲ್ಲ. ಆದರೆ ಮರಿ ಕೇಳಲಿಲ್ಲ. ಚೇಳು ತನ್ನ ಸ್ವಭಾವದಂತೆ ಬೆಕ್ಕಿನ ಮರಿಯನ್ನು ಕೊಂಡಿಯಿಂದ ಕುಟುಕಿತು, ಮರಿ ಚೀರಾಡಿ, ಅತ್ತು ಹಾರಾಡಿತು. ತಾಯಿ ಬೆಕ್ಕು "ಆದು ಸರಿ, ಆದರೆ ನೀನೇಕೆ ನನ್ನ ಬಾಯಿಯಿಂದ ಜಿಗಿದು ಅತ್ತ ಹೋದಿ?" ಎಂದು ಕೇಳಿತು –

ವಿರೋಧಿ ಶಕ್ತಿಗಳು ಈ ಚೇಳಿನಂತೆಯೇ ಇರುತ್ತವೆ – ನಿಜವಾಗಿ ಅವು ತುಂಬ ದುಷ್ಟ – ನೀವು ಅವುಗಳ ಕಡೆಗೆ ದೃಷ್ಟಿ ಹರಿಸದಿದ್ದರೆ, ಅವುಗಳ ಕರೆಗೆ ಓಗೊಡದೇ ಹೋದರೆ, ಅವು ತಾನಾಗಿ ನಾಶವಾಗಿ ಹೋಗುತ್ತವೆ. ತಮ್ಮೆದುರು ಇಂಥ ವಿರೋಧಿ ಶಕ್ತಿಗಳು ತಪ್ಪು ಸಲಹೆಗಳನ್ನು ಇಟ್ಟಾಗ ಜನರು ನಿರ್ದಾಕ್ಷಿಣ್ಯವಾಗಿ ಅವುಗಳನ್ನು ತಿರಸ್ಕರಿಸಿಬಿಡಬೇಕು. ಇಲ್ಲವಾದರೆ ಆ ಶಕ್ತಿಗಳು ಎಲ್ಲವನ್ನು ಹಾಳುಮಾಡಿ ಬಿಡುತ್ತವೆ.

ವಿರೋಧಿ ಶಕ್ತಿಗಳು ಜನರ ತಲೆಯಲ್ಲಿ ಹೇಗೆ ಪ್ರವೇಶ ಪಡಿಯುತ್ತವೆ ಎಂಬುದನ್ನು ನಾನು ಬಲ್ಲೆ – ಸಿಟ್ಟು, ದ್ವೇಷ, ಮತ್ತು ಇಂಥ ಅಗಣಿತ ಆಸೆಗಳು ಹಾಗೂ ಅಪ್ರಯೋಜಕ ಸಂಗತಿಗಳ ಮೂಲಕ ಒಳ ಪ್ರವೇಶಿಸುತ್ತವೆ.

ಮೊದಲು, ಸಿಟ್ಟು ಕಾಲುಗಳನ್ನು ಹಿಡಿಯುತ್ತದೆ, ನಿಧಾನವಾಗಿ ಮೇಲೇರುತ್ತ ಹೋಗುತ್ತದೆ, ಹೊಕ್ಕುಳಿನವರೆಗೆ, ಅಲ್ಲಿಂದ ಹೃದಯ ಅಲ್ಲಿಂದ ಮುಂದೆ ಮಿದುಳಿಗೆ ಹೋಗಿ ಸೇರುತ್ತದೆ –

ಅದು ಜನರನ್ನು ತುಂಬಾ ಹಿಂಸಿಸುತ್ತದೆ, ಒಮ್ಮೆ ಸಿಟ್ಟು ಮಿದುಳಿನೊಳಗೆ ಪ್ರವೇಶಿಸಿತೆಂದರೆ, ತನ್ನನ್ನು ತಾನು ನಿಗ್ರಹಿಸಿಕೊಳ್ಳುವುದು ಕಠಿಣವಾಗುತ್ತದೆ. ಅಂತೆಯೇ ನಾವು ಅದು ಬರುವ ಮೊದಲೆ ತಡೆಯಬೇಕು, ಆಗ ಸುಲಭವಾಗುವುದು, ಅದನ್ನು ಮೀರಲು ಸಾಧ್ಯವಾಗುವುದು.

**ಶ್ರೀಮಾತೆ ನೀವು ಹೇಳಿದಂತೆ: 5.6.56**

## ಪ್ರಚಾರ ಪ್ರಿಯ ವ್ಯಕ್ತಿತ್ವ

ನೀವು ಆಲೋಚಿಸುವಂತೆಯೇ ಜನರೂ ಆಲೋಚಿಸಬೇಕು, ನೀವು ಮಾಡುವಂತೆಯೇ ಎಲ್ಲರೂ ಮಾಡಬೇಕು ಎಂದು ಆಗ್ರಹ ಪಡಿಸುವ ಸ್ವಭಾವ ತುಂಬ ವಿಚಿತ್ರವೆಂದು ನನಗನಿಸುತ್ತದೆ. ಇದನ್ನು ನಾನು "ಪ್ರಚಾರ ಪ್ರಿಯ ವ್ಯಕ್ತಿತ್ವ" ಎಂದು ಕರೆಯುತ್ತೇನೆ. ಇದು ಬಹು ದೂರದವರೆಗೂ ಹೋಗುವಂಥದು. ನೀವು ಮುಂದೆ ಹೋಗಿ ನೀವು ಮಾಡುವುದನ್ನೇ ಎಲ್ಲರೂ ಮಾಡಬೇಕು, ನಿಮಗೇನನಿಸುತ್ತದೆಯೋ ಅದೇ ಎಲ್ಲರಿಗೂ ಅನಿಸಬೇಕು, ಎಂದು ನೀವು ಆಗ್ರಹ–ಪಡಲಾರಂಭಿಸುತ್ತೀರಿ. ಆಗ ಎಲ್ಲವೂ ಭಯಾನಕವಾದ ಏಕತಾನತೆಯಾಗುತ್ತದೆ –

ಜಪಾನಿನಲ್ಲಿರುವಾಗ ನಾನು ಟಾಲಸ್ಟೈನನ ಮಗನನ್ನು ಭೇಟಿಯಾಗಿದ್ದೆ, ಅವನು ಮನುಕುಲದ ಒಳಿತಿಗಾಗಿ ಏಕತೆ ಎಂಬ ಮಂತ್ರದೊಂದಿಗೆ ಜಗತ್ತೆಲ್ಲಾ

ಸುತ್ತುತ್ತಿದ್ದನು. ಅವನ ಪರಿಹಾರ ತುಂಬಾ ಸುಲಭವಿದ್ದಿತು. ಎಲ್ಲ ಜನರು ಒಂದೇ ಭಾಷೆ ಮಾತನಾಡಬೇಕು, ಎಲ್ಲರೂ ಒಂದೇ ರೀತಿಯ ಜೀವನ ಮಾಡಬೇಕು, ಒಂದೇ ರೀತಿ ವೇಷ–ಭೂಷಣ ತೊಡಬೇಕು, ಒಂದೇ ರೀತಿಯ ಆಹಾರ... ನಾನು ವಿನೋದಕ್ಕಾಗಿ ಹೇಳುತ್ತಿಲ್ಲ, ನಿಜವಾಗಿ ಇದೇ ಶಬ್ದಗಳನ್ನು ಅವನು ಹೇಳುತ್ತಿದ್ದನು. ನಾನು ಅವನನ್ನು ಟೋಕಿಯಾದಲ್ಲಿ ಭೇಟಿಯಾದೆ, ಅವನು ಹೀಗೆಯೇ ಹೇಳಿದ್ದ, ಎಲ್ಲರೂ ಆರಾಮವಾಗಿರುತ್ತಾರೆ, ಸಂತೋಷವಾಗಿರುತ್ತಾರೆ ಒಬ್ಬರನ್ನು ಒಬ್ಬರು ಪರಸ್ಪರ ತಿಳಿದುಕೊಳ್ಳುತ್ತಾರೆ, ಎಲ್ಲರೂ ಒಂದೇ ತೆರನಾಗಿ ಬದುಕಿದರೆ ಹೊಡೆದಾಟಕ್ಕೆ ಅವಕಾಶವೇ ಇಲ್ಲ, ಯಾರೂ ಜಗಳವಾಡುವ ಪ್ರಶ್ನೆಯೇ ಇಲ್ಲ! ಆದರೆ, ಈ ವಾದವು ಸಯುಕ್ತಿಕವಲ್ಲವೆಂದು ಅವನಿಗೆ ಮನದಟ್ಟು ಮಾಡಿಕೊಡುವುದು ಸಾಧ್ಯವೇ ಇರಲಿಲ್ಲ. ಇದಕ್ಕಾಗಿಯೇ ಅವನು ಜಗವನ್ನೆಲ್ಲ ಸುತ್ತಾಡಲು ಹೊರಟಿದ್ದ. ಅವನ ಹೆಸರೇನೆಂದು ಜನರು ಕೇಳಿದಾಗ ಆತ ಟಾಲ್‌ಸ್ಟಾಯ್ ಎಂದು ಉತ್ತರಿಸುತ್ತಿದ್ದ – "ಓಹ್"!! ಎಂದು ಜನರು ಉದ್ಗರಿಸುತ್ತಿದ್ದರು, ಅನೇಕರಿಗೆ ಟಾಲಸ್ಟಾಯ್ ಮರಣಿಸಿರುವುದು ಗೊತ್ತಿರಲಿಲ್ಲ, ಅಂಥವರು "ಓಹ್" ನಾವು ಇಂಥ ವಿಶೇಷವಾದುದನ್ನು ಕೇಳುತ್ತಿದ್ದೇವಲ್ಲ!" ಎಂದು ಭಾವಿಸುತ್ತಿದ್ದರು, ಅವನು ಹಾಗೆಯೇ ಮುನ್ನಡೆದ ಕೂಡ. ಇದು ನಾನೀಗ ಹೇಳಿದೆನಲ್ಲ, ಅದು ಕೂಡ ಇದೇ ಮನೋವೃತ್ತಿಯೇ ಅತಿಶಯೋಕ್ತಿ!

ಇರಲಿ, ನಾನು ನಿಮ್ಮೆಲ್ಲರಿಗೊಂದು ಭರವಸೆ ನೀಡುತ್ತೇನೆ, ತಮಗನಿಸಿದ, ತಾವು ಆಲೋಚಿಸುವುದರ ಸತ್ಯವನ್ನು ಇನ್ನೊಬ್ಬರಿಗೆ ತಿಳಿಸಿಕೊಡಬೇಕಾದ ಅವಶ್ಯಕತೆ ಇದೆ ಎಂದು ಅನಿಸುವ ದಿನಗಳೇ ದೂರಾಗಿ ಹೋಗುವುವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/105–06**

## ಮಹತ್ವಾಕಾಂಕ್ಷೆಯನ್ನು ಪೋಷಿಸುತ್ತ ವಿನಾಶ ತರುವ ಪ್ರಾಣಿಕ ಸತ್ತೆಗಳು

ನನಗೊಬ್ಬ ಮನುಷ್ಯನ ಕಥೆಗೊತ್ತು, ಅವನು ಕೆಲ ಶಕ್ತಿಗಳನ್ನು ಸಿದ್ಧಿಸಿಕೊಂಡಿದ್ದ, ಅವನು ಅದನ್ನೇ 'ಆಧ್ಯಾತ್ಮಿಕ'ವೆಂದು ತಿಳಿದುಕೊಂಡಿದ್ದ ಎಲ್ಲ ರೀತಿಯ ಅಭ್ಯಾಸಗಳಲ್ಲೂ ತೊಡಗಿದ್ದ, ಅವುಗಳನ್ನೇ ಮೇಲಿಂದ ಮೇಲೆ ಅಭ್ಯಾಸ ಮಾಡುತ್ತ "ಆತ್ಮ" ಎಂದು ಭಾವಿಸಿದ್ದ ಪ್ರಾಣಿಕ ಸತ್ತೆಯ ಪ್ರಜ್ಞಾಯುಕ್ತ ಸಂಪರ್ಕದಲ್ಲಿ ಬಂದಿದ್ದ. ಅವನಿಗೊಂದು ವ್ಯವಹಾರವೂ ಇತ್ತು. ಅವನು ಸಾಲವಾಗಿ ಬಡ್ಡಿಯನ್ನು ತೆಗೆದುಕೊಂಡು ಹಣ ನೀಡುತ್ತಿದ್ದ, ಅವನಲ್ಲಿ ಆರ್ಥಿಕ

ಮುನ್ನಾಲೋಚನೆ ಶಕ್ತಿ ಇತ್ತು. ತನ್ನ ಪ್ರಾಣಿಕ ಸತ್ತೆಯ ಜೊತೆಗೆ ಅವನಿಗಿದ್ದ ಸಂಬಂಧ ತುಂಬ ಲೌಕಿಕವಾಗಿತ್ತು. ಆ ಜೀವಿಯು ಅವನಿಗೆ ಯಾವಾಗ ಯಾವ ಸ್ಟಾಕ್ ಮತ್ತು ಶೇರ್ ಹೆಚ್ಚಾಗುವುವು, ಯಾವಾಗ ಕಡಿಮೆಯಾಗುವುವು ಎಂಬುದನ್ನು ಮುಂದಾಗಿ ತಿಳಿಸುತ್ತಿತ್ತು. "ಇದನ್ನು ಮಾರು, ಅದನ್ನು ಕೊಳ್ಳು" ಎಂದು ಹೇಳುತ್ತ ಅತಿ ಕರಾರುವಕ್ಕಾದ ಆರ್ಥಿಕ ಮಾಹಿತಿ ಹಾಗೂ ಸಲಹೆ ನೀಡುತ್ತಿತ್ತು. ಅನೇಕ ವರ್ಷಗಳವರೆಗೆ ಅವನು ಆದರ ಸಲಹೆಯನ್ನು ಪಾಲಿಸುತ್ತಿದ್ದ, ಹೀಗಾಗಿ ಆರ್ಥಿಕವಾಗಿ ತುಂಬ ಯಶಸ್ಸು ಸಂಪಾದಿಸಿದ್ದ. ಅವನು ಅತಿ ಶ್ರೀಮಂತನಾಗಿದ್ದ, ಹಾಗೂ ಆ ಜೀವಿಯ ಬಗ್ಗೆ ಆತ ಅತಿ ಸಹಜವಾಗಿ ಕೊಚ್ಚಿಕೊಳ್ಳುತ್ತಿದ್ದ. ಎಲ್ಲರಿಗೂ ಆತ ಇಂಥ ಸತ್ತೆಗಳ ಜೊತೆ ಸಂಪರ್ಕ ಇಟ್ಟುಕೊಳ್ಳುವುದು ನಿಜವಾಗಿಯೂ ತುಂಬ ಯೋಗ್ಯ ಎಂದು ಹೇಳುತ್ತಿದ್ದ. ಆದರೆ ಒಂದು ದಿನ ಆತನಿಗಿಂತ ತುಸು ಜಾಣನಾದ ವ್ಯಕ್ತಿಯ ಜೊತೆ ಅವನ ಪರಿಚಯವಾಯಿತು, ಅವನು ಹೇಳಿದ "ತುಸು ಎಚ್ಚರಿಕೆಯಿಂದ ಇರು". ಆದರೆ ಅವನೇನೂ ತನ್ನ ಗೆಳೆಯನ ಮಾತಿಗೆ ಕಿವಿಗೊಡಲಿಲ್ಲ. ತನ್ನ ಶಕ್ತಿ, ಅಧಿಕಾರ, ವಹಾತ್ವಾಕಾಂಕ್ಷೆಗಳಿಂದ ಆತ ಬೀಗಿ ಹೋಗಿದ್ದ. ಅವನು ನಂಬಿಕೊಂಡಿದ್ದ 'ಸತ್ತೆ' ಅವನಿಗೆ ಕೊನೆಯ ಬಾರಿಗೆ ಸಲಹೆ ನೀಡಿತು "ನೀನೀಗ ಜಗತ್ತಿನಲ್ಲೇ ಅತ್ಯಂತ ಸಿರಿವಂತನಾಗಬಹುದು, ನಿನ್ನ ಮಹತ್ವಾಕಾಂಕ್ಷೆ ನೆರವೇರುವುದು, ನಾನು ಹೇಳಿದಂತೆ ಕೇಳಿದರೆ ಸಾಕು, ನೀನು ಹೀಗೆ ಮಾಡು, ನಿನ್ನಲ್ಲಿರುವುದೆಲ್ಲವನ್ನೂ ಈ ವ್ಯವಹಾರದಲ್ಲಿ ಹಾಕು, ನೀನು ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ವ್ಯಕ್ತಿಯಾಗುವೆ". ಅದು ಬೀಸಿದ ಬಲೆಯಲ್ಲಿ ತಾನು ಬೀಳುತ್ತಿದ್ದೇನೆಂಬುದರ ಅರಿವು ಆ ಮೂರ್ಖನಿಗೆ ಆಗಲೇ ಇಲ್ಲ, ಅನೇಕ ವರ್ಷಗಳವರೆಗೆ ಅವನು ಅದರ ಸಲಹೆಯನ್ನು ಅವನು ಪಾಲಿಸಿದ, ಯಶಸ್ವಿ ಕೂಡ ಆಗಿದ್ದ, ಅಂತೆಯೇ ಆದರ ಕೊನೆಯ ಸಲಹೆಯನ್ನೂ ಕೂಡ ಪಾಲಿಸಿದ, ಕೊನೆಗೆ ಎಲ್ಲವನ್ನೂ ಕಳೆದುಕೊಂಡ, ಒಂದು ಪೈಸೆ ಕೂಡ ಉಳಿಯಲಿಲ್ಲ.

ಇಂಥ ಕ್ಷುದ್ರ ಸತ್ತೆಗಳಿವೆಯಲ್ಲ ಅವು ತುಂಬ ಚಾಣಕ್ಷ, ನಿಮ್ಮನ್ನು ಹುಚ್ಚರನ್ನಾಗಿ ಮಾಡಿಬಿಡುತ್ತವೆ, ತಾವು ಹೇಳಿದುದನ್ನೇ ನೀವು ಕೇಳುವಂತೆ ಮಾಡಲು ಅವು ಇಂಥ ಸಣ್ಣ ಸಣ್ಣ ಪವಾಡಗಳನ್ನು ಮಾಡುತ್ತವೆ, ನಿಮ್ಮನ್ನು ಪ್ರೇರೇಪಿಸುತ್ತವೆ, ನೀವು ಬಲಿ ಬೀಳುವಿರೆಂದು ಖಾತ್ರಿಯಾದ ತಕ್ಷಣ ಅವು ಮೋಸ ಮಾಡಿಬಿಡುತ್ತವೆ, ಅಲ್ಲಿಗೆ ಮುಗಿಯಿತು, ನೀವು ಕೊನೆಯಾದ ಹಾಗೆಯೇ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/86–87**

**ದಾನ ಧರ್ಮದ ಪೇಟೆ**

ಅದೊಂದು ದಾನ ಧರ್ಮದ ಪೇಟೆ, ಅಲ್ಲಿ ಜಗತ್ತಿನ ಎಲ್ಲ ಜನರು ಬರುತ್ತಿದ್ದರು, ಬೇಡವಾದುದನ್ನು ಮಾರುತ್ತಿದ್ದರು, ಬೇಕಾದುದನ್ನು ಕೊಳ್ಳುತ್ತಿದ್ದರು. ಅಲ್ಲಿನ ವ್ಯಾಪಾರದಿಂದ ಬಂದ ಹಣವು ದಾನ ಧರ್ಮದ ಕೆಲಸಕ್ಕಾಗಿಯೇ ವಿನಿಯೋಗವಾಗುತ್ತಿತ್ತು (ಅದೊಂದು ರೀತಿಯ, ಒಳ್ಳೆಯದಕ್ಕಿಂತ ಮೋಜಿನ ವಿಷಯವಾಗಿತ್ತು, ಆದರೂ ದಾನ ಧರ್ಮದ ಕೆಲಸಕ್ಕೆ ಅದರಿಂದ ಲಾಭವಾಗುತ್ತಿತ್ತು) ಮೇಲು ದರ್ಜೆಯ ಸಮಾಜದ ಎಲ್ಲ ಸುಸಂಸ್ಕೃತರು, ಎಲ್ಲ ಸೊಗಸುಗಾರರು ಎಲ್ಲರೂ ಅಲ್ಲಿ ಸೇರುತ್ತಿದ್ದರು, ಆ ಮಾರುಕಟ್ಟೆ ತುಂಬ ಸುಂದರವಾಗಿತ್ತಾದರೂ ಮಜಬೂತಾದ ಕಟ್ಟಡ ಹೊಂದಿರಲಿಲ್ಲ, ಏಕೆಂದರೆ ಅದು ಕೇವಲ 5–6 ದಿನಗಳವರೆಗೆ ಮಾತ್ರ ನಡೆಯುತ್ತಿತ್ತು, ಮೇಲ್ಛಾವಣಿ ಟಾರ್ಪಾಲಿನ್‌ನದು, ಅದಕ್ಕೆ ಬಣ್ಣ ಬಳಿಯಲಾಗಿತ್ತು, ಅದು ನೇತಾಡುತ್ತಿತ್ತು, ಎಲ್ಲೆಡೆ ವಿದ್ಯುತ್ ಬೆಳಕು, ಎಲ್ಲ ಕೆಲಸವನ್ನು ತುಂಬ ಸಭ್ಯವಾದ ರೀತಿಯಲ್ಲಿ ಚೆನ್ನಾಗಿ ಮಾಡಲ್ಪಟ್ಟಿತ್ತು, ಆದರೆ ಅದೆಲ್ಲ ನಾಲ್ಕಾರು ದಿನ ಮಾತ್ರ ಉಳಿಯುವಂಥದು ಎಂಬ ಭಾವದಿಂದ ನಿರ್ಮಾಣವಾಗಿತ್ತು. ಒಮ್ಮೆ ಶಾರ್ಟ್–ಸರ್ಕ್ಯೂಟ್ ಆಗಿ ಎಲ್ಲೆಡೆ ಬೆಂಕಿ ಹೊತ್ತಿಕೊಂಡಿತು. ಛಾವಣಿಗೆ ಬೆಂಕಿ ಹೊತ್ತಿ, ಅದು ಜನರ ಮೇಲೆ ಒಮ್ಮೆಲೆ ಮುಗುಚಿಬಿದ್ದಿತು. ನಾನಾಗಲೇ ಹೇಳಿದಂತೆ, ಅಲ್ಲಿ ಸಮಾಜದ ಎಲ್ಲ ಗಣ್ಯ ವ್ಯಕ್ತಿಗಳೂ ಸೇರಿದ್ದರು – ಅವರಿಗೆ, ಮಾನವೀಯತೆಯ ದೃಷ್ಟಿಯಿಂದ ನೋಡಿದರೆ, ಅದು ತುಂಬ ಭಯಾನಕವಾದ ವಿನಾಶ. ಹೊರಹೋಗುವ ಬಾಗಿಲ ಬಳಿ ಇದ್ದವರು ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದರು, ಉಳಿದವರು, ಬೆಂಕಿ ತಗುಲಿ ಉರಿಯುತ್ತಿದ್ದವರು ಕೂಡ ಬಾಗಿಲ ಬಳಿ ಓಡಿ, ಅಲ್ಲಿಂದ ಪಾರಾಗಲು ಪ್ರಯತ್ನಿಸುತ್ತಿದ್ದರು. ಅದೊಂದು ನಿಜವಾದ ಗುದ್ದಾಟ, ಹೊಡೆದಾಟದ ನೂಕು ನುಗ್ಗಲು. ಅಲ್ಲಿದ್ದ ಸಭ್ಯರು, ಗಣ್ಯರು, ಸಂಭಾವಿತರು, ಅದುವರೆಗೆ ತುಂಬ ಸಭ್ಯವಾಗೆ ನಡೆದುಕೊಳ್ಳುತ್ತಿದ್ದವರು ಕೂಡ ರೌಡಿಗಳಂತೆ ಕಾದಾಟಕ್ಕಿಳಿದರು. ಅವರಲ್ಲೊಬ್ಬ ಕೌಂಟ್(ಶ್ರೀಮಂತ) ಇದ್ದ, ತುಂಬ ಪ್ರಸಿದ್ಧವಾಗಿದ್ದವನು, ಕವಿ, ತುಂಬ ಜಾಣ, ಪರಿಪೂರ್ಣ ಸಂಭಾವಿತ, ಸದಾ ತನ್ನ ಬಳಿ ಬೆಳ್ಳಿಯ ಕಟ್ಟು ಇರುವ ಬಡಿಗೆಯನ್ನು ಹೊಂದಿದ್ದ, ಅಂಥವನು ಕೂಡ ತನ್ನ ಕೋಲಿನಿಂದ ಹೆಂಗಸೊಬ್ಬಳ ತಲೆಯ ಮೇಲೆ ಹೊಡೆಯುತ್ತಿರುವುದು ನಿಜವಾಗಿ ತುಂಬ ವಿಚಿತ್ರ ಹಾಗೂ ಆಶ್ಚರ್ಯದ ದೃಶ್ಯವಾಗಿತ್ತು. ಅವನು ಅದರ ಮೂಲಕ ಮಹಿಳೆಯನ್ನು

ತಳ್ಳುವ ಪ್ರಯತ್ನ ಮಾಡುತ್ತಿದ್ದ. ನಿಜವಾಗಿ ಅದು ತುಂಬ ಸೊಗಸಾದ ದೃಶ್ಯ. ಅತಿಯಾದ ಚೆಂದದ ದೃಶ್ಯ! ಆನಂತರ ಸಮಾಜದಲ್ಲಿ ಶೋಕ ಸಮಾರಂಭ, ಬೃಹತ್ ಅಂತಿಮ ಸಂಸ್ಕಾರದ ಕ್ರಿಯೆ ಇವೆಲ್ಲ ನಡೆದವು. ಅನೇಕ ಕಥೆಗಳೂ ಹುಟ್ಟಿಕೊಂಡವು ಕೂಡ. ಆನಂತರ ಧರ್ಮ–ರೀತಿ–ರಿವಾಜು–ಸಂಪ್ರದಾಯಗಳ ಹಾಗೂ ಪ್ರಸಿದ್ಧ ವಾಗ್ಮಿಯಾಗಿದ್ದ ವ್ಯಕ್ತಿಯನ್ನು ಕರೆದು, ದುರ್ದೈವವಶಾತ್ ಮೃತರಾಗಿ ಹೋದವರ ಸಮಾಧಿಯ ಬಳಿ ಏನಾದರೂ ಹೇಳುವಂತೆ ಒತ್ತಾಯಿಸಲಾಯಿತು. ಅವನೋ ಹೀಗೆ ಹೇಳಿದ್ದ, "ನಿಮಗೆ ಸರಿಯಾದ ಶಾಸ್ತಿಯೇ ಆಗಿದೆ. ಭಗವಂತನು ವಿಧಿಸಿದ ನಿಯಮಕ್ಕನುಸಾರವಾಗಿ ನೀವು ನಡೆಯಲಿಲ್ಲ, ಅಂತೆಯೇ ಭಗವಂತನು ನಿಮ್ಮನ್ನು ಸುಟ್ಟು ನಿಮಗೆ ಯೋಗ್ಯವಾದ ಶಿಕ್ಷೆ ನೀಡಿದ!"

ಆಮೇಲೆ ಮುಂದೆ ಎಲ್ಲೇ ಏನೇ ಆಗಲಿ ಈ ಕಥೆಯನ್ನು ಹೇಳಲಾಗುತ್ತಿತ್ತು.

ಸಹಜವಾಗಿ, ಅನೇಕರು ವಿರೋಧಿಸಿದರು "ಇಂಥ ದೇವರು ನಮ್ಮಲ್ಲಿ ಇಲ್ಲ ಬಿಡಿ" ಎಂದು. ಇಂಥ ಕಲ್ಪನೆಗಳೆಲ್ಲ ನಿಜವಾಗಿ ಸಾಮಾನ್ಯ ಮಾನವ ಜನಾಂಗದ ನಿರ್ದಿಷ್ಟ ತತ್ವಗಳಾಗಿವೆ –

"ಪಾಪ ಮಾಡುವುದು" ನಿಜವಾಗಿ ಕ್ರೈಸ್ತರ ಪರಿಕಲ್ಪನೆ, ಇದು ಪರಮಾತ್ಮನ ಬಗ್ಗೆ ನಮಗಿರುವ ಪರಿಕಲ್ಪನೆಯನ್ನು ವಿರೋಧಿಸುತ್ತದೆ. ಪರಮಾತ್ಮನು ಬಡ ಜನರನ್ನು, ಅವರು ಬಡವರಾಗಿ ಪಾಪಿಗಳಾಗಿ ಹುಟ್ಟಿದ್ದು ಅವರ ತಪ್ಪು ಎಂದು ನಿರ್ಣಯಿಸುವುದು ಸರಿಯಾದುದಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/175–177**

## ಪ್ರೀತಿಯ ಮೊದಲ ಅಭಿವ್ಯಕ್ತಿ

ಜೀವಿಗಳು ತಮ್ಮ ಪ್ರೀತಿಯನ್ನೇ ಮೊದಲ ಬಾರಿಗೆ ಪ್ರಕಟಿಸುವುದನ್ನು ನಾಶಪಡಿಸಲೆತ್ನಿಸುವ, ಮುಕ್ಕಲೆತ್ನಿಸುವ, ನುಂಗಲೆತ್ನಿಸುವ ಬಯಕೆ ಎಂದು ಹೇಳಲಾಗುತ್ತದೆ – ಪ್ರೀತಿಯಲ್ಲಿ ಒಂದು ಜೀವಿ ಇನ್ನೊಂದನ್ನು ನುಂಗಲು, ಹುರಿದು ಮುಕ್ಕಲೆತ್ನಿಸುತ್ತದೆ – ಈ ಹೇಳಿಕೆ ಪೂರ್ಣತಃ ಅಸತ್ಯವಲ್ಲವೆಂದು ತೋರಿಸಬಲ್ಲ ಉದಾಹರಣೆಯೊಂದನ್ನು ನಿಮಗೆ ಹೇಳುತ್ತೇನೆ. ಹುಲಿಯು ತನ್ನ ಬೇಟೆಯನ್ನು ಅಥವಾ ವಿಷಸರ್ಪ ತನ್ನ ಬೇಟೆಯನ್ನು ಹಿಡಿದಾಗ, ಹೀಗೂ ಆಗುತ್ತದಂತೆ; ಆ ಬೇಟೆಯು, ಹುಲಿಗೆ ಅಥವಾ ಸರ್ಪಕ್ಕೆ ಸಂತೋಷದಿಂದ

ತನ್ನನ್ನು ಒಪ್ಪಿಸಿಕೊಂಡು ಭಕ್ಷಿಸಲ್ಪಡುವುದನ್ನು ಆನಂದಿಸುತ್ತದಂತೆ – ಮನುಷ್ಯನೊಬ್ಬನ ಇಂಥ ಅನುಭವದ ಕಥೆಗಳನ್ನು ನಿಮಗೆ ಹೇಳುತ್ತೇನೆ. “ಒಂದಿಬ್ಬರು ಗೆಳೆಯರ ಜೊತೆಗೆ ಅವನು ಕಾಡಿಗೆ ಹೋಗಿದ್ದ, ಪ್ರಸಂಗವಶಾತ್ ತುಸು ಹಿಂದೆ ಬಿದ್ದ, ಒಂದು ನರಭಕ್ಷಕ ಹುಲಿ ಬಂದು ಅವನನ್ನು ಹಿಡಿಯಿತು. ಉಳಿದವರು ಅವನಿಲ್ಲದಿರುವುದನ್ನು ಮನಗೊಂಡು ಹಿಂದೆ ಓಡಿ ಬಂದರು, ಅವನನ್ನು ಹುಲಿಯಿಂದ ಪಾರು ಮಾಡಿದರು. ಅವನು ತುಸು ಸುಧಾರಿಸಿಕೊಂಡ ನಂತರ, ಅವರೆಲ್ಲ ಅವನಿಗೆ ತುಂಬ ಭಯಾನಕ ಅನುಭವವಾಗಿರುವಬೇಕಲ್ಲವೇ ಎಂದು ವಿಚಾರಿಸಿದರು – ಅವನು ಹೇಳಿದ, “ಇಲ್ಲ, ನನಗೇನಾಯಿತೆಂಬುದು ನನಗೆ ಗೊತ್ತಾಗಲಿಲ್ಲ, ಹುಲಿ ಬಂದು ನನ್ನನ್ನು ಹಿಡಿದು ಎಳೆದೊಯ್ಯಲಾರಂಬಿಸಿದ ಮೇಲೆ, ನನಗೆ ಆ ಹುಲಿಯ ಮೇಲೆ ತುಂಬ ಪ್ರೀತಿ ಬಂತು, ನನ್ನನ್ನು ತಿನ್ನಲಿ ಎಂದು ನಾನೇ ತೀವ್ರವಾಗಿ ಅಂದುಕೊಳ್ಳತೊಡಗಿದೆ!” ಇದು ನಿಜ ಸಂಗತಿ. ಇದೇನೋ ಹೊಸ ಸಂಶೋಧನೆ ಅಲ್ಲ. ಇದು ಸತ್ಯಕಥೆ.

ನಾನೇ ನನ್ನ ಕಣ್ಣುಗಳಿಂದ ನೋಡಿದ್ದೇನೆ... ಬಹುಶಃ ನಾನಿದನ್ನು ನಿಮಗೆ ಈಗಾಗಲೇ ಹೇಳಿರಬೇಕೆಂದುಕೊಳುತ್ತೇನೆ. ಹೆಬ್ಬಾವಿನ ಬಲೆಯೊಂದರಲ್ಲಿರಿಸಿದ ಸಣ್ಣ ಮೊಲದ ಕಥೆ. “ಜಾರ್ಡಿರ್ನದಿ ಪ್ಲಾಂಟಿಸ್” ಎಂಬ ಪ್ಯಾರಿಸ್ಸಿನ ಮೃಗಾಲಯವೊಂದರಲ್ಲಿ ಅದನ್ನಿಡಲಾಗಿತ್ತು. ಅದು ಬ್ರೇಕ್‌ಫಾಸ್ಟ್ ದಿನ (ಫೆಬ್ರುವರಿ ತಿಂಗಳ ಮೊದಲ ಶನಿವಾರವನ್ನು ಹಬ್ಬದಂತೆ ಆಚರಿಸಲಾಗುತ್ತದೆ) ನಾನು ಪ್ರಸಂಗವಶಾತ್ ಅಲ್ಲಿಗೆ ಹೋಗಿದ್ದೆ. ಬಲೆಯನ್ನು ತೆರೆಯಲಾಯಿತು. ಸಣ್ಣ ಬಿಳಿ ಮೊಲವನ್ನು ಅದರಲ್ಲಿರಿಸಲಾಯಿತು. ತುಂಬ ಚೆಂದದ ಬಿಳಿ ಮೊಲ, ತಕ್ಷಣ ಅದು ಬಲೆಯ ಆ ದಂಡೆಗೆ ಓಡಿ ನಡುಗುತ್ತ ನಿಂತುಬಿಟ್ಟಿತು. ಅದನ್ನು ನೋಡುವುದು ತುಂಬ ಹಿಂಸೆ, ಏಕೆಂದರೆ ಅದಕ್ಕೆ ಗೊತ್ತು ಮುಂದೆ ಏನಾಗಲಿದೆ ಎಂಬುದು. ಅಲ್ಲಿ ಹೆಬ್ಬಾವು ಇರುವುದು ಗೊತ್ತಾಯಿತು ಚೆನ್ನಾಗಿ ಗೊತ್ತಾಯಿತು. ಹೆಬ್ಬಾವು ತನ್ನಷ್ಟಕ್ಕೆ ಸುರುಳಿ ಸುತ್ತಿ ಮಲಗಿಕೊಂಡಿತ್ತು, ತನ್ನ ಕೊರಳು, ತಲೆ ಎತ್ತಿ ಮೊಲವನ್ನು ನೋಡತೊಡಗಿತು. ತುಸು ಕೂಡ ಅಲುಗಾಡದೇ ಬರೀ ನೋಡಿತು, ಕೇವಲ ನೋಡಿತು ಅಷ್ಟೇ. ನಾನೂ ನೋಡುತ್ತಿದ್ದೆ. ಮೊದಲು ಮೊಲ ನಡುಗುವುದನ್ನು ನಿಲ್ಲಿಸಿತು, ಅದರ ಭಯ ಹೋಯಿತು. ಧೈರ್ಯ ಕೂಡಿಸಿಕೊಂಡಿತು, ಸುಧಾರಿಸಿಕೊಳ್ಳಲಾರಂಬಿಸಿತು. ನಾನು ನೋಡುತ್ತಿದ್ದಂತೆ ಅದು ತನ್ನ ತಲೆ ಎತ್ತಿ, ನಿಧಾನವಾಗಿ ಅತಿ ನಿಧಾನವಾಗಿ ಮುಂದೆ ಹೋಯಿತು. ನಿಧಾನವಾಗಿ ಹಾವಿನ

ಸಮೀಪಕ್ಕೆ ಹೋಯಿತು. ಆಗ ಹಾವು, ಒಂದೇ ನೆಗೆತದಲ್ಲಿ, ಯಾವುದೇ ಗದ್ದಲವಿಲ್ಲದೆ ತನ್ನ ಸಿಂಬೆಗಳನ್ನು ಕೂಡ ಬಿಚ್ಚದೇ ಎಲ್ಲಿತ್ತೋ ಹೇಗಿತ್ತೋ ಹಾಗೆಯೇ! ನಿಮಗೆ ಗೊತ್ತಾಯಿತಲ್ಲ – ಒಂದೇ ಗುಕ್ಕು! ಮೊಲವನ್ನು ನುಂಗಿಬಿಟ್ಟಿತು. ಆ ಮೇಲೆ ಹೊರಳಾಡತೊಡಗಿತು. ಅದು ಆಹಾರ ಜೀರ್ಣಿಸಿಕೊಳ್ಳುವ ಕ್ರಿಯೆ. ಅದೇನೂ ಆಟವಾಡುತ್ತಿರಲಿಲ್ಲ, ಆಹಾರವನ್ನು ಸಿದ್ಧಪಡಿಸಿಕೊಂಡಿತು, ಎಲ್ಲ ಎಲವುಗಳನ್ನು ಪುಡಿಪುಡಿ ಮಾಡಿತು, ಮುರಿಯಿತು, ಲೋಳೆಯಂಥ ಪದಾರ್ಥದಿಂದ ಅದನ್ನೆಲ್ಲ ನೆನೆಸಿ ನುಂಗಲು ಸಿದ್ದಪಡಿಸಿತು. ಎಲ್ಲ ಸರಿಯಾಗಿ ತಯಾರ ಆದ ನಂತರ ನಿಧಾನವಾಗಿ ನುಂಗಲಾರಂಭಿಸಿತು.... ಬೇಟೆಗಾಗಿ ಅದೇನೂ ತುಸು ಕೂಡ ಅಲುಗಾಡಬೇಕಾಗಲಿಲ್ಲ, ಕೊನೆಯ ಒಂದು ಅತಿ ಶೀಘ್ರ ಚಲನೆ ಅಥವಾ ಝುಟಕಾ, ಅದೂ ಮೊಲವನ್ನು ಹಿಡಿಯಲು ಮಾತ್ರ! ಅದೂ ಸಹ ಬೇಟೆ ತನ್ನ ಮುಂದೆಯೇ ಇರುವಾಗ. ಬೇರೊಂದು ಜೀವಿಯೇ ಅದರ ಬಳಿ ತಾನಾಗಿ ಬಂದಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/149–50**

## ಸೌಂದರ್ಯವು ವಿಶ್ವಾತ್ಮಕವಾಗಿದೆ

– ಅನುವಾದ: ಪ್ರೊ. ಮಹಾದೇವ ಸಕ್ರಿ

ಇದನ್ನು ಕಾಣಬೇಕಾದರೆ, ಗುರುತಿಸಬೇಕಾದರೆ ನಿಮಗೆ ವಿಶ್ವಾತ್ಮಿಕವಾದ ಪ್ರಜ್ಞೆ ಇರಬೇಕು ಉದಾಹರಣೆಗಾಗಿ, ನಿಮ್ಮ ಪ್ರಜ್ಞೆ ಒಂದು ದೇಶಕ್ಕೆ ಸೀಮಿತವಾಗಿದ್ದರೆ, ಅಂದರೆ ಒಂದು ರಾಷ್ಟ್ರ ಪ್ರಜ್ಞೆ (ಒಂದು ದೇಶ ಅಥವಾ ರಾಷ್ಟ್ರಕ್ಕೆ ಸೀಮಿತವಾದ ಪ್ರಜ್ಞೆ,) ಯಾವುದು ಆ ದೇಶಕ್ಕೆ ಚೆನ್ನಾಗಿದೆಯೋ ಅದು ಬೇರೆ ಇನ್ನಾವುದೋ ದೇಶಕ್ಕೆ ಚೆನ್ನಾಗಿರಲಿಕ್ಕಿಲ್ಲ, ಸೌಂದರ್ಯದ ಅರಿವು ಭಿನ್ನ–ಭಿನ್ನವಾಗಿರುತ್ತದೆ. ಉದಾಹರಣೆಗಾಗಿ (ಒಂದು ಕಥೆ ಹೇಳಿ ನಿಮ್ಮನ್ನು ನಗಿಸುತ್ತೇನೆ) ಪ್ಯಾರಿಸ್‌ನಲ್ಲಿ ನನಗೆ ಅರಸು ದಾಹೋಮಿಯ ಮಗನ ಪರಿಚಯವಿತ್ತು (ಅವನೊಬ್ಬ ನೀಗ್ರೋ, ಅರಸು ದಾಹೋಮಿ ಓರ್ವ ನೀಗ್ರೋ ಅಗಿದ್ದ) ಅವನು ಪ್ಯಾರಿಸ್ಸಿಗೆ ಕಾನೂನು ವ್ಯಾಸಂಗಕ್ಕಾಗಿ ಬಂದಿದ್ದ. ಅವನು ಫ್ರೆಂಚ್ ಭಾಷೆಯನ್ನು ಫ್ರೆಂಚ್ ಜನರಷ್ಟೇ ಚೆನ್ನಾಗಿ ಮಾತನಾಡುತ್ತಿದ್ದ. ಆದರೂ ಅವನೊಬ್ಬ ನೀಗ್ರೋ ಆಗಿದ್ದ. ಅವನು ತಾನು ವಿದ್ಯಾರ್ಥಿಯಾಗಿದ್ದಾಗಿನ ಅನೇಕ ಕಥೆಗಳನ್ನು ಹೇಳುತ್ತಿದ್ದ! ನಾನು

ಎದುರಿನಲ್ಲಿದ್ದಾಗಲೇ ಯಾರೋ ಒಬ್ಬರು ಅವನನ್ನು ಕೇಳಿದರು “ನೀನು ಮದುವೆಯಾಗುವಿಯಾ? ಯಾವಾಗ? ಯಾರನ್ನು?” ಎಂದು. ಅವನು “ಓಹ್” ನನ್ನ ದೇಶದ ಓರ್ವ ಸುಂದರ ಯುವತಿಯನ್ನು. ಸಹಜವಾಗಿ ಅವರೇ ತುಂಬ ಸುಂದರವಾಗಿರುತ್ತಾರೆ” ಎಂದು ಹೇಳಿದ (ನಗು) ಯಾರು ನೀಗ್ರೋಗಳಲ್ಲವೋ ಅವರಿಗೆ ನೀಗ್ರೋಗಳ ಸೌಂದರ್ಯವನ್ನು ಗುರುತಿಸುವುದು ಕಠಿಣ! ಆದರೆ ಅದು ಅವನಿಗೆ ಅತಿ ಸಹಜವಾಗಿತ್ತು, ಅವನು ಆ ಬಗ್ಗೆ ಅತಿ ವಿಶ್ವಾಸದಿಂದ ಇದ್ದ ಕೂಡ, ಯಾರೂ ಬೇರೆ ವಿಧವಾಗಿ ವಿಚಾರಿಸಬೇಕಾದ ಅಗತ್ಯವೇ ಇಲ್ಲ.... “ನನ್ನ ದೇಶದ ಯುವತಿಯರು ಮಾತ್ರವೇ ಸುಂದರವಾಗಿದ್ದಾರೆ” ಇಂದು ಅವನು ಹೇಳಿದ –

ಇದೇ ಇಲ್ಲದಕ್ಕೂ ಅನ್ವಯಿಸುತ್ತದೆ. ಯಾರು ತುಸು ಕಲಾತ್ಮಕ ಅಭಿರುಚಿಯನ್ನು ಬೆಳೆಸಿಕೊಂಡಿದ್ದಾರೋ, ಸಾಕಷ್ಟು ಸುತ್ತಾಡಿದ್ದಾರೋ, ಅನೇಕ ವಸ್ತುಗಳನ್ನು, ಸಂಗತಿಗಳನ್ನು ನೋಡಿದ್ದಾರೋ, ಯಾರ ಅರಿವು ತುಸು ವಿಶಾಲವಾಗಿ ಬೆಳೆದಿದೆಯೋ, ಅಂಥವರು ಮಾತ್ರ ಅಷ್ಟು ಮತಭೇದ ಮಾಡುವದಿಲ್ಲ. ಆದರೆ ಆಂಥ ತಮ್ಮ ಜನಾಂಗದ ಅಭಿರುಚಿ ಅಥವಾ ಪ್ರೀತಿಗೆ ಅಂಟಿಕೊಂಡಿರುವಂಥವರನ್ನು ಅದರಿಂದ ಹೊರತರುವುದು ಸುಲಭವಲ್ಲ, ನಾನಿಲ್ಲಿ ಕೇವಲ ದೇಶ ಅಥವಾ ರಾಷ್ಟ್ರದ ಬಗ್ಗೆ ಹೇಳುತ್ತಿಲ್ಲ, ಇಡೀ ಜನಾಂಗದ ಬಗ್ಗೆ ಹೇಳುತ್ತಿದ್ದೇನೆ. ಅದು ತುಂಬ ಕಠಿಣ. ಅದು ಅಂತರಾಳದಲ್ಲಿರುತ್ತದೆ, ಸುಪ್ತಚೇತನದಲ್ಲಿರುತ್ತದೆ, ಅದು ಆ ವ್ಯಕ್ತಿಗೆ ಕೂಡ ಗೊತ್ತಾಗದಂತೆ ತಾನಾಗಿ ಮೇಲೆ ಬಂದುಬಿಡುತ್ತದೆ ಅತಿ ಸಹಜವಾಗಿ, ಸ್ವಯಂ ಸ್ಫೂರ್ತವಾಗಿ. ಈ ಪ್ರಸ್ತುತ ಸಂದರ್ಭಕ್ಕೆ ಬಂದರೆ, ನಿಮ್ಮ ದೇಶದ ಯುವತಿಯರು ನಿಮಗೆ ಉಳಿದೆಲ್ಲ ದೇಶದ ಯುವತಿಯರಿಗಿಂತ ಚೆಂದಾಗಿಯೇ ಕಾಣುತ್ತಾರೆ, ಅದು ಸಹಜ, ಅದು ತಾನಾಗಿ ಸಹಜವಾಗಿ ಬರುವ ಅಭಿರುಚಿ ಇದನ್ನು ನಾನು ನಿಮಗೆ ಹೇಳಬಯಸುತ್ತೇನೆ,... ಈ ಅಭಿರುಚಿ ಹಂತದಿಂದ ಮೇಲಕ್ಕೇರಬೇಕು. ನಿಮಗೆ ನಿಜವಾದ ಸೌಂದರ್ಯ ಪ್ರಜ್ಞೆ ಇರಬೇಕೆಂದರೆ – ಅದು ಈ ತೆರನಾದ ಅಭಿರುಚಿ, ಜನಾಂಗ ಇವುಗಳನ್ನು ಮೀರಿರುತ್ತದೆ. ನಿಮಗೆ ವಿಶ್ವಾತ್ಮಕವಾದ ಪ್ರಜ್ಞೆ ಇರಬೇಕು. ಇಲ್ಲವಾದರೆ, ಅದು ಹೇಗೆ ಬರಲು ಸಾಧ್ಯ? ನಿಮ್ಮಲ್ಲಿ ಸದಾ ಇಷ್ಟಾನಿಷ್ಟಗಳು ಇದ್ದೇ ಇರುತ್ತವೆ. ಇವೆಲ್ಲ ಅತಿ ಪ್ರಜ್ಞಾಯುಕ್ತ ಹಾಗೂ ಜಾಗೃತ ಇಷ್ಟಾನಿಷ್ಟಗಳಾಗಿರಲಿಕ್ಕಿಲ್ಲವೆಂದರೂ, ಇವು ಸುಪ್ತ–ಚೇತನದ ಇಷ್ಟಾನಿಷ್ಟಗಳಾಗಿರುತ್ತವೆ, ಸಹಜ ಪ್ರವೃತ್ತಿಗಳಾಗಿರುತ್ತವೆ. ಆದ್ದರಿಂದ ಬಾಹ್ಯ ಶರೀರದಾಚೆಗಿರುವ ಸೌಂದರ್ಯವನ್ನು ಕಾಣಬೇಕಾದರೆ ನೀವು

ಆ ಬಾಹ್ಯ ಆಕಾರವನ್ನು ಮೀರಿ ನಿಲ್ಲಬೇಕು. ಆಕಾರದಾಚೆಗಿರುವ ಆ ಸೌಂದರ್ಯವನ್ನು ನೀವೊಂದು ಸಲ ಗ್ರಹಿಸಿದರೆ, ಆಯಿತು, ನೀವು ನಿಮ್ಮ ಬಾಹ್ಯ ಆಕಾರ ಏನೇ ಇರಲಿ ಅದನ್ನು ಗುರುತಿಸಲು ಸಾಧ್ಯವಾಗುವುದು. ಇದು ತುಂಬ ಕೌತುಕದ ಸಂಗತಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/330**

**ವಿಧಿ ಮತ್ತು ಶಕ್ತಿಗಳ ಆಟ**

ಪ್ರಥಮ ಜಾಗತಿಕ ಯುದ್ಧದಲ್ಲಿ ಅತ್ಯಂತ ಪರಿಣಿತನೆಂದು ಕರೆಯಲ್ಪಡುವ ಒಬ್ಬ ಅದ್ಭುತ ವಿಮಾನ ಚಾಲಕನಿದ್ದ. ಅವನು ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಗೆದ್ದಿದ್ದರೂ ಅವನಿಗೆ ಏನೂ ಆಗಿರಲಿಲ್ಲ. ಆದರೆ ಇದ್ದಕ್ಕಿದ್ದಂತೆ ಅವನ ಜೀವನದಲ್ಲಿ ಏನೋ ಸಂಭವಿಸಬಹುದೆಂದು/ಘಟಿಸಬಹುದೆಂದು ವಿಚಾರ ಅವನ ಅನುಭವಕ್ಕೆ ಬಂತು; ಒಂದು ಅಪಘಾತ ಎಲ್ಲವೂ ಮುಗಿದಂತೆ. ಒಳ್ಳೆಯ ಅದೃಷ್ಟ ಎಂದು ಅವರು ಕರೆಯುತ್ತಿದ್ದರೋ ಅದು ಹೊಯಿತು. ಈ ಮನುಷ್ಯ ನಾಗರಿಕ ವಿಮಾನಯಾನ ಸೇವೆಯಲ್ಲಿ ಸೇರುವ ಸಲುವಾಗಿ ಮಿಲಿಟರಿ ಸೇವೆಯನ್ನು ತ್ಯಜಿಸುವ ವಿಚಾರ ಮಾಡಿದ. ಆದರೆ ಯುದ್ಧ ಮುಗಿದಿದ್ದರಿಂದ ಮತ್ತೆ ಮಿಲಿಟರಿಯಲ್ಲಿ ವಿಮಾನ ಚಾಲಕನಾಗಿ ಮುಂದುವರೆದ. ಮತ್ತೆ, ದಕ್ಷಿಣ ಆಫ್ರಿಕಾಕ್ಕೆ ಪ್ರವಾಸ ಮಾಡಬೇಕೆಂದುಕೊಂಡ; ಫ್ರಾನ್ಸ್‌ನಿಂದ ದಕ್ಷಿಣ ಆಫ್ರಿಕಾಗೆ. ಇದರಿಂದ ಅವನ ಪ್ರಜ್ಞೆಯಲ್ಲಿ ಒಂಥರ ನಿರಾಸೆ/ಅಸಮಾಧಾನ ಮೂಡಿದ್ದು ಸ್ಪಷ್ಟವಾಗಿತ್ತು (ವೈಯಕ್ತಿಕವಾಗಿ ಅವನು ನನಗೆ ಗೊತ್ತಿಲ್ಲ, ಆದ್ದರಿಂದ ಏನಾಯಿತೆಂದು ಗೊತ್ತಿಲ್ಲ). ಅವನು ಮಡಗಾಸ್ಕರಗೆ ಹೋಗಲು ಫ್ರಾನ್ಸನ ಒಂದು ನಿರ್ದಿಷ್ಟ ನಗರದಿಂದ ಪ್ರಯಾಣ ಪ್ರಾರಂಭಿಸಿದನೆಂದು ನನ್ನ ನಂಬಿಕೆ. (ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ, ಅದು ಮಡಗಾಸ್ಕರ ಇರಬಹುದೆಂದು ನನ್ನ ಅನಿಸಿಕೆ). ಅಲ್ಲಿಂದ ಮತ್ತೆ ಮಡಗಾಸ್ಕರನಿಂದ ಹಿಂತಿರುಗಿ ಫ್ರಾನ್ಸಗೆ ವಾಪಸ್ಸು ಬರುವುದು ಅವನ ಇಚ್ಛೆಯಾಗಿತ್ತು. ಆ ಸಮಯದಲ್ಲಿ ನನ್ನ ಸಹೋದರ ಕಾಂಗೋದ ಗವರ್ನರ್ ಆಗಿದ್ದರಿಂದ, ಅವನು ಆದಷ್ಟು ಬೇಗನೆ ತನ್ನ ಸೇವೆಗೆ ಹಾಜರಾಗಲು ವಾಪಸ್ಸು ಫ್ರಾನ್ಸನಿಂದ ಹೋಗುವ ಉತ್ಸುಕತೆ ಹೊಂದಿದ್ದ. ಆದ್ದರಿಂದ ಅವನು ವಿಮಾನದಲ್ಲಿ ಪ್ರಯಾಣಿಕನಾಗಿ ಹೋಗಲು ವಿನಂತಿಸಿಕೊಂಡ (ಅದು ವೃತ್ತಿಪರ ಪ್ರವಾಸ ಕೈಗೊಳ್ಳುವ ವಿಮಾನಗಳಲ್ಲಿ ಒಂದಾಗಿತ್ತು). ಬಹಳಷ್ಟು ಜನ ನನ್ನ

ಸಹೋದರನನ್ನು ಈ ವಿಮಾನದಲ್ಲಿ ಪ್ರಯಾಣಿಸುವುದನ್ನು ತಡೆಯುವ ಪ್ರಯತ್ನ ಮಾಡಿದರು. ಈ ಯಾತ್ರೆಗಳು ಯಾವಾಗಲೂ ಅಪಾಯಕಾರಿ, ನೀನು ಅವುಗಳಲ್ಲಿ ಪ್ರಯಾಣ ಮಾಡಬಾರದೆಂದು ಹೇಳಿದರು. ಆದರೆ, ಕೊನೆಗೆ ಅವನು ಅದೇ ವಿಮಾನದಲ್ಲಿ ಯಾತ್ರೆಯನ್ನು ಕೈಗೊಂಡ. ಮಾರ್ಗ ಮಧ್ಯೆ ಕೆಲ ತಾಂತ್ರಿಕ ತೊಂದರೆಗಳಿಂದ ಯಾತ್ರೆಯನ್ನು ಆಹ್ಲಾದಕರವಲ್ಲದ ಸಹಾರಾದ ಮರಭೂಮಿಯಂಥಹ ವಾತಾವರಣದಲ್ಲಿ ಪ್ರಯಾಣವನ್ನು ನಿಲ್ಲಿಸಲಾಯಿತು. ಇಂಥಹ ಸನ್ನಿವೇಶದಲ್ಲಿ ಎಲ್ಲ ಸಮಸ್ಯೆಗಳು ಪವಾಡ ಸದೃಶ ರೀತಿಯಲ್ಲಿ ಪರಿಹಾರವಾದವು. ಅದು ಹೇಗೆಂದರೆ, ತೊಂದರೆಗೀಡಾಗಿ ಸ್ಥಗಿತಗೊಂಡಿದ್ದ ವಿಮಾನ ಮತ್ತೆ ಕಾರ್ಯಮಾಡಲು ಶುರುವಾಯಿತು. ಕಾಂಗೋದಲ್ಲಿ ನನ್ನ ಸಹೋದರನನ್ನು ಇಳಿಸಿದ ಆ ವಿಮಾನ ತನ್ನ ಪ್ರಯಾಣವನ್ನು ದೂರದ ದಕ್ಷಿಣದ ಕಡೆಗೆ ಮುಂದುವರೆಸಿತು. ನಂತರದ ಕೆಲ ನಿಮಿಷಗಳಲ್ಲಿ ವಿಮಾನ ಅಪಘಾತಕ್ಕೀಡಾಗಿ ಅದರಲ್ಲಿದ್ದ ಆ ವ್ಯಕ್ತಿ ಮೃತಪಟ್ಟ. ಹಾಗೆ ಸ್ಪಷ್ಟವಾಗಿ ನೋಡಿದರೆ ಈ ಘಟನೆ ಘಟಿಸಬೇಕಾಗಿದ್ದೆ (ಸಂಭವಿಸಬೇಕಾದ್ದೆ). ನನ್ನ ಸಹೋದರನಿಗೆ ದೈವದಲ್ಲಿ ಸಂಪೂರ್ಣ ನಂಬಿಕೆ ಇತ್ತು ಮತ್ತು ತನಗೆ ಏನೂ ಆಗುವುದಿಲ್ಲ ಎಂಬ ಧೃಡನಂಬಿಕೆ ಕೂಡ. ಮೇಲಿನ ಎಲ್ಲ ಘಟನಾವಳಿಗಳನ್ನು ಈ ರೀತಿ ವಿವರಿಸಬಹುದು – ಎರಡು ವಿಭಿನ್ನ ಸ್ವಭಾವಗಳನ್ನು (ಸ್ವಭಾವದ ವ್ಯಕ್ತಿಗಳನ್ನು) ಬೇರ್ಪಡಿಸುವುದು ಅನಿವಾರ್ಯವಾಗಿತ್ತು. ಆದ್ದರಿಂದ ಸಹಾರಾದಲ್ಲಿ ವಿಮಾನ ಕೆಟ್ಟು ಕೆಳಗಿಳಿಯಿತು (ಅಪಘಾತವಾಗದೆ), ನಂತರ ಎಲ್ಲ ಸರಿಯಾದ ಮೇಲೆ ವಿಮಾನ ಪ್ರಯಾಣ ಮುಂದುವರೆಸಿತು. ನನ್ನ ಸಹೋದರ ವಿಮಾನದಿಂದ ಕಾಂಗೋದಲ್ಲಿ ಇಳಿದಾದ ಮೇಲೆ, ಆ ಇನ್ನೊಬ್ಬ ವ್ಯಕ್ತಿಯಲ್ಲಿ ದುರಾದೃಷ್ಟದ ಎಲ್ಲ ಶಕ್ತಿಗಳೂ ಇದ್ದವು. ಆದುದರಿಂದ ವಿಮಾನ ಅಪಘಾತಕ್ಕೀಡಾಗಿ ಆ ವ್ಯಕ್ತಿ ಮೃತಪಟ್ಟ.

ಮೇಲಿನಂಥಹದೆ ಘಟನೆ ಒಂದು ಹಡಗಿನೊಂದಿಗೆ ನಡೆಯಿತು. ಇಬ್ಬರು ವ್ಯಕ್ತಿಗಳು (ಆ ಇಬ್ಬರು ವ್ಯಕ್ತಿಗಳು ಖ್ಯಾತನಾಮರು ಅವರ ಹೆಸರುಗಳು ನೆನಪಿಲ್ಲ). ವಿಮಾನದ ಮೂಲಕ ಇಂಡೋ–ಚೈನಾಗೆ ಹೋಗಿದ್ದರು. ಒಂದು ಅಪಘಾತದಲ್ಲಿ ಅನಿರೀಕ್ಷಿತವೆಂಬಂತೆ ಇವರೀರ್ವರನ್ನು ಬಿಟ್ಟು ಉಳಿದವರೆಲ್ಲರೂ ಮೃತಪಟ್ಟಿದ್ದರು. ಬದುಕುಳಿದ ಇವರೀರ್ವರೂ (ಗಂಡ–ಹೆಂಡತಿ) ಮೃತ ಪಟ್ಟವರ ಪಾಲಿಗೆ ಕೆಟ್ಟ ಅದೃಷ್ಟವನ್ನು ತಮ್ಮ ಜೊತೆ ಹೊತ್ತು ತಂದಿದ್ದರು. ಸರಿ, ಈ ಇಬ್ಬರೂ ಫ್ರಾನ್ಸ್‌ಗೆ ಬಂದು ದೋಣಿಯ ಮೂಲಕ ವಾಪಸ್ಸು ಹೋಗಬೇಕೆಂದುಕೊಂಡಿದ್ದರು

(ಅಪಘಾತವಾಗಿದ್ದು ಇವರು ಫ್ರಾನ್ಸ್‌ಗೆ ಹಿಂತಿರುಗುವಾಗ) ಕೊಂಚ ಅನಿರೀಕ್ಷಿತವೆಂಬಂತೆ, ಅಪವಾದಾತ್ಮಕ ಎಂಬಂತೆ, ಈ ಹಡಗು ಕೆಂಪು ಸಮುದ್ರದ ನಟ್ಟನಡುವೆ ದೊಡ್ಡ ಬಂಡೆಯ ತುದಿಗೆ ಡಿಕ್ಕಿ ಹೊಡೆದು ಮುಳುಗಿಹೋಯಿತು. ಇಂತಹ ಘಟನೆ ನಡೆಯುವುದು ದಶಲಕ್ಷಕ್ಕೆ ಒಂದು. ಅಪಘಾತವಾಗಿ ಮುಳುಗಿದ ಹಡಗಿನಿಂದ ಇವರೀರ್ವರು ಮಾತ್ರ ಬದುಕುಳಿದು ಉಳಿದವರೆಲ್ಲರೂ ಸಮುದ್ರದ ಪಾಲಾದರು. ಈ ಪ್ರಸಂಗದಲ್ಲಿ ನಾನೇನೂ ಮಾಡಲಾಗಲಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ನತದೃಷ್ಟನನ್ನು ಹೊತ್ತು ತರುವ ಜನ ಅನಾಯಾಸವಾಗಿ ಪಾರಾಗಿ, ಉಳಿದವರಿಗೆ ದುರಂತವನ್ನು ತಂದೊಡ್ಡುತ್ತಾರೆ. ಆದ್ದರಿಂದ, ಅಂಥವರ ಜೊತೆಗೆ ಎಂದಿಗೂ ಪ್ರಯಾಣ ಮಾಡಬಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/406–07**

## ಆಹಾರ ಪದ್ಧತಿ ಮತ್ತು ಉನ್ನತ ಜೀವನ

ನನಗೆ, ಒಬ್ಬ ಸ್ವಿಡಿಷ (ಸ್ವೀಡನ್ನಿನ) ಯುವ ಮಹಿಳೆ ಗೊತ್ತು. ಅವಳು ಆಯ್ಕೆಯಿಂದ ಮತ್ತು ಅಭ್ಯಾಸದಿಂದ ಸಸ್ಯಾಹಾರಿ ಆಹಾರ ಪದ್ಧತಿಯನ್ನು ರೂಢಿಸಿಕೊಂಡವಳು. ಒಮ್ಮೆ, ಕೆಲವು ಗೆಳೆಯರು ಇವಳನ್ನು ರಾತ್ರಿಯ ಭೋಜನಕ್ಕೆ ಆಮಂತ್ರಿಸಿ, ತಿನ್ನಲು ಚಿಕನ್ (ಕೋಳಿಯ ಖಾದ್ಯ) ನೀಡಿದರು. ಆ ಸಮಯದಲ್ಲಿ ಸುಮ್ಮನೆ ರಂಪ ಮಾಡಬಾರದೆಂದು ಗೆಳೆಯರು ಕೊಟ್ಟಿದ್ದ ಚಿಕನ್ ಆಕೆ ತಿಂದಳು. ಆದರೆ, ಅಂದು ರಾತ್ರಿ ಒಮ್ಮಿಂದೊಮ್ಮೆ ತನ್ನನ್ನು ತಾನು ಒಂದು ಬಾಸ್ಕೇಟ್‌ನಲ್ಲಿರುವಂತೆ ಮತ್ತು ತನ್ನ ತಲೆ ಎರಡು ಹೆಣಿಗೆಗಳ ನಡುವೆ ಇದ್ದು, ಜೋರಾಗಿ ಅಲುಗಾಡಿಸಿದಂತೆ, ಅತ್ಯಂತ ಕರುಣಾಜನಕ ಮತ್ತು ದುಃಖದ ಅನುಭವವಾದಂತಾಯಿತು. ಮತ್ತೆ, ಅವಳ ತಲೆ ಕೆಳಗಾಗಿ, ಕಾಲು ಗಾಳಿಯಲ್ಲಿ ಮೇಲಾಗಿ ಅಲುಗಾಡಿಸಿದ ಅನುಭವ. ಇಂತಹ ನಿಕೃಷ್ಠ ಸ್ಥಿತಿಯಲ್ಲಿ ಯಾರೋ ಧುತ್ತನೆ ಬಂದು ತನ್ನ ದೇಹದ ಭಾಗಗಳನ್ನು ಕಿತ್ತುವಂತೆ, ಮತ್ತೊಬ್ಬರು ಚಾಕುವಿನಿಂದ ತನ್ನ ತಲೆ ಕತ್ತರಿಸಿದಂತೆ ಅತ್ಯಂತ ಕೆಟ್ಟ ಅನುಭವವಾಯಿತು. ಈ ಕೆಟ್ಟ ಅನುಭವದಿಂದ ಅವಳು ನಿದ್ರೆಯಿಂದ ಎಚ್ಚೆತ್ತುಕೊಂಡಳು.

ಆ ಯುವ ಹೆಂಗಸು, ನಿದ್ರೆಯಲ್ಲಾದ ತನ್ನ ಎಲ್ಲ ಅನುಭವಗಳನ್ನು ನನ್ನಲ್ಲಿ ಹೇಳಿಕೊಂಡಳು. ಅವಳು ಹೇಳಿದ್ದು, ಇಂತಹ ಭಯಾನಕ ದುಃಸ್ವಪ್ನವನ್ನು ತನ್ನ ಜೀವನದಲ್ಲಿ ಹಿಂದೆಂದೂ ಅನುಭವಿಸಿರಲಿಲ್ಲ. ನಿದ್ರೆಗೆ ಜಾರುವ ಮುನ್ನ

ಇಂತಹದೊಂದು ಕೆಟ್ಟ ಅನುಭವವಾಗಬಹುದೆಂದು ನಿರೀಕ್ಷಿಸಿರಲಿಲ್ಲವೆಂದು ತನ್ನ ಬಳಿ ಅವಳು ಹೇಳಿಕೊಂಡಳು. ಇಂತಹ ಭಯಾನಕ ದುಃಸ್ವಪ್ನಕ್ಕೆ ಕಾರಣವೇನೆಂದರೆ, ಅ ಬಡಕೋಳಿಯು ಅನುಭವಿಸಿದ ನೋವು, ಹಿಂಸೆ ಹಾಗೂ ಸಂಕಟ. ಕೋಳಿಯನ್ನು ಸಂತೆಯಲ್ಲಿ ಮಾರುವಲ್ಲಿಂದ ಹಿಡಿದು, ಅದರ ಪುಕ್ಕ ಕಿತ್ತಿ, ಗೋಣು ಮುರಿದು ಕೋಳಿ ಖಾದ್ಯ ಮಾಡುವವರೆಗಿನ ಅದರ ಅನುಭವ ನಿದ್ರೆಯಲ್ಲಿ ಅವಳಿಗಾಯಿತು.

ಒಟ್ಟಿನಲ್ಲಿ ಹೇಳುವುದಾದರೆ, ಒಂದು ಪ್ರಾಣಿಯ ಮಾಂಸ ತಿನ್ನುವಾಗ ಹೆಚ್ಚು ಅಥವಾ ಕಡಿಮೆ ಪರಿಮಾಣದಲ್ಲಿ ಆ ಪ್ರಾಣಿಯ ಪ್ರಜ್ಞೆಯನ್ನೂ ನಾವು ನುಂಗುತ್ತೇವೆ. ಅದು ಅಂತಹ ಗಂಭೀರ ವಿಚಾರವಲ್ಲ, ಆದರೆ ಅದು ಯಾವಾಗಲೂ ಹಿತವಲ್ಲ. ನಿಸ್ಸಂಶಯವಾಗಿ ಇಂತಹ ವಿಚಾರ ನಮ್ಮನ್ನು ಮನುಷ್ಯರ ಸಂತತಿಯಲ್ಲಿರುವಂತೆ ಸಹಾಯ ಮಾಡುವುದಿಲ್ಲ. ಬದಲಿಗೆ ಮೃಗಗಳ ಸಂತತಿಯಲ್ಲಿ ಇರಲು ಸಹಾಯವಾಗಬಹುದು.

ಚೇತನ ಗುಣಕ್ಕಿಂತ ಅವಚೇತನ ಗುಣಗಳನ್ನು ಹೊಂದಿದ್ದ ಪ್ರಾಚೀನ ಮಾನವ ಬೇಯಿಸಿದ ಮಾಂಸಕ್ಕಿಂತ ಹಸಿ ಮಾಂಸವನ್ನು ಇಷ್ಟಪಡುತ್ತಿದ್ದ. ಯಾಕೆಂದರೆ, ಅದು ಅವರಿಗೆ ಹೆಚ್ಚಿನ ಶಕ್ತಿಯನ್ನು ಕೊಡುತ್ತಿತ್ತು. ಆದಿ ಮಾನವರು ಪ್ರಾಣಿಯನ್ನು ಕೊಂದು, ಅದನ್ನು ಸಿಗಿದು, ಚೂರು ಚೂರು ಮಾಡಿ ತಿನ್ನುತ್ತಿದ್ದರು, ಗಟ್ಟಿಮುಟ್ಟಾಗಿರುತ್ತಿದ್ದರು. ಈ ಆದಿಮಾನವರ ದೇಹದ ಕರುಳಿನಲ್ಲಿರುವ 'ಅಪೆಂಡಿಕ್ಸ್' ಎಂಬ ಭಾಗ ಹಸಿ ಮಾಂಸವನ್ನು ಸುಲಭವಾಗಿ ಜೀರ್ಣಿಸಲು ಸಹಾಯ ಮಾಡುತ್ತಿತ್ತು. ನಂತರದ ದಿನಗಳಲ್ಲಿ ಅವರು ಮಾಂಸವನ್ನು ಬೇಯಿಸಿ ತಿನ್ನಲು ಪ್ರಾರಂಭಿಸಿದರು. ಬೇಯಿಸಿದ ಮಾಂಸ ಹಸಿ ಮಾಂಸಕ್ಕಿಂತ ಹೆಚ್ಚು ರುಚಿಸಿತು. ತತ್ಪರಿಣಾಮ, ದೊಡ್ಡ ಆಕಾರದಲ್ಲಿದ್ದ ಅಪೆಂಡಿಕ್ಸ ಕ್ರಮೇಣವಾಗಿ ಸಣ್ಣದಾಗುತ್ತ ಬಂದು ಕೊನೆಗೆ ಜೀರ್ಣಕ್ರಿಯೆಯಲ್ಲಿ ಅದರ ಉಪಯೋಗವೇ ಇಲ್ಲದಂತಾಯಿತು. ಇವತ್ತಿನ ದಿನಗಳಲ್ಲಿ ಅಪೆಂಡಿಕ್ಸನ ಇರುವಿಕೆಯಿಂದ ಉಪಯೋಗಕ್ಕಿಂತ ತೊಂದರೆಗಳೆ ಹೆಚ್ಚು.

ಈ ವಿಷಯಗಳನ್ನೆಲ್ಲ ತಮ್ಮ ಮುಂದೆ ಯಾಕೆ ಹೇಳುತ್ತಿದ್ದೇನೆಂದರೆ, ಈಗಿರುವ ಆಹಾರ ಪದ್ಧತಿಯನ್ನು ಬದಲಿಸಿ, ಅಂದರೆ ಹೆಚ್ಚು ಪಾಶವೀ ಆಹಾರದಿಂದ ಕಡಿಮೆ ಪಾಶವೀ ಆಹಾರದ ಕಡೆಗೆ ಹೋಗುವುದು. ಇದು ಸಂಪೂರ್ಣವಾಗಿ ಒಬ್ಬ ವ್ಯಕ್ತಿಯ ಪ್ರಜ್ಞಾವಸ್ಥೆಯ ಮೇಲೆ ಅವಲಂಬಿತವಾಗಿದೆ.

ಯಾವುದೇ ಒಬ್ಬ ಸಾಮಾನ್ಯ ಮನುಷ್ಯ, ಸಾಮಾನ್ಯ ಜೀವನ ನಡೆಸುತ್ತಿದ್ದು, ಸಾಮಾನ್ಯ ಚಟುವಟಿಕೆಗಳಿಂದ ಕೂಡಿದ್ದು, ಗಳಿಸುವುದು ಬಿಟ್ಟು ಬೇರೆನೂ ಚಿಂತೆ ಮಾಡದವ, ತನ್ನಷ್ಟಕ್ಕೆ ತಾನಿದ್ದು ತನ್ನ ಸಂಸಾರದ ಜವಾಬ್ದಾರಿಯನ್ನು ಹೊತ್ತವ ಮಾಂಸ ತಿನ್ನಲು ಅಡ್ಡಿಯಲ್ಲ. ಅವನು ಏನೇ ತಿಂದರೂ ಅದು ಅವನಿಗೆ ಸರಿ ಹೊಂದುತ್ತದೆ. ಒಂದು ವೇಳೆ ಯಾರಾದರೂ ಸಾಮಾನ್ಯ ಜೀವನ ಸ್ಥರದಿಂದ ಉಚ್ಚ ಜೀವನ ಸ್ಥರದಡೆಗೆ ಸಾಗುವ ಇಚ್ಛೆ ಮಾಡಿದ್ದರೆ, ಸಮಸ್ಯೆಗಳು ಮತ್ತಷ್ಟು ಸ್ವಾರಸ್ಯಕರವಾಗಲು ಪ್ರಾರಂಭಿಸುತ್ತದೆ. ಒಂದು ಸಮಯದಲ್ಲಿ ಉನ್ನತ ಜೀವನ ಸ್ಥರಕ್ಕೆ ಬಂದೊಡನೆ, ಆ ವ್ಯಕ್ತಿ ಪರಿವರ್ತನೆ ಹೊಂದಲು ಪ್ರಯತ್ನ ಪಡುತ್ತಾನೆ. ಆಗ ಅದು ಅತ್ಯಂತ ಮುಖ್ಯವಾದ ವಿಷಯವಾಗುತ್ತದೆ. ಕೆಲವು ನಿರ್ದಿಷ್ಟ ಆಹಾರ ಸೇವನೆಯಿಂದ ದೇಹವು ಚುರುಕಾಗಬಹುದು, ಮತ್ತೆ ಕೆಲವು ಆಹಾರ ಸೇವನೆಯಿಂದ ದೇಹವು ಪಶುತ್ವದ ಸ್ಥಿತಿಯಲ್ಲಿರಬೇಕಾಗುತ್ತದೆ. ಇದೆಲ್ಲವೂ ಅವಶ್ಯಕವೆನಿಸುವುದು ಒಂದು ನಿಶ್ಚಿತ ಸಮಯದಲ್ಲಿ, ಅದಕ್ಕಿಂತ ಮೊದಲಲ್ಲ. ಆ ಘಳಿಗೆಯನ್ನು ತಲುಪುವ ಮುಂಚೆ ಕೆಲ ಬೇರೆ ಕೆಲಸಗಳನ್ನು ಮಾಡಬೇಕಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/178–80**

### ತರಕಾರಿಗಳ ಮತ್ತು ಪ್ರಾಣಿಗಳ ಪ್ರಜ್ಞೆ

*ಪ್ರೀತಿಯ ತಾಯಿಯವರೆ, ಕೋಳಿಯು ಅನುಭವಿಸಿದ ಸಂಕಟ ನಮ್ಮನ್ನು ಕಾಡುವುದಾದರೆ, ಗಜ್ಜರೆ ಮತ್ತು ಸಿಹಿಗೆಣಸು (ಕಂದುಬೇರು) ಅನುಭವಿಸಿದ ಸಂಕಟ ಸಹ ನಮ್ಮನ್ನು ಕಾಡುವುದೇ?*

ನನ್ನ ಅಭಿಪ್ರಾಯದ ಪ್ರಕಾರ ಕೋಳಿಯ ಪ್ರಜ್ಞೆ ಸಿಹಿಗೆಣಸಿನ ಪ್ರಜ್ಞೆಗಿಂತ ಮೇಲಿದೆ (ನಗು). ಆದರೆ ಈ ಸಂದರ್ಭದಲ್ಲಿ ನನ್ನ ಅನುಭವವನ್ನು ಹೇಳಲೇಬೇಕು. ಇದೊಂದು ಸಾಮಾನ್ಯ ವಿಷಯವಲ್ಲವೆಂದು ನನ್ನ ಯೋಚನೆ/ಅಂಬೋಣ. ನಾನು ಟೋಕಿಯೋದಲ್ಲಿದ್ದಾಗ ನನ್ನ ಉದ್ಯಾನವನದಲ್ಲಿ ತರಕಾರಿಗಳನ್ನು ಬೆಳೆಯುತ್ತಿದ್ದೆ. ಆ ದೊಡ್ಡ ಉದ್ಯಾನವನದಲ್ಲಿ ಬಹಳಷ್ಟು ತರಕಾರಿಗಳನ್ನು ಬೆಳೆಯುತ್ತಿದೆ. ದಿನಾಲು ಮುಂಜಾನೆ ತರಕಾರಿಗಳಿಗೆ ನೀರುಣಿಸಿದ ನಂತರ ನಾನು ವಾಯು ವಿಹಾರಕ್ಕೆ ಹೋಗುತ್ತಿದ್ದೆ. ಕೆಲ ಸಮಯದ ವಿಶ್ರಾಂತಿಯ ನಂತರ ಉದ್ಯಾನವನದಲ್ಲಿ ತಿರುಗಾಡಿ ತಿನ್ನಲಿಕ್ಕೆಂದು ತರಕಾರಿಗಳನ್ನು ಆರಿಸುತ್ತಿದ್ದೆ.

ಸರಿ, ಹಾಗೆ ಸ್ವಲ್ಪ ಹೊತ್ತು ಕಲ್ಪನೆ ಮಾಡಿ, ಕೆಲವು ತರಕಾರಿಗಳು "ಬೇಡ, ಬೇಡ, ಬೇಡ" ಎನ್ನುತ್ತಿದ್ದವು. ಮತ್ತೆ ಕೆಲವು ತರಕಾರಿಗಳು "ನನ್ನನ್ನು ತೆಗೆದುಕೊ, ನನ್ನನ್ನು ತೆಗೆದುಕೊ.." ಎಂದು ಹೇಳುತ್ತಿದ್ದವು. ಆದ್ದರಿಂದ ತರಕಾರಿಗಳನ್ನು ಆಯ್ಕೆ ಮಾಡುವುದು ನನಗೆ ಸುಲಭವಾಗಿತ್ತು. ಬೇಡ, ಬೇಡ ಎನ್ನುತ್ತಿದ್ದವುಗಳನ್ನು ಬಿಟ್ಟು, ನನ್ನನ್ನು ತೆಗೆದುಕೊ ಎಂದು ಹೇಳುತ್ತಿದ್ದವುಗಳನ್ನು ಆಯ್ಕೆ ಮಾಡುತ್ತಿದ್ದೆ. ಇದೊಂದು ಅಸಾಧಾರಣ ಕೆಲಸವೆಂದು ನಾನು ಯೋಚಿಸುತ್ತಿದ್ದೆ. ನಾನು ಸಸ್ಯ/ಗಿಡಗಳನ್ನು ಅತಿಯಾಗಿ ಪ್ರೀತಿಸುತ್ತಿದ್ದೆ. ನಾನು ಅವುಗಳನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದೆ. ಅವುಗಳಿಗೆ ನಾನು ನೀರುಣಿಸುವಾಗ, ನೀರಿನ ಜೊತೆಗೆ ಬಹಳಷ್ಟು ಪ್ರಜ್ಞೆಯನ್ನು ಸಹ ಉಣಿಸಿದ್ದೇನೆ. ಬಹುಶಃ ಅವುಗಳಲ್ಲಿ ವಿಶೇಷ ಸಾಮರ್ಥ್ಯವಿದೆಯೆಂದು ನನ್ನ ಅನಿಸಿಕೆ.

ದಕ್ಷಿಣದ ಫ್ರಾನ್ಸ್‌ನಲ್ಲೂ ಸಹ ನನ್ನದೊಂದು ಉದ್ಯಾನವನವಿತ್ತು. ಅದರಲ್ಲಿ ನಾನು ಮೂಲಂಗಿ, ಬಟಾಣಿ, ಗಜ್ಜರಿ ಬೆಳೆಯುತ್ತಿದ್ದೆ. ಅವುಗಳಲ್ಲಿ ಕೆಲವು ನನ್ನನ್ನು ತೆಗೆದುಕೊ ಮತ್ತು ತಿನ್ನು ಎಂದು ಸಂತೋಷದಿಂದ ಹೇಳಿದರೆ, ಅದರಲ್ಲಿ ಕೆಲವು ಬೇಡ, ಬೇಡ ನಮ್ಮನ್ನು ಮುಟ್ಟಬೇಡ ಎನ್ನುತ್ತಿದ್ದವು.

*ಮಾತೆ, ಅವುಗಳು ಯಾಕೆ ಹಾಗೆ ಹೇಳುತ್ತಿದ್ದವು?*

ಸರಿ, ಅದನ್ನು ತಿಳಿದುಕೊಳ್ಳುವ ಸಲುವಾಗಿ ನಾನು ಒಂದು ನಿಖರವಾದ ಪ್ರಯೋಗವನ್ನು ಮಾಡಿದೆ, ಅದರೆ ಅವುಗಳ ಪರಿಣಾಮ ಯಾವಾಗಲೂ ಒಂದೆ ಇರುತ್ತಿರಲಿಲ್ಲ. ವಾಸ್ತವವಾಗಿ ಕೆಲವು ಸಸ್ಯಗಳು ತಿನ್ನಲು ಯೋಗ್ಯ ಇರುತ್ತಿರಲಿಲ್ಲ. ಮತ್ತೆ ಕೆಲವು ಸಲ ಅವು ತಿನ್ನುವ ಸಲುವಾಗಿ ತಯಾರಿರುತ್ತಿರಲಿಲ್ಲ. (ಪಕ್ವವಾಗಿರುತ್ತಿದ್ದಿಲ್ಲ). ಎರಡು ಅಥವಾ ಮೂರು ದಿನ ಕಾಯ್ದ ನಂತರ ಸಸ್ಯಗಳು ನನ್ನನ್ನು ತೆಗೆದುಕೊ, ನನ್ನನ್ನು ತೆಗೆದುಕೊ ಎಂದು ಹೇಳುತ್ತಿದ್ದವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/181–82**

**ಸ್ವತಃ ತನಗೆ ತಾನೇ ಕಥೆಗಳನ್ನು ಹೇಳುವುದು/ಹೇಳಿಕೊಳ್ಳುವುದು**

ನಾನು ಚಿಕ್ಕವಳಿದ್ದಾಗ ಇದನ್ನು ಸ್ವತಃಕ್ಕೆ ಕಥೆಗಳನ್ನು ಹೇಳಿಕೊಳ್ಳುವುದು ಎಂದು ಕರೆಯುತ್ತಿದ್ದೆ. ಕಥೆ ಹೇಳುವುದೆಂದರೆ ಶಬ್ದಗಳ ಮೂಲಕ ಹೇಳುವುದಲ್ಲ; ಅದು ತಲೆಯಲ್ಲಿ ಕಟ್ಟುವಂಥದು. ಸ್ವಚ್ಛ ಮತ್ತು ತಾಜಾ ವಾತಾವರಣವಿರುವ

ಸ್ಥಳದಲ್ಲಿ ಒಂದು ಅದ್ಭುತವಾದ ಕಥೆಯನ್ನು ಕಟ್ಟುವುದು, ಈ ರೀತಿಯಾಗಿ ಸ್ವತಃಕ್ಕೆ ಒಂದು ಸುಂದರವಾದ, ನಿಜವಾಗಿಯೂ ಶಕ್ತಿಯುತವಾದ ಮತ್ತು ಚನ್ನಾಗಿ ಹೊಂದಾಣಿಕೆಯಿರುವ ಕಥೆಯನ್ನು ಹೇಳಿಕೊಳ್ಳುವುದರಿಂದ/ಕಟ್ಟುವುದರಿಂದ ಮುಂದೊಂದು ದಿನ ಆ ಕಥೆ ಜೀವನದಲ್ಲಿ ನಿಜವಾಗುವುದು; ನಿಖರವಾಗಿ ಅಲ್ಲದೆ ಆದರೂ ಸ್ವಲ್ಪ ವ್ಯತ್ಯಾಸದೊಂದಿಗೆ ನಿಜವಾಗುವುದು.

ಸ್ವತಃಕ್ಕೆ ಹೇಳಿಕೊಂಡ ಕಥೆ ನಿಜವಾಗಬೇಕಾದರೆ ಹಲವು ವರ್ಷಗಳೇ ಬೇಕಾಗಬಹುದು. ನೀವು ಕಟ್ಟಿದ ಕಥೆ ನಿಮ್ಮ ಜೀವನ್ನವನ್ನು ಚೆನ್ನಾಗಿ ಕಟ್ಟುವಲ್ಲಿ ಸಹಾಯವಾಗುವುದು.

ಆದರೆ, ಕೆಲವೇ ಕೆಲವು ಜನ ಮಾತ್ರ ಈ ರೀತಿ ಸುಂದರವಾದ ಕಥೆಗಳನ್ನು ಹೇಳುವುದರಲ್ಲಿ ಸಕ್ಷಮರು. ಕೆಲವು ಜನ ತಮ್ಮ ಕಥೆಗಳಲ್ಲಿ ಭಯಾನಕತೆಯನ್ನು ಬೆರೆಸಿ ನಂತರ ಪಶ್ಚಾತ್ತಾಪಪಡುತ್ತಾರೆ.

ಯಾರಾದರೊಬ್ಬರು ಭಯಾನಕತೆಯನ್ನು ಬಿಟ್ಟು ಬರೀ ಸುಂದರತೆಯ–ನ್ನೊಳಗೊಂಡ ಕಥೆ ಹೇಳಿದರೆ, ಅದು ಮುಂದೊಂದು ದಿನ ಎಲ್ಲರ ಜೀವನದ ಮೇಲೆ ಅಗಾಧವಾದ ಪರಿಣಾಮ ಬೀರುತ್ತದೆ. ಆದರೆ, ಈ ವಿಷಯ ಬಹಳಷ್ಟು ಜನರಿಗೆ ಗೊತ್ತಿಲ್ಲ.

ಸ್ವತಃಕ್ಕೆ ಒಂದು ಸುಂದರವಾದ ಸೃಜನಶೀಲವಾದ ಕಥೆಯನ್ನು ಹೇಳಿಕೊಳ್ಳಬಲ್ಲ ಕಲೆಯನ್ನು ಹೊಂದಿದ್ದರೆ, ಆ ಕಲೆ ನಿಜವಾಗಿಯೂ ಭೌತಿಕ ಜೀವನವನ್ನು ಬಾಲ್ಯಾವಸ್ಥೆಯಲ್ಲಿಯೇ ಸುಂದರಮಯ ಮಾಡಬಹುದು. ಆದರೆ, ನಮ್ಮ ಸುತ್ತಮುತ್ತಲಿನ ಜನ, ಕೆಲವು ಸಲ ನಮ್ಮ ಸ್ವಂತ ಗೆಳೆಯರು, ಪೋಷಕರು, ಗುರುಗಳು, ನಮ್ಮ ಪ್ರಯತ್ನಕ್ಕೆ ತಣ್ಣೀರೆರಚಿ ಎಲ್ಲವನ್ನು ಹಾಳು ಮಾಡುತ್ತಾರೆ; ನಾವು ಯಶಸ್ಸನ್ನು ಕಾಣದಂತೆ ಮಾಡುತ್ತಾರೆ.

ಒಂದು ಚಿಕ್ಕ ಮಗುವಿನ ಸಹಜ ಯಥಾರ್ಥತೆಯಿಂದ ಪ್ರಯತ್ನ ಮಾಡಿದರೆ, ಒಂದು ಸುಂದರ ಜೀವನವನ್ನು ಕಟ್ಟಲು ಸಾಧ್ಯ. ಜಗತ್ತಿನಲ್ಲಿ ಚಿಕ್ಕ ವಯಸ್ಸಿನಲ್ಲಿ ಕಟ್ಟಿದ ಕನಸುಗಳು ಪ್ರೌಢಾವಸ್ಥೆಯಲ್ಲಿ ನಿಜವಾಗುವವು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/117–18** **– ಶ್ರೀಮಾತೆ**



ನಮ್ಮ ಕ್ಷಣಿಕತೆಯ ಕ್ಷಣಕು ಲೆಕ್ಕಿಸದೆ ಅವಳಿಂದು ಹೊಳೆಯುತಿರಲು
ದೇವಗಣಕಿಂದು ಸಹಜದಲಿ ಭರತ, ಸೌಂದರ್ಯ ಅರಳುತಿರಲು
ಕಾಲ–ನಿಯತಿಯಲಿ ದಿಟ್ಟಿ ಮೂಡಿರಲು ಆ ಬಯಕೆ ಎತ್ತಿ ಹಿಡಿದು
ಅವಕಾಶವಿತ್ತ ಗುತ್ತಿಗೆಯ ಚಿತ್ರ, ದಿವ್ಯಾರ್ಥ ನಿಜದ ಬಂಧು

ಸ್ವರ್ಗದಿಂದ ನಿರ್ಗಮಿಸಿ ಬಂದ ಅವಳ ಆ ಪ್ರಭೆಯ ವಲಯ
ಸಹಜ ಬೆಳಕಿತ್ತು ಬುವಿಯ ಮನಕಿಂದು ಉಸಿರಿಡಲು ಮರೆತ ವಿಷಯ.

[ಸಾವಿತ್ರಿ ಪದ್ಯಾನುವಾದ: ದಳ ೧ ರೇಣು ೧ ಪುಟ ೫]

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026

## ಕಮಲವನ ಸಂಚಾರಿಣಿ

ಕಮಲವನ ಸಂಚಾರಿಣಿಯೆ ಮಹಾಲಕ್ಷ್ಮಿ ಬೇಕೇ ಆಸನ?
ಅರುಣಚರಣೇ ಮಾಡು ನನ್ನೀ ಹೃದಯವನೆ ಸಿಂಹಾಸನ ॥ ೧ ॥

ವಿಶ್ವಸುಂದರಿ ನಿಖಿಲಜಗದಾನಂದಕರಿ ಹೇ ಯೋಗಿನೀ!
ವಿರಸ ಹೃದಯತ್ಯಾಗಿ ನೀರಸ ಭಕ್ತಿ ಬಂಧನ ಭೋಗಿನೀ! ॥ ೨ ॥

ಪಾಪದೂರೇ ! ಮಾಡು ನನ್ನನು ನಿನ್ನನುಗ್ರಹವಾಗರಾ
ಮಧುರ ಕೌಶಲ ಮಾಯೆಯಲಿ ಮಾಡೆನ್ನ ಪ್ರೇಮದ ಸಾಗರಾ ॥ ೩ ॥

– ಅಂಬಿಕಾತನಯದತ್ತ

[ಇದಕ್ಕೆ ಮೊದಲು “ಮಹಾಲಕ್ಷ್ಮಿ” ಎನ್ನುವ ಶೀಷಿಕೆ ಇತ್ತು. ಶ್ರೀಮಾತಾರವಿಂದ ಮಾರ್ಗದಲ್ಲಿ ಮಹೇಶ್ವರೀ, ಮಹಾಕಾಳಿ, ಮಹಾಲಕ್ಷ್ಮಿ ಹಾಗೂ ಮಹಾಸರಸ್ವತಿ ಎನ್ನುವ ನಾಲ್ಕು ಶಕ್ತಿಗಳಿಗೆ ಪ್ರಾರ್ಥನೆ ಸಲ್ಲಿಸಲಾಗುತ್ತಿದೆ. ಈ ಹಾದಿಯಲ್ಲಿ ಮಹಾಲಕ್ಷ್ಮಿಗೆ ಸಲ್ಲಿಸಿದ ಪ್ರಾರ್ಥನೆ ಇದು]

(ಕೃಪೆ: “ಚೈತ್ಯಾಲಯ”, ಸಂಪಾದಕರು: ವಾಮನ ಬೇಂದ್ರೆ. ಪ್ರಕಾಶನ: ಶ್ರೀಮಾತಾ ಪ್ರಕಾಶನ, ಹುಬ್ಬಳ್ಳಿ–೩೦)

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.